ಆಗಸ್ಟ್ 24, 2025

41ನೇ ವರ್ಷದಲ್ಲಿ

www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೊಲೀಸ್ ನ್ಯೂಸ್


1999

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ

ಬೆಲೆ : ₹20/-

## ದಿ ಲಾಸ್ಟ್ ಡೇ... ಆಫ್ ದಿ ಡೆವಿಲ್

# ಮಾದಪ್ಪನಿಗೆ ಮುಡಿ ಕೊಟ್ಟು ಆಂದಿಯೂರ್ ಜಾತ್ರೆಯಲ್ಲಿ ಕುದುರೆ ಖರೀದಿ... ಅಷ್ಟರಲ್ಲೇ ಬಂತಲ್ಲ ಫೋನ್ ಕಾಲ್!



ಬೇಲ್ ರದ್ದಾಗಿದೆ!



## ಜೈಲ್ ಡಿಜಿಪಿ ಮಾಲಿನಿಗೆ ದರ್ಶನ್ ಕಡೆಯಿಂದ 2 ಕೋಟಿ ಸಂದಾಯ?!



# ಬಿಜೆಪಿ ಮತಗಳ್ಳತನ ವಿರುದ್ಧ ಕಾಂಗ್ರೆಸ್ ವಿಫಲ ಹೋರಾಟ?




ಬಿಜೆಪಿ ಮತ ಕಳ್ಳತನ ಮಾಡಿದೆ ಎಂದು ರಾಹುಲ್ ಗಾಂಧಿ ಸ್ಫೋಟಿಸಿದ ಬಾಂಬ್ ಯಾವುದೇ ಆಧಾರ ಅಧ್ಯಯನವಿಲ್ಲದೆ ಮಾಡಿರುವ ಆರೋಪ ಎಂದು ಬಿಜೆಪಿ ಆರೋಪಿಸುತ್ತಿದ್ದು, ಇದು ಷಡ್ಯಂತರದ ಒಂದು ಭಾಗವಾಗಿದೆ ಎನ್ನಲಾಗಿದೆ? ನಿಮಗೇ ಗೊತ್ತಲ್ಲ, ಮೊನ್ನೆ ಮೊನ್ನೆ ರಾಹುಲ್ ಗಾಂಧಿ ನೇತೃತ್ವದಲ್ಲಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ದೊಡ್ಡ ರ್‍ಯಾಲಿಯೇ ನಡೆಯಿತು. ಜೊತೆಗೆ, ಚುನಾವಣಾ ಆಯೋಗದ ವಿರುದ್ಧ ನಾನು ಹೊರ ಹಾಕುವ ಮಾಹಿತಿಯು ಅಣುಬಾಂಬ್ ಸ್ಫೋಟದಂತೆ ಇರುವುದು ಎಂದು ಸಂಸತ್ತಿನ ಆವರಣದಲ್ಲಿ ರಾಹುಲ್ ಗಾಂಧಿಯವರು ಘರ್ಜಿಸಿ, ತಮ್ಮ ಸ್ಫೋಟಕ ಹೇಳಿಕೆಯಿಂದ ದೇಶದಲ್ಲಿ ತಲ್ಲಣ ಸೃಷ್ಟಿಸಿದ್ದರು. ಆದರೀಗ ಅವರ ಕಲ್ಪನೆಯ ಅಣುಬಾಂಬ್ ಠುಸ್ ಪಟಾಕಿ ಎಂಬುದು ಬಹುತೇಕ ಖಚಿತ ವಾದಂತಿದೆ!

ಬೆಂಗಳೂರು ಸೆಂಟ್ರಲ್ ಲೋಕಸಭಾ ಕ್ಷೇತ್ರದ ಭಾಗವಾದ ಮಹದೇವಪುರ ವಿಧಾನಸಭೆಯ ಮತದಾರರ



ಪಟ್ಟಿಯಲ್ಲಿ ಅವ್ಯವಹಾರ ನಡೆದಿದೆ. ಕಳೆದ ಆರು ತಿಂಗಳಿನಿಂದ ಮತದಾರರ ಪಟ್ಟಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅನೇಕ ಆಘಾತಕಾರಿ ವಿಷಯಗಳು ಬಯಲಾಗಿದೆ, ಇದನ್ನು ಸಾಕ್ಷಿ ಸಮೇತ ಸಾಬೀತುಪಡಿಸುವೆ ಎಂದು ಘೋಷಿಸಿದರು. ಚುನಾವಣಾ ಆಯೋಗವು ಬಿಜೆಪಿಯ ಕೈಗೊಂಬೆಯಾಗಿ ವರ್ತಿಸಿ ಮತದಾರ ಪಟ್ಟಿಯಲ್ಲಿ ಭಾರೀ ವಂಚನೆ ನಡೆಸಿದೆ ಎಂದು ಸಂವಿಧಾನ ಸಂಸ್ಥೆಯನ್ನು ವಂಚಕರು ಎಂದು ಹೀಗೆಳೆಯುತ್ತಾರೆ!

ಆಗಸ್ಟ್ 7ರಂದು ದೆಹಲಿಯಲ್ಲಿ ನಡೆಸಿದ ಬಹು ನಿರೀಕ್ಷಿತ ಪತ್ರಿಕಾಗೋಷ್ಠಿಯಲ್ಲಿ ರಾಹುಲ್, ಮಹದೇವಪುರ ವಿಧಾನಸಭೆಯ ಮತದಾರ ಪಟ್ಟಿಯಲ್ಲಿ ಒಂದು ಲಕ್ಷ ಇನ್ನೂರೈವತ್ತು ನಕಲಿ ಮತದಾರರನ್ನು ಸೇರ್ಪಡೆ ಮಾಡಲಾಗಿದೆ. ಇದರಿಂದ ಕಾಂಗ್ರೆಸ್ ಅಭ್ಯರ್ಥಿ 35 ಸಾವಿರ ಮತದಿಂದ ಸೋಲಬೇಕಾಯಿತು ಎಂದು ಐದು ಬಗೆಯ ಲೋಪಗಳನ್ನು ಪಟ್ಟಿ ಮಾಡಿದರು.

(1) ನಕಲಿ ಮತದಾರರು-11,965, (2) ನಕಲಿ ಮತ್ತು ಅಮಾನ್ಯ ವಿಳಾಸಗಳು-40,009, (3) ಒಂದೇ ವಿಳಾಸದಲ್ಲಿ ಹೆಚ್ಚು ಮತ-10,452, (4) ಅಮಾನ್ಯ ಫೋಟೋಗಳು-4,132, (5) ಫಾರಂ ದುರುಪಯೋಗ-33,692

ರಾಹುಲ್ ಗಾಂಧಿಯವರು ಮಹದೇವಪುರ ಮೀಸಲು ಕ್ಷೇತ್ರವನ್ನು ತಮ್ಮ ಪ್ರಯೋಗಕ್ಕೆ ಆಯ್ಕೆ ಮಾಡಿಕೊಂಡಿದ್ದು ಆಶ್ಚರ್ಯವಾಗಿದೆ! ಮತ್ತು ಈ ಕ್ಷೇತ್ರದಲ್ಲಿ ಮೂರು ಬಾರಿ ಶಾಸಕರಾಗಿದ್ದ ಅರವಿಂದ ಲಿಂಬಾವಳಿಯವರು ನಾಲ್ಕನೆಯ ಬಾರಿ ತಮ್ಮ ಪತ್ನಿಯನ್ನು ಗೆಲ್ಲಿಸಿ ಕೊಂಡಿರುವ ಹಿಡಿತ ಅವರಿಗೆ ಕ್ಷೇತ್ರದ ಮೇಲಿರುವಾಗ ಆರೋಪ ಮಾಡುವವರು ಹೆಚ್ಚಿನ ಎಚ್ಚರಿಕೆ ವಹಿಸಬೇಕಾಗಿತ್ತು.

ದೆಹಲಿಯಲ್ಲಿ ಕುಳಿತು ತಮ್ಮ ಸಂಶೋಧನಾ ತಂಡಕ್ಕೆ ಮತದಾರ ಪಟ್ಟಿಯನ್ನು ನೀಡಿ ಅದರಲ್ಲಿರುವ ತಪ್ಪುಗಳನ್ನು ಪತ್ತೆ ಹಚ್ಚಿ ಎಂದು ತಾಕೀತು ಮಾಡಿದ್ದಾರೆ. ನೆಲಮಟ್ಟದ ವಾಸ್ತವಿಕತೆಯ ಅರಿವಿಲ್ಲದೆ ಅಥವಾ ತಪ್ಪು ಮಾಹಿತಿಯನ್ನು ನೀಡಿ ಜನರನ್ನು ದಾರಿ ತಪ್ಪಿಸುವ ಸಲುವಾಗಿಯೇ ಮತದಾರರ ಪಟ್ಟಿಯಲ್ಲಿ ನಕಲಿ ಮತದಾರರನ್ನು ಸೇರಿಸಿ ಬಿಜೆಪಿ ಚುನಾವಣೆ ಗೆಲ್ಲುತ್ತಿದೆ ಎಂದು ಅಪಪ್ರಚಾರ ಕೈಗೊಳ್ಳುವ ತಂತ್ರಗಾರಿಕೆಯನ್ನು ರಾಹುಲ್‌ರವರು ಅನುಸರಿಸುತ್ತಿದ್ದಾರೆ.

ಮಹದೇವಪುರ ಕ್ಷೇತ್ರದಲ್ಲಿ 11,965 ನಕಲಿ ಮತದಾರರಿದ್ದಾರೆ, ಒಂದಕ್ಕಿಂತ ಹೆಚ್ಚು ಕಡೆ ಮತದಾರರಾಗಿ ನೋಂದಣಿ ಮಾಡಿದ್ದಾರೆ ಎಂಬುದು ಇವರ ಮೊದಲ ಆರೋಪ. ಇವರ ಸಂಶೋಧನೆಯ ಪ್ರಕಾರ ಅವರೆಲ್ಲರೂ ಬಿಜೆಪಿಗೆ ಓಟು ಮಾಡಿದ್ದಾರೆ ಎಂದು ಪವಾಡದ ಹಾಗೆ ಪತ್ತೆ ಹಚ್ಚಿದ್ದಾರೆ. ವಾಸ್ತವವೇನಂದರೆ, ಒಬ್ಬ ವ್ಯಕ್ತಿ ಒಂದಕ್ಕಿಂತ ಹೆಚ್ಚು ಕಡೆ ನೋಂದಾಯಿಸಿರುವುದು ಹೊಸದಲ್ಲ, ವರ್ಗಾವಣೆಯ ಕೆಲಸದಲ್ಲಿರುವವರು, ಮನೆ ಅಥವಾ ಊರು ಬದಲಾಯಿಸಿದರೆ ಹೋದ ಸ್ಥಳದಲ್ಲಿ ಮತ್ತೇ ನೊಂದಣಿ ಮಾಡಿಸುವುದರಿಂದ ಇವರ ಹೆಸರು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನೊಂದಣಿಯಾಗಿರುತ್ತದೆ. ಈ ರೀತಿ ವಿಳಾಸ ಬದಲಾಯಿಸುವವರು ಫಾರಂ 7 ಸಲ್ಲಿಸಿ ತಮ್ಮ ಹೆಸರನ್ನು ಕೈ ಬಿಡಲು ಕೋರಬೇಕು. ಆದರೆ ಬಹುತೇಕರು ಅರ್ಜಿ ಸಲ್ಲಿಸುವ ಗೋಜಿಗೆ ಹೋಗುವುದಿಲ್ಲ, ಹೀಗಾಗಿ ಅವರ ಹೆಸರು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ನೋಂದಾವಣೆಯಾಗಿರುತ್ತದೆ. ಇವರು ಒಂದಕ್ಕಿಂತ ಹೆಚ್ಚು ಸ್ಥಳದಲ್ಲಿ ಮತದಾನ ಮಾಡಿದ್ದಾರೆ ಎಂದು ರುಜುವಾತು ಪಡಿಸಿದಾಗ ಅವರ ಮೇಲೆ ಚುನಾವಣಾ ಆಯೋಗ ಕ್ರಮ ಜರುಗಿಸಬಹುದು ಆದರೆ ರಾಹುಲ್ ತಮ್ಮ ಆರೋಪ ದೃಢಪಡಿಸಲು ಯಾವ ಸಾಕ್ಷ್ಯವನ್ನು ಈತನಕ ನೀಡಿಲ್ಲ.

ನಕಲಿ ಮತ್ತು ಅಮಾನ್ಯ ವಿಳಾಸಗಳು ಎಂದು 40 ಸಾವಿರ ಮತಗಳು ಎಂದು ಲೆಕ್ಕ ಹಾಕಿದ್ದಾರೆ. ಮತದಾರರ ಪಟ್ಟಿಯಲ್ಲಿ ಪುಟಗಟ್ಟಲೆ ಮನೆಗಳ ಸಂಖ್ಯೆಯನ್ನು 0 ಎಂದು ತಪ್ಪಾಗಿ ನಮೂದಿಸಲಾಗಿದೆ ಎಂದು ಎರಡನೆಯ ಆರೋಪವು. ಇದು ಕೇವಲ ಮಹದೇವಪುರ ಕ್ಷೇತ್ರಕ್ಕೆ



ಸೀಮಿತವಾಗಿಲ್ಲ, ಸಿದ್ದರಾಮಯ್ಯನವರ ವರುಣಾ ಡಿ.ಕೆ. ಶಿವಕುಮಾರ್ ರವರ ಕನಕಪುರ, ಮಸ್ಕಿ, ಸೊಂಡೂರು ಹೀಗೆ ಹಲವಾರು ಕ್ಷೇತ್ರಗಳಲ್ಲಿ ಇದನ್ನು ಕಾಣಬಹುದು. ಇದರರ್ಥ ಈ ವಿಳಾಸಗಳು ನಕಲಿಯೆಂದಲ್ಲಾ ಅಲ್ಲಿ ಮನೆಗಳಿವೆ ಮತ್ತು ಆ ಮನೆಯಲ್ಲಿ ಮತದಾರರ ಪಟ್ಟಿಯಲ್ಲಿರುವವರು ವಾಸ ಮಾಡುತ್ತಿದ್ದಾರೆ. ರಾಹುಲ್ ಗಾಂಧಿಯವರು ಇಂತಹ ವಿಳಾಸದ ಮನೆಗಳ ತಪಾಸಣೆ ಮಾಡಿಸಿ ಆ ಮನೆಯ ವಿಳಾಸದಲ್ಲಿ ಮತದಾರರು ಇದ್ದಾರಾ? ಅಥವಾ ಖಾಲಿ ನಿವೇಶನವಾ ಎಂದು ಖಚಿತ ಪಡಿಸಿಕೊಳ್ಳಬೇಕಿತ್ತು. ವಾಸ್ತವಿಕತೆಯನ್ನು ಅರಿಯದೆ ಸೊನ್ನೆ ಎಂದು ನಮೂದಿಸಿರುವ ಮನೆಗಳು ನಕಲಿ ಮತದಾರರು ಎಂದು ಹಣೆಪಟ್ಟಿ ಕಟ್ಟಿಬಿಟ್ಟರು.

ಒಂದೇ ವಿಳಾಸದಲ್ಲಿ 10,452 ಕ್ಕೂ ಹೆಚ್ಚು ಮತವಿದೆ ಎಂಬ ಆರೋಪ ಮತ್ತೇ ನೆಲಮಟ್ಟದಲ್ಲಿ ಸೂಕ್ತ ಮಾಹಿತಿ ಪಡೆಯದೆ ಮಾಡಿರುವ ಆರೋಪವು. ಮುನಿರೆಡ್ಡಿ ಗಾರ್ಡನ್ ಮನೆಯ ಸಂಖ್ಯೆ 35 ಇಂದು ದೇಶದಲ್ಲಿ ಎಲ್ಲಾ ಚಿರಪರಿಚಿತವಾಗಿದೆ. ಈ ಮನೆಯ ಹೆಸರಲ್ಲಿ 80 ಮತಗಳು ನೋಂದಣಿಯಾಗಿದೆ ಎಂಬ ಗಂಭೀರ ಆರೋಪ ರಾಹುಲ್ ಗಾಂಧಿಯವರು ಮಾಡುತ್ತಾರೆ. ಒಮ್ಮೆ ಇದರ ಹಿನ್ನಲೆಯ ತನಿಖೆ ಮಾಡಿದ್ದರೆ ಸತ್ಯ ಅವರಿಗೆ ತಿಳಿಯುತ್ತಿತ್ತು. ಆ ಮನೆಯಲ್ಲಿ ಕಳೆದ ಹತ್ತು ವರ್ಷದಿಂದ ಬಾಡಿಗೆಗೆ ಬಂದವರು ತಮ್ಮ ಹೆಸರನ್ನು ಮತದಾರರ ಪಟ್ಟಿಯಲ್ಲಿ ಸೇರ್ಪಡೆ ಮಾಡಿಕೊಂಡಿರುತ್ತಾರೆ. ಮನೆ ಬಿಟ್ಟು ಬೇರೆಡೆ ಹೋದಾಗ ಹೊಸಬರು ಬಾಡಿಗೆಗೆ ಬಂದಾಗ ಅವರು ಅದೇ ವಿಳಾಸದಲ್ಲಿ ಮತದಾರ ಪಟ್ಟಿಯಲ್ಲಿ ನೊಂದಣಿ ಮಾಡಿಸುತ್ತಿದ್ದರು. ಮನೆಬಿಟ್ಟು ಹೋಗುವವರು ತಮ್ಮ ಹೆಸರನ್ನು ಪಟ್ಟಿಯಿಂದ ತೆಗೆಯಲು ಅರ್ಜಿ ಕೊಡುತ್ತಿರಲಿಲ್ಲ, ಹೀಗಾಗಿ ಒಂದೇ ವಿಳಾಸದಲ್ಲಿ ಎಂಭತ್ತು ಮತದಾರರ ನೊಂದಣಿಯಾಗಿದ್ದಾರೆ. ವಾಸ್ತವವಾಗಿ ಸದ್ಯ ವಾಸವಿರುವ ಆರು ಜನ ಮಾತ್ರ ಮತದಾನ ಮಾಡಿರುವುದು. ಗಾಂಧಿನಗರ, ಬಿಟಿಎಂ ಲೇಔಟ್ ವಿಧಾನಸಭಾ ಕ್ಷೇತ್ರದಲ್ಲಿಯೂ ಇಂತಹ ಪ್ರಕರಣಗಳು ದೊರೆಯುತ್ತದೆ. ಪಾಲಿಕೆಯ ಅಧಿಕಾರಿಗಳು ಮತ್ತು ರಾಜಕೀಯ ಪಕ್ಷದ ಕಾರ್ಯಕರ್ತರು ಸರಿಯಾಗಿ ಕೆಲಸ ಮಾಡಿದ್ದರೆ ಎಂದೋ ವಾಸವಿಲ್ಲದ ಮತದಾರರು ಪಟ್ಟಿಯಿಂದ ಹೊರಗಿರುತ್ತಿದ್ದರು.



EC Gyanesh Kumar appointed as the 'Chief Election Commissioner of India'


RAJIV KUMAR
CHIEF ELECTION COMMISSIONER

ನನ್ನ ಸ್ನೇಹಿತರೊಬ್ಬರು ತಮ್ಮ ಮತ ಮೂರು ಕಡೆ ಈಗಲೂ ಇದೆ ಕಾರಣ ವರ್ಗಾವಣೆಯಾಗಿ ಹೋದ ಊರಲ್ಲಿ ಮತದಾರರ ಪಟ್ಟಿಗೆ ಸೇರ್ಪಡೆಯಾಗುತ್ತಿದ್ದೆ ಫಾರಂ7 ಸಲ್ಲಿಸಿ ನನ್ನ ಹೆಸರು ತೆಗೆಯಲು ಕೋರುವ ತಾಪತ್ರಯಕ್ಕೆ ಹೋಗಿಲ್ಲ ಎನ್ನುತ್ತಾರೆ. ಮತಪಟ್ಟಿಯಿಂದ ಹೆಸರು ತೆಗೆಯುವ ಪ್ರಕ್ರಿಯೆ ಸರಳೀಕರಣವಾಗಿಲ್ಲ, ಹೀಗಾಗಿ ಇದರ ಬಗ್ಗೆ ಯಾರು ತಲೆಕೆಡಿಸಿಕೊಳ್ಳುವುದಿಲ್ಲ, ಇದಕ್ಕೆ ಪರಿಹಾರವೆಂದರೆ ಆಧಾರ್ ಸಂಖ್ಯೆಯನ್ನು ಓಟರ್ ಐಡಿಯೊಂದಿಗೆ ಜೋಡಣೆ ಮಾಡಿದರೆ ಸಾವಿರಾರು ಮತದಾರರು ಪಟ್ಟಿಯಿಂದ ಹೊರಹೋಗುತ್ತಾರೆ.

ಮಹದೇವಪುರದ ಐಟಿ ಕ್ಷೇತ್ರದ ಮತದಾರರು ಒಂದಕ್ಕಿಂತ ಹೆಚ್ಚು ಕಡೆ ಓಟು ಮಾಡಿದ್ದಾರೆ ಎಂದರೆ ಅದು ನಂಬಲಾಗದ ವಿಷಯ. ತಮ್ಮ ಭವಿಷ್ಯ ಪಣಕ್ಕಿಟ್ಟು ನಕಲಿ ಓಟು ಯಾರೂ ಮಾಡುವುದಿಲ್ಲ. ಒಮ್ಮೆ ಬಂದು ಮತ ಹಾಕಿದರೆ ಸಾಕಾಗಿದೆ ಇನ್ನೂ ಎರಡು ಮೂರು ಬಾರಿ ಓಟು ಹಾಕಿ ಸಿಕ್ಕಿ ಬಿದ್ದರೆ ಜೈಲಿಗೆ ಹೋಗುವ ಕೆಲಸ ಮಾಡುವಷ್ಟು ಅವರು ಮೂರ್ಖರಲ್ಲ. ವಲಸೆ ಬಂದ ಕಾರ್ಮಿಕರು ತಮ್ಮ ಜೀವನ ನಿರ್ವಹಣೆಯಾದರೆ ಸಾಕಪ್ಪ ಎಂದು ಇರುತ್ತಾರೆ ಅವರು ಯಾರನ್ನೊ ಗೆಲ್ಲಿಸಲು ತಮ್ಮ ಭವಿಷ್ಯವನ್ನು ಅಪಾಯಕ್ಕೆ ತಳ್ಳುತ್ತಾರೆ ಎಂದು ರಾಹುಲ್ ಗಾಂಧಿ ಮಾತ್ರ ನಂಬಬೇಕು.

ಎರಡೆರೆಡು ಕಡೆ ನೊಂದಣಿಯಾಗಿರುವುದು, ಮನೆಯ ವಿಳಾಸವು ಸೊನ್ನೆ ಎಂದು ತಪ್ಪಾಗಿ ನಮೂದಿಸಿರುವುದು ಮತದಾರ ಪಟ್ಟಿಯನ್ನು ಸಿದ್ದಪಡಿಸುವ ಅಧಿಕಾರಿಗಳ ಕರ್ತವ್ಯ ಲೋಪದಿಂದ ಆಗಿರುವುದೇ ವಿನಹ ಯಾವುದೇ ರಾಜಕೀಯ ಪಕ್ಷದ ಕೈವಾಡವಿರಲು ಸಾಧ್ಯವೇ ಇಲ್ಲ, ಆದಾಗ್ಯೂ ಸರ್ಕಾರ ಚುನಾವಣೆಯನ್ನು ವಂಚನೆಯಿಂದ ಗೆಲ್ಲುತ್ತಿದೆ ಎಂದು ಜನರನ್ನು ನಂಬಿಸುವ ಸಲುವಾಗಿ ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ.

ಶಗುನ್ ರಾಣಿ ಎಂಬ 70 ವರ್ಷದ ಹಿರಿಯ ನಾಗರಿಕರ ಹೆಸರು ಮೂರು ಕಡೆ ಇದೆ ಮತ್ತು ಎರಡು ಕಡೆಗಳಲ್ಲಿ ಓಟು ಮಾಡಿದ್ದಾರೆ ಎಂದು ಫೋಟೊ ಶಾಪ್‌ಮಾಡಿದ ಚಿತ್ರವನ್ನು ಬಳಸಿ ಆಕೆಗೆ ಅಪಮಾನ ಮಾಡಿದರು. ಹಲವು ಮತದಾರರ ವಿವರನ್ನು ಹೇಳಿ ರಾಹುಲ್ ರವರು ಆ ಅಮಾಯಕರಿಗೆ ತೀವ್ರ ಮುಜುಗರ ಉಂಟು ಮಾಡಿದ್ದಾರೆ. ಪ್ರಾಯಶ: ಮಾನಸಿಕವಾಗಿ ಹಿಂಸೆಗೊಳಗಾಗಿರುವ ಇವರಲ್ಲಿ ಯಾರಾದರೊಬ್ಬರು ನ್ಯಾಯಾಲಯದ ಮೆಟ್ಟಿಲು ಹತ್ತಿದರೆ ರಾಹುಲ್ ಸಂಕಷ್ಟಕ್ಕೆ ಸಿಲುಕುವುದು ನಿಶ್ಚಿತ!

ರಾಹುಲ್‌ರವರು ಮತದಾರರ ಪಟ್ಟಿಯಲ್ಲಿ 4,132 ಜನರ ಫೋಟೊ ಚಿಕ್ಕದಿರುವುದನ್ನು ಅಮಾನ್ಯ ಫೋಟೊ ಎಂದು ನಿರ್ಧರಿಸಿ ಬಿಟ್ಟಿದ್ದಾರೆ. ಮತದಾನದ ದಿನ ಡ್ರೈವಿಂಗ್ ಲೈಸನ್ಸ್ ಅಥವಾ ಆಧಾರ್ ಕಾರ್ಡ್ ಮುಂತಾದ ಚುನಾವಣಾ ಆಯೋಗ ತಿಳಿಸಿರುವ 32 ಬಗೆಯ ಗುರುತಿನ ಚೀಟಿ ತೋರಿಸಬಹುದು ಆದ್ದರಿಂದ ಆ ಆರೋಪವು ಕೂಡಾ ಬುಡವಿಲ್ಲದ್ದಾಗಿದೆ.

2014, 2019 ಮತ್ತು 2024ರಲ್ಲಿ ಲೋಕಸಭಾ ಚುನಾವಣೆಗಳು ನಡೆದಾಗ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿತ್ತು. ರಾಜ್ಯ ಸರ್ಕಾರದ ಸಿಬ್ಬಂದಿಗಳೇ ಮತದಾರರ ಪಟ್ಟಿಯನ್ನು ಸಿದ್ದಪಡಿಸುವವರು ಎಂಬ ಪ್ರಾಥಮಿಕ ಮಾಹಿತಿಯು ರಾಹುಲ್ ರವರಿಗೆ ತಿಳಿದಿಲ್ಲವಾ? ಮತದಾರರ ಪಟ್ಟಿಯಲ್ಲಿ ದೋಷವಿದ್ದರೆ ಅದಕ್ಕೆ ಹೊಣೆ ಅಂದಿನ ರಾಜ್ಯ ಸರ್ಕಾರ ಹೊರಬೇಕು ಆದರೆ ಇದರ ಕುರಿತು ಸತ್ಯ ನುಡಿದ ಸಚಿವ ರಾಜಣ್ಣನವರಿಗೆ ಸಂಪುಟದಿಂದ ವಜಾ ಮಾಡಲಾಗಿದೆ!

ಚುನಾವಣಾ ಆಯೋಗದ ಮೇಲೆ ಜನರ ವಿಶ್ವಾಸ ಹಾಳು ಮಾಡುವ ನಿರಂತರ ಪ್ರಯತ್ನ ನಡೆಯುತ್ತಿರೋದು ಕಣ್ಮುಂದೆ ಗೋಚರಿಸುತ್ತಿದೆ. ಚುನಾವಣೆಯಲ್ಲಿ ಬಿಜೆಪಿ ಮತ ವಂಚನೆಯ ಮೂಲಕ ಗೆಲ್ಲುತ್ತಿರುವುದು ಎಂದು ನಂಬಿಸಲು ಕಾಂಗ್ರೆಸ್ ಶಕ್ತಿ ಮೀರಿ ಪ್ರಯತ್ನಿಸುತ್ತಿರುವುದು ಸುಸ್ಪಷ್ಟ. ತಮ್ಮ ಉದ್ದೇಶ ಸಾಧನೆಗೆ ಸಂವಿಧಾನ ಬದ್ದ ಸಂಸ್ಥೆಯನ್ನು

☞ 14

# ಮಾದಪ್ಪನಿಗೆ ಮುಡಿ ಕೊಟ್ಟು ಆಂದಿಯೂರ್ ಜಾತ್ರೆಯಲ್ಲಿ ಕುದುರೆ ಖರೀದಿ ಮಾಡುವಾಗಲೇ ಬಂತಲ್ಲ ಫೋನ್ ಕಾಲ್... ಬಾಸ್, ನಿಮ್ಮ ಬೇಲ್ ರದ್ದಾಗಿದೆ!

ರೇಣುಕಾಸ್ವಾಮಿ ಮರ್ಡರ್‌ಕೇಸ್‌ನಲ್ಲಿ ಬಂಧಿತನಾಗಿ ಬಳ್ಳಾರಿ ಜೈಲ್‌ನಲ್ಲಿದ್ದ ನಟ ದರ್ಶನ್, ಯಾವ ಕಾರಣ ಕೊಟ್ಟು ಜಾಮೀನು ಗಿಟ್ಟಿಸಿಕೊಂಡು ಹೊರಗಡೆ





ಬಂದನೋ, ಅದನ್ನು ಮರೆತು ಬಿಂದಾಸ್ ಆಗಿ ಲೈಫ್ ಎಂಜಾಯ್ ಮಾಡತೊಡಗಿದಾಗಲೇ ನಿಕ್ಕಿಯಾಗಿತ್ತು, ಇವನ ಬೇಲ್ ಶೀಘ್ರದಲ್ಲೇ ಕ್ಯಾನ್ಸಲ್ ಆಗುತ್ತೆ ಅಂತ!

**✍ ಹೆಚ್.ಕೆ. ಮಹದೇವ್**

ಹೀಗೆ ಖಚಿತವಾಗಿ ಹೇಳಲು ಇನ್ನೊಂದು ಕಾರಣವೂ ಇತ್ತು. ಅದೇನೆಂದರೆ, ದರ್ಶನ್ ತನ್ನ ಫ್ಯಾಮಿಲಿ ಜೊತೆ ಪ್ರವಾಸ ಮಾಡಿದ್ದು, ಡೆವಿಲ್ ಟೀಮ್ ಜೊತೆ ಫಾರಿನ್‌ನಲ್ಲಿ ಸುತ್ತಾಡಿದ್ದು, ಎಣ್ಣೆ ಹೊಡೆದದ್ದು, ಕುಂತಿದ್ದು ನಿಂತಿದ್ದು ಎಲ್ಲಾ.... ಅವರವರ ಮೊಬೈಲ್ ನಿಂದಲೇ ಶೂಟಿಂಗ್ ಆಗಿ, ಫೇಸ್ಬುಕ್ಕು ವಾಟ್ಸಪ್ಪು ಇನ್ಸ್ಟಾ... ಮುಂತಾದ ಕಡೆ ಮಿಂಚುತ್ತಿತ್ತು!! ಇದನ್ನೆಲ್ಲ ರೇಣುಕಾಸ್ವಾಮಿ ಕೊಲೆ ಕೇಸ್ ತನಿಖಾಧಿಕಾರಿಗಳು ನೀಟಾಗಿ ಕಾಪಿ ಮಾಡಿಟ್ಟುಕೊಂಡು ಮಾನ್ಯ ಸುಪ್ರೀಂ ಕೋರ್ಟ್‌ಗೆ ವರದಿ ಮಾಡಲು 'ಟೈಂ'ಗಾಗಿ ಕಾಯುತ್ತಲೇ ಇದ್ದರು! ಇನ್ನೊಂದೆಡೆಯಲ್ಲಿ, ಪವಿತ್ರ ಗೌಡಳ ಪೂಜೆ ಪುನಸ್ಕಾರ, ದರ್ಶನ್ ಹೆಸರಲ್ಲಿ ಅರ್ಚನೆ ಇತ್ಯಾದಿಗಳನ್ನು ರೆಕಾರ್ಡ್ ಮಾಡಲಾಗುತ್ತಿತ್ತು! ಕಡೆಗೆ, ದರ್ಶನ್ ಸೇರಿದಂತೆ ರೇಣುಕಾಸ್ವಾಮಿ ಕೊಲೆ ಪ್ರಕರಣದ ಇನ್ನೂ ಕೆಲವು ಖತರ್ನಾಕ್ ಆರೋಪಿಗಳ ಚಲನವಲನ ಗಮನಿಸಿ, ಏಳು ಮಂದಿಯ ಜಾಮೀನು ರದ್ದು ಕೋರಿ ಸರ್ಕಾರದ ಮೂಲಕ ಮಾನ್ಯ ಸುಪ್ರೀಂಕೋರ್ಟ್‌ಗೆ ಅರ್ಜಿ ಸಲ್ಲಿಸಿಬಿಟ್ಟರು!

ಈಗ್ಗೆ ಹದಿನೈದು ದಿನಗಳ ಹಿಂದೆ ಈ ಫೈಲ್ ನೋಡಿ ವಿಚಾರಣೆ ನಡೆಸಿದ್ದ ಮಾನ್ಯ ಸುಪ್ರೀಂಕೋರ್ಟ್ ದ್ವಿಸದಸ್ಯ ಪೀಠವು, ದರ್ಶನ್, ಪವಿತ್ರ ಗೌಡ ಹಾಗೂ ಇತರೆ ಐದು ಮಂದಿ ಆರೋಪಿಗಳಿಗೆ ಜಾಮೀನು ನೀಡುವ ವಿಚಾರದಲ್ಲಿ ಹೈಕೋರ್ಟ್ ಆತುರ ತೋರಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಒಂದು ವಾರದೊಳಗೆ ಕರ್ನಾಟಕ ಹೈಕೋರ್ಟ್ ಈ ಬಗ್ಗೆ ಸಮರ್ಥನೆ ನೀಡಬೇಕು ಎಂದು ಅದೇಶಿಸಿತ್ತು! ಈ ಹಿನ್ನಲೆಯಲ್ಲಿ ಮಾನ್ಯ ಹೈಕೋರ್ಟ್, ದರ್ಶನ್ ಮತ್ತು ಟೀಮ್‌ನ ಆರು ಮಂದಿಗೆ ತಾನು ಯಾವ ಮಾನದಂಡದ ಮೇರೆಗೆ ಜಾಮೀನು ನೀಡಿದೆ ಎಂಬುದನ್ನು ಸ್ಪಷ್ಟವಾಗಿ ಮಾನ್ಯ ಸುಪ್ರೀಂ ಕೋರ್ಟ್ ಪೀಠಕ್ಕೆ ವರದಿ ನೀಡಿತ್ತು!

ಬೆನ್ನು ನೋವು, ಖಾಯಿಲೆ ಕಸಾಯಿಗೆ ತುರ್ತು ಚಿಕಿತ್ಸೆ ಅಗತ್ಯವಿದೆ... ಎಂಬ ಆರೋಪಿಗಳ ಪರ ನ್ಯಾಯವಾದಿಗಳ ಅರ್ಜಿಗೆ ಮನ್ನಣೆ ಕೊಟ್ಟು ಜಾಮೀನು ನೀಡಿದ್ದು ಸ್ಪಷ್ಟವಾಗಿತ್ತು! ಆದರೆ, ದರ್ಶನ್ ಬೆನ್ನಿಗೆ ಆಪರೇಷನ್ ಮಾಡಿಸಿಕೊಂಡನೇ?




ಇಲ್ಲಾ!! ಆತನೂ ಸೇರಿದಂತೆ ಕೆಲವರು ನ್ಯಾಯಕ್ಕೆ ಸೆಡ್ಡು ಹೊಡೆದು ಬಿಂದಾಸ್ ಲೈಫ್ ಎಂಜಾಯ್ ಮಾಡತೊಡಗಿದರು.

ಡಿಸಿಪಿ ಎಸ್. ಗಿರೀಶ್, ಎಸಿಪಿ ಚಂದನ್‌ಕುಮಾರ್‌ತಮ್ಮ ಪಾಡಿಗೆ ತಾವು ಪೊಲೀಸ್ ಡ್ಯೂಟಿ ಮಾಡಿ, ಸರ್ಕಾರಕ್ಕೆ ವರದಿ ಸಲ್ಲಿಸಿ, ಸರ್ಕಾರದ ಮೂಲಕವೇ ಮಾನ್ಯ ಸುಪ್ರೀಂ ಕೋರ್ಟ್ ಕದ ತಟ್ಟಿದ್ದರು!!



ಮೃತ ರೇಣುಕಾಸ್ವಾಮಿ ದರ್ಶನ್ ಅಭಿಮಾನಿಯಾಗಿದ್ದು, ಅವರ ಜೊತೆ ಲಿವ್-ಇನ್ ರಿಲೇಷನ್ ಶಿಪ್‌ಸಂಬಂಧದಲ್ಲಿದ್ದ ಪವಿತ್ರ ಗೌಡಗೆ ಇನ್‌ಸ್ಟಾಗ್ರಾಂನಲ್ಲಿ ಅವಹೇಳನಕಾರಿ ಸಂದೇಶಗಳನ್ನು ಕಳುಹಿಸಿದ್ದ. ಇದರಿಂದ ರೇಣುಕಾಸ್ವಾಮಿಯನ್ನು ಅಪಹರಿಸಿ, ಪಟ್ಟಣಗೆರೆಯ ಶೆಡ್ ನಲ್ಲಿ ಕೊಲೆ ಮಾಡಲಾಯಿತು. ಅಪಹರಣದ ಸಮಯದಲ್ಲಿ ಮತ್ತು ಕೊಲೆ ನಡೆದ ಸ್ಥಳದಲ್ಲಿ ಆರೋಪಿಗಳು ಅಲ್ಲಿದ್ದರು ಎಂದು ತನಿಖೆಯಿಂದ ತಿಳಿದುಬಂದಿದೆ. ಪಟ್ಟಣಗೆರೆಯ ಶೆಡ್‌ಗೆ ಆರೋಪಿಗಳು, ಮೃತ ವ್ಯಕ್ತಿ ಪ್ರವೇಶಿಸುವುದನ್ನು ಐವರು ಸಾಕ್ಷಿಗಳು ನೋಡಿದ್ದಾರೆ.


ಕೊಲೆ ನಡೆದ ಸ್ಥಳದಿಂದ ಸಂಗ್ರಹಿಸಲಾದ ಮಣ್ಣಿನ ಮಾದರಿ ಮತ್ತು ಅ-2 ದರ್ಶನ್, ಎ-4 ರಾಘವೇಂದ್ರ, ಎ-5 ನಂದೀಶ್ ಮತ್ತು ಎ-11 ನಾಗರಾಜು ಅವರುಗಳ ಪಾದರಕ್ಷೆಗಳಿಂದ ಸಂಗ್ರಹಿಸಲಾದ ಮಣ್ಣಿನ ಮಾದರಿಗಳು ಹೊಂದಾಣಿಕೆಯಾಗುತ್ತವೆ. ಡಿಎನ್‌ಎ ವಿಶ್ಲೇಷಣೆಯಿಂದ ಮೃತ ರೇಣುಕಾಸ್ವಾಮಿ ರಕ್ತದ ಕಲೆಗಳು ಹಲವು ಆರೋಪಿ ಬಟ್ಟೆಗಳ ಮೇಲೆ ಕಂಡುಬಂದಿವೆ.

ಕೊಲೆ ನಡೆದ ಸಮಯದಲ್ಲಿ ಎ-1 ಪವಿತ್ರಾ ಗೌಡ ಮತ್ತು ಎ-2 ದರ್ಶನ್ ಇಬ್ಬರೂ ಸಕ್ರಿಯವಾಗಿ ಭಾಗಿಯಾಗಿದ್ದರು. ಇಂಥವರಿಗೆ ಹೈಕೋರ್ಟ್ ಜಾಮೀನು ನೀಡಿದ್ದು ಸರಿಯಾಗಿಲ್ಲ ಮತ್ತು ನಮ್ಮ ದಾಖಲೆಗಳಿಗೆ ವಿರುದ್ಧವಾಗಿದೆ. ಕೊಲೆ ಮಾಡಲು ಬಳಸಿದ ಆಯುಧಗಳು ಮಾರಕವಲ್ಲ ಎಂದು ಹೈಕೋರ್ಟ್ ಹೇಳಿರುವುದು ತಪ್ಪು, ಮೃತನ ಮೇಲಿನ ಗಾಯಗಳು ಇದನ್ನು ಸುಳ್ಳಾಗಿಸುತ್ತವೆ ಎಂದು ಸರ್ಕಾರದ ಪರವಾಗಿ ಸರ್ಕಾರಿ ವಕೀಲರು ವಾದಿಸಿದ್ದರು... ಈ 'ಸತ್ಯ'ವೇ ದರ್ಶನ್ ಮತ್ತು ಟೀಮ್ ಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ರದ್ದುಗೊಳಿಸಲು ಸಾಕಾಯಿತು!


**ಭಯ ಅನ್ನೋದೇ ಇಲ್ಲಾ!**

ದರ್ಶನ್‌ಗಾಗಲಿ, ಸಖಿ ಪವಿತ್ರಗೌಡಗಾಗಲಿ 'ಕಾನೂನು' 'ಕಾಯಿದೆ' ಅನ್ನೋ ಭಯನೇ ಇರಲಿಲ್ಲ ಕಣ್ರೀ.

☞ 5



ಡಿಸಿಪಿ ಎಸ್. ಗಿರೀಶ್



ಎಸಿಪಿ ಚಂದನ್‌ಕುಮಾರ್

## ಬಂಗಾರಿ ಯಾರೇ ನೀ ಬುಲ್ ಬುಲ್!

ಸೊಂಟ ನೋವು, ಅದರಿಂದಾಗಿ ಅವರಿಗೆ ಬ್ರೇನ್ ಹ್ಯಾಮರೇಜ್ ಆಗುವ ಸಾಧ್ಯತೆ ಇದೆ! ಅವರ ಜೀವನಕ್ಕೆ ಅರ್ಜೆಂಟ್ ಆಪರೇಶನ್ ಅಗತ್ಯ ಇದೆ!! ಎಂದೆಲ್ಲ ವಾದಿಸಿದ್ದ ಸೀನಿಯರ್‌ಲಾಯರ್ ಆವ್ರೇ? ಅವರು ಹೊರಗೆ ಬರುತ್ತಿದ್ದಂತೆ ಇದೆಲ್ಲಾ ಖಾಯಿಲೆ ಹೇಗೆ 'ಮಾಫಿ' ಅಗಿಬಿಟ್ಟಿತು?! .

ಮುಖ್ಯವಾಗಿ; ಹಿರಿಯ ವಕೀಲರು ವಾದಿಸುವ ಮೊದಲು ಆರೋಪಿಯಿಂದ ಎಂಥಾ ಡ್ರಾಮಾ ಮಾಡಿಸಿದ್ದರೆಂದರೆ, ಅರೆರೆರೆ! ಏನು ಬೆನ್ನು ನೋವು! ದೂರದಿಂದ ಕ್ಯಾಮೆರಾ ಕವರ್‌ಮಾಡಿ ಮೀಡಿಯಾದಲ್ಲಿ ಬರುತ್ತಿದೆ ಎನ್ನುವುದು ಗೊತ್ತಿದ್ದೇ ಜೈಲಿನ ಆವರಣದಲ್ಲಿ ಪುಟಗೋಸಿ ನಾಲ್ಕು ಕೆಜಿ ಬ್ಯಾಗನ್ನು ಹೊರಲಾರದೆ ಕಷ್ಟಪಟ್ಟು ಹೊತ್ತಂತೆ, ಬೆನ್ನಿಗೆ ಗೆಬರಿಕೊಳ್ಳುತ್ತಾ ಹೋಗಿದ್ದೇನು...??! (ಎಂಥಾ ಸೊಂಟ ನೋವಿದ್ದರೂ ಸಣ್ಣಪುಟ್ಟ ಕೈಚೀಲದಂತ ಭಾರ ನಮ್ಮಲ್ಲಿ ಯಾವನೂ ಸುಲಭಕ್ಕೆ ಹೊರುತ್ತಾನೆ. ಅದರೆ ಇದು ನಮ್ಮ ನ್ಯಾಯಾಲಗಳ ಗಮನಕ್ಕೆ ಬಂದಿರಲಿಲ್ಲ)

ಚಾಲೆಂಜಿಂಗ್ ಸ್ಟಾರ್‌ದು ಏನು ಆಕ್ಟಿಂಗ್? ಆದರೆ, ಬೇಲ್ ಮಾಡಿಸಿಕೊಂಡು ಹೊರಗೆ ಬರ್ತಿದ್ದಂಗೆ ಎಲ್ಲವೂ ಮಾಯ!! ವಿದೇಶದಿಂದ ಸ್ವದೇಶಿ ಮಂಚದವರೆಗೂ ಲಭ್ಯ. ಹಬ್ಬ ಹರಿದಿನ ಇತ್ತ ಈ ಗೌಡ್ತಿಯ ಪೂಜೆ ಏನೂ? ಡಿ ಬಾಸ್ ಹೆಸರಲ್ಲಿ ಅರ್ಚನೆ ಏನೂ?? ಇದೆಲ್ಲ ಮಾಡಬಾರದೆಂದಲ್ಲ... ಆದರೆ ಇಂಥದ್ದೆಲ್ಲ ನೋಡುವ ಮತ್ತು ಈ ಮೆರವಣಿಗೆ ಉರುವಣಿಗೆ ನೋಡುವ ಶ್ರೀಸಾಮಾನ್ಯನ ಗತಿ ಏನು? ಜನಸಾಮಾನ್ಯರಿಗೆ, ದುಡ್ಡಿಲ್ಲದ ಕೋರ್ಟ್ ಅಲೆಯುವ ತಾಕತ್ತಿಲ್ಲದವರಿಗೆ ಹೇಗನ್ನಿಸಬೇಡ?? ಹೈಕೋರ್ಟ್ ಆರೋಪಿಗಳಿಗೆ ಬೇಲ್ ಕೊಟ್ಟಾಗ ನಾನು ಅಚ್ಚರಿ ಮತ್ತು ಹತಾಶೆ ಅನುಭವಿಸಿದ್ದೆ.

ಹೀಗೂ ಉಂಟೆ...?! ಎಂದು ಹತ್ತಾರು ಬಾರಿ ಅಂದುಕೊಂಡಿದ್ದೆ. ನೀವೇ ಯೋಚಿಸಿನೋಡಿ, ಇಲ್ಲಿ ಕೊಲೆಯ ಬಗ್ಗೆ, ಆರೋಪಿ ಬಗ್ಗೆ ಪ್ರತ್ಯಕ್ಷ ನೋಡಿದ ಸಾಕ್ಷ್ಯ ಇಲ್ಲ ಎನ್ನುವುದನ್ನು ಬಿಟ್ಟರೆ, ಹೆಚ್ಚಿನಂಶ ಇದು 'ಮಾಫಿ' ಮಾಡುವ ಕೇಸೆ ಅಲ್ಲಾ! ಅಕಸ್ಮಾತ್ ಇದೇನಾದರೂ ಮಾಫಿ ಕೇಸ್ ಆಗಿದ್ದರೆ ಬಹುಶ: ನಮ್ಮ ಜಗತ್ತಿಗೇ ನ್ಯಾಯಾಂಗದ ಮೇಲೆ ಭರವಸೆ ಕಳೆದು ಹೋಗುತ್ತಿತ್ತು...

ದುಡ್ಡು ಮತ್ತು ಇನ್‌ಫ್ಲುಯೆನ್ಸ್ ಇದ್ದರೆ ಏನು ಮಾಡಿದ್ರು ಗೆಲ್ಲಬಹುದೆನ್ನುವ ಕೆಲವರ ಸ್ವೇಚ್ಛಾಚಾರ ಮುಗಿಲು ಮುಟ್ಟುತ್ತಿತ್ತು! ಸತ್ಯ ನಿಜವಾಗಿಯೂ ಕಣ್ಣೀರು ಇಡುತ್ತಿತ್ತು!! ಆ ಮಟ್ಟಿಗೆ ಇವತ್ತಿಗೆ ನೆಮ್ಮದಿ ಇದೆ ಕಣ್ರೀ....

ಮೊನ್ನೆ ಕೋರ್ಟ್‌ಗೆ ಬಾ ಎಂದ ಕೂಡಲೇ ಬೆನ್ನಿಗೆ ಕೈಯ್ಯೊಡ್ಡಿ ಓಡಾಡುವ ನಟನಿಗೆ ಶೂಟಿಂಗ್ ಮತ್ತು ಸಂಸಾರ ಮಾಡೋಕೆ ಯಾವ ನೋವೂ ಆಗಿಲ್ಲ. ಕೋರ್ಟ್... ಪೊಲೀಸ್... ಎನ್ನುತ್ತಿದ್ದಂತೆ ಲಬಕ್ಕನೆ ಕೈ ಬೆನ್ನಿಗೂ ಸೊಂಟದ ಮೇಲೂ ಆಡ ತೊಡಗುತ್ತದೆ... ಇನ್ನು, ಇದನ್ನು ವಾದ ಮಾಡಿದ ಹಿರಿಯ ನ್ಯಾಯವಾದಿಯ ಪ್ರಕಾರ, ಬೆನ್ನಿನ ನರಗಳಿಗೆ ಹಾನಿಯಾದರೆ ಬ್ರೈನ್ ಹ್ಯಾಮರೇಜ್ ಆಗಿ ಲಕ್ವ ಹೊಡೆಯುತ್ತದೆಯಂತೆ! ಇಂಥಹ ಅದ್ಭುತ ಲಾಜಿಕ್ ಅನ್ನು ಅದ್ಯಾವ ಡಾಕ್ಟರ್‌ಹೇಳಿಕೊಟ್ಟಿದ್ದನೋ ಗೊತ್ತಿಲ್ಲ... ಶಿವ ಶಿವ...

ಆವತ್ತು ಬೇಲ್ ಕುರಿತು ವಾದ ಮಂಡಿಸುವಾಗ, ಇನ್ನೇನು ಬೇಲ್ ನೀಡದೆ ಹೋದರೆ ನಟನ ದೇಹಕ್ಕೆ ಲಕ್ವವೇ... ಎಂದು ಹುಯಿಲಿಟ್ಟಿದ್ದನ್ನು ಮಾನ್ಯ ಹೈ ಕೋರ್ಟು ಅದು ಹೇಗೆ ಪರಿಗಣಿಸಿತೋ ಹರಿಹರ ಬ್ರಹ್ಮರೇ ಬಲ್ಲರು! ನಿಜ ವೈದ್ಯರಿದ್ದವರು ನಿಜಕ್ಕೂ ಬೆನ್ನ ನೋವು ಐ ಮೀನ್ ಎಲ್ 4 ಎಲ್ 5 ನಂತಹ ಸಮಸ್ಯೆ ಇದ್ದರೆ ಅದು ಲಕ್ವಕ್ಕೆ ಕಾರಣವಾಗುತ್ತದೆ ಅಂತ ಹೇಳುವರೇ? ಹಾಗೆಲ್ಲ ಕನೆಕ್ಷನ್ ಇದೆಯಾ??

ಅಂದು ಚಪ್ಪಲೀಲಿ ಬೀಜ ಹೊಡೆದು- ಆಮೇಲೆ ಬೂಟು ಗಾಲಲ್ಲಿ ಬೀಜ ತುಳಿದು ಕೊಂದದ್ದು..... ಹಿಂಸ್ರ ಪಶು ಚೀತ್ಕಾರ.....ತಲೆ ಎತ್ತಿ ಗೋಡೆಗೆ ಗಟ್ಟಿಸಿ ಜಪ್ಪಿದಾಗ... ಅಯ್ಯೋ ನನ್ನ ಸಾಯಿಸಬೇಡಿ... ಬಿಟ್ಬಿಡಿ.... ನೀರು ಕೊಡಿ.... ಅಂದಾಗ, ಕಿಂಚಿತ್ತೂ ಕರುಣೆ ಇಲ್ಲದೆ ಪಕ್ಕೆಲುಬಿನ ಮೇಲೆ ಬೂಟುಗಾಲಿಂದ ತುಳಿದು ಮುರಿದು ಸಾಯಿಸಿದ ಪ್ರಕರಣ ಇದು...

ಏನಿದು?? ಹೀಗೆ ಬಿಂದಾಸ್ ಜಾಮೀನು ಸಿಗುತ್ತದಾ?? ದುಡ್ಡು ಇದ್ರೆ ಕೊಲೆ ಮಾಡಿ ಬಚಾವ್ ಆಗಿಬಿಡಬಹುದೇ??ಎಂದುಕೊಂಡರಲ್ಲ ಜನ ಸಾಮಾನ್ಯರು... ನ್ಯಾಯಯುತವಾಗಿ ಸಮಾಜಕ್ಕೆ ಪಾಠವಾಗಬಹುದಾಗಿದ್ದ ಪ್ರಕರಣ ಇದು!

ಅವತ್ತು ಮೊಬೈಲ್ ಮೆಸೇಜ್ ಮಾಡಿದವನಿಗೆ ದೂರು ಕೊಟ್ಟು ಒಳಗೆ ದಬ್ಬಿಸಬಹುದಿತ್ತು. ಇವತ್ತು ನಟಿ ರಮ್ಯಾ ಮಾಡಿದಂತೆಯೇ...

ಅತೀ ಸುಲಭದಲ್ಲಿ ಮುಗಿಯಬಹುದಾಗಿದ್ದ ಕೇಸ್ ಇದಾಗಿತ್ತು. ಆ ನಿಷ್ಪಾಪಿಯ ಬೀಜ ತುಳಿದು ಕೊಲ್ಲಬೇಕಿರಲಿಲ್ಲ. ತೀರ ಮೊಬೈಲ್‌ನಲ್ಲೇ ಸಖಿಯ ಶೀಲವನ್ನೇ ಹಣಿದಿದ್ದಾನೆ ಎನ್ನುವಂತೆ... ದಿನ ಪೂರ್ತಿ ಅವನ ದೇಹ ಹತ್ತಿ ತುಳಿದು, ಬೀಜ ಒಡೆದು, ಪಕ್ಕೆಲಬು ಮುರಿದಿರಲ್ಲ... ಆವಾಗ ಸೊಂಟ ನೋವು ಇರಲಿಲ್ಲವೇ? ಎನಿವೇ, ಎರಡೂ ಕುಟುಂಬಗಳಿಗೆ ಆಗುತ್ತಿರುವ ನಷ್ಟ ಸುಲಭವಲ್ಲ.

ಆದರೂ ಬೀಜ ಒಡೆಸಿಕೊಂಡವನ ಕುಟುಂಬದ ಕಣ್ಣೀರಿನ ಮುಂದೆ ಬೀಜ ಹೊಡೆದವರ ಹತಾಶೆ ಹೆಚ್ಚೇನು ಅಲ್ಲಾ! ಇದ್ರೆ ನೆಮ್ದಿಯಾಗ್ ಇರ್ಬೇಕ್.... ನೆಮ್ಮದಿ ಸಿಕ್ಕಿದ್ದರೆ ಬೀಜ ಕುಟ್ಟಿದ ಹೋರಿಯ ಪರಿಸ್ಥಿತಿ ಕೂಡಾ ಹತಾಶೆಯೆ... ಬಹುಶ: ಅಲ್ಲೆಲ್ಲೋ ಇವತ್ತು ಬೀಜ ಒಡೆಸಿಕೊಂಡವನ ಪ್ರೇತಾತ್ಮ ಖುಷಿಯಿಂದ ಹಾಡ್ತಾ ಇರಬಹುದು...ಬಂಗಾರಿ ಯಾರೇ ನೀ ಬುಲ್ ಬುಲ್... ☯

# ಕರ್ನಾಟಕ ರಾಜ್ಯ ಕಾರಾಗೃಹಗಳ ಮಹಾ ಅಧೀಕ್ಷಕ ಶ್ರೀ ದಯಾನಂದ ಕಾರಾಗೃಹಗಳಿಗೆ ಅಂಟಿದ ಕಳಂಕ ತೊಳೆದರೆ ಅದೇ ಮಹಾದಾನಂದ!

✍ ಹೆಚ್.ಕೆ. ಮಹದೇವ್


ಕಾರಾಗೃಹ ಮಹಾ ಅಧೀಕ್ಷಕ ಬಿ. ದಯಾನಂದರು

ಕರ್ನಾಟಕ ಪೊಲೀಸ್ ಇಲಾಖೆ ದೇಶದಲ್ಲಿಯೇ ಅತ್ಯುತ್ತಮ ಹೆಸರು ಪಡೆದಿರುವಂಥಾದ್ದು. ಇಲ್ಲಿ ದಕ್ಷಾತಿ ದಕ್ಷ ಅಧಿಕಾರಿಗಳು ಸೇವೆ ಸಲ್ಲಿಸುತ್ತಿದ್ದಾರೆ. ಈ ಪೈಕಿ ಶ್ರೀ ದಯಾನಂದರು ಮಂಚೂಣಿಯಲ್ಲಿ ನಿಲ್ಲುತ್ತಾರೆ. ನಿಮಗೇ ಗೊತ್ತಲ್ಲಾ, ಶ್ರೀಯುತರು ಬೆಂಗಳೂರು ಮಹಾನಗರದ ಪೊಲೀಸ್ ಆಯುಕ್ತರಾಗಿ ಎರಡು ವರ್ಷ ಅತ್ಯುತ್ತಮ ಆಡಳಿತ ನಡೆಸಿದ್ದಾರೆ. ದುರ್ದೈವವಶಾತ್, ಆರ್‌ಸಿಬಿ ವಿಜಯದ ವೇಳೆ ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಅವರದ್ದಲ್ಲದ ತಪ್ಪಿಗೆ ನಡೆಯಬಾರದ ಘಟನೆ ನಡೆದು ಹೋಗಿತ್ತು! ಹಿಂದೆ ಮುಂದೆ ಯೋಚಿಸದೆ 'ಮೇಲ್ನೋಟಕ್ಕೆ' ಪೊಲೀಸ್ ಕುಟುಂಬದ ಯಜಮಾನರನ್ನೇ ಅನಾಹುತಕ್ಕೆ ಹೊಣೆಗಾರನನ್ನಾಗಿಸಿ 'ಸಸ್ಪೆಂಡ್' ಶಿಕ್ಷೆ ನೀಡಿತ್ತು, ಕಾಂಗ್ರೆಸ್ ಸರ್ಕಾರ! ಈವತ್ತು ಅದೇ ಕಾಂಗ್ರೆಸ್ ಸರ್ಕಾರ ಶ್ರೀ ದಯಾನಂದರನ್ನು 'ಬಡ್ತಿ' ನೀಡಿ, ರಾಜ್ಯ ಕಾರಾಗೃಹಗಳ ಮಹಾ ಅಧೀಕ್ಷರನ್ನಾಗಿ ನೇಮಿಸಿ ತಾನು ಮಾಡಿದ ತಪ್ಪಿಗೆ ಪ್ರಾಯಶ್ಚಿತ್ತ ಮಾಡಿಕೊಂಡಿದೆ!!


ಗಮನೀಯ ಅಂಶವೇನೆಂದರೆ, ಶ್ರೀ ದಯಾನಂದರು ಆವತ್ತು ಯಾವುದೇ ಸ್ಟ್ರೈಕ್ ಮಾಡಲಿಲ್ಲ. ಯಾರನ್ನೂ ದೂಷಿಸಿ ಕೆಎಟಿ ಮೊರೆ ಹೋಗಲಿಲ್ಲ. ಕೇವಲ 'ಮೌನ'ವಾಗುಳಿದುಬಿಟ್ಟರು! ಅದರ ಫಲವೇ ಈ ಬಡ್ತಿ ಮತ್ತು ಹುದ್ದೆ. ದಕ್ಷ ಅಧಿಕಾರಿಗಳನ್ನು ಗೌರವ ತಾನಾಗಿಯೇ ಹುಡುಕಿಕೊಂಡು ಬಂದಿದೆ ಎಂದರೆ ಅತಿಶಯವೇನಲ್ಲ. ಅಂದಹಾಗೆ; ಶ್ರೀ ದಯಾನಂದರ ಬಗ್ಗೆ 'ಪೊಲೀಸ್ ನ್ಯೂಸ್' ವಾರಪತ್ರಿಕೆ ಈ ಹಿಂದೆಯೇ ಬರೆದಿತ್ತು. 'ಪೊಲೀಸ್ ಕಮೀಷನರ್ ಶ್ರೀ ದಯಾನಂದ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾದರೆ ಅದೇ ಮಹದಾನಂದ' ಎಂಬ ಶೀರ್ಷಿಕೆಯಡಿ ಅವರ ಆಡಳಿತ ವೈಖರಿಯನ್ನು ವಿವರಿಸಿತ್ತು. ಇಂಥಾ ದಕ್ಷ ಹಾಗೂ ಶುದ್ಧಹಸ್ತ ಅಧಿಕಾರಿಗೆ ಅನ್ಯಾಯವಾದಾಗ ಸರ್ಕಾರದ ವಿರುದ್ಧ ಟೀಕಾಸ್ತ್ರವನ್ನೂ ಸಹ ನಾವು ಮಾಡಿದ್ದೆವು. ಇದೀಗ ದಯಾನಂದರಿಗೆ ಮಾತ್ರವಲ್ಲ, ಅವರ ಅಭಿಮಾನಿಗಳಾದ ನಮಗೂ ನ್ಯಾಯ ಸಿಕ್ಕಿದೆ ಎಂದೇ ಭಾವಿಸಿದ್ದೇವೆ.

ಇಟ್ಸ್ ಓಕೆ, ಇದೆಲ್ಲಾ ಒತ್ತಟ್ಟಿಗಿರಲಿ. ದಕ್ಷ ಪೊಲೀಸ್ ಅಧಿಕಾರಿ ಬಿ. ದಯಾನಂದರು ಇದೀಗ ಎಡಿಜಿಪಿಯಾಗಿ ಬಡ್ತಿ ಹೊಂದಿ ಕರ್ನಾಟಕ ರಾಜ್ಯ ಕಾರಾಗೃಹಗಳ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡು ಕರ್ತವ್ಯದ ಹೊಸ ಮಜಲಿಗೆ ಧುಮುಕಿದ್ದಾರೆ. ಕಾರಾಗೃಹಗಳಿಗೆ ಅಂಟಿರುವ ಕಳಂಕ ಎಂಥದ್ದು ಎಂಬುದನ್ನು ನೀವೀಗಾಗಲೇ ಪ್ರತಿದಿನ ಪತ್ರಿಕೆಗಳಲ್ಲಿ, ಟಿವಿಗಳಲ್ಲಿ ನೋಡ್ತಾ ಇದ್ದೀರಿ. ಮೊನ್ನೆ

**ರೇಣುಕಾಸ್ವಾಮಿ ಕೊಲೆ ಆರೋಪಿ ದರ್ಶನ್‌ಗೆ 'ಬೇಲ್' ರದ್ದಾಗಿ ಮತ್ತೆ ಜೈಲು ಸೇರುವತಾಗಿದೆ. ಆದರೆ ಆತ ಬೆಂಗಳೂರು ಸೆಂಟ್ರಲ್ ಜೈಲ್‌ನಲ್ಲಿ ಇದ್ದಾಗಗ 'ರಾಜ್ಯಾತಿಥ್ಯ' ನೀಡಿದ ಭ್ರಷ್ಟ ಜೈಲು ಅಧಿಕಾರಿಗಳಿಗೆ, ದರ್ಶನ್ನೇ ಆರೋಪ ಮಾಡಿರುವಂತೆ ಆತನಿಂದ ಕೋಟ್ಯಾಂತರ ರೂ. ಹಣ ಹೊಡೆದ ಜೈಲ್ ಅಧೀಕ್ಷಕರಿಗೆ ಯಾವ ಶಿಕ್ಷೆಯೂ ಆಗಲಿಲ್ಲ! ದರ್ಶನ್‌ನಿಂದ ಲಪಾಟಿಯಿಸಿದ ದುಡ್ಡಲ್ಲೇ ಕೆಲವರು ಬಂಗಲೆ ಎಬ್ಬಿಸಿಕೊಂಡು ಬಿಂದಾಸ್ ಆಗಿದ್ದಾರೆ ಎಂಬ ರೂಮರ್ಸ್ ಎದ್ದು ನರ್ತಿಸುತ್ತಿವೆ!! ಇಂಥ ಭ್ರಷ್ಟ ಜೈಲು ವ್ಯವಸ್ಥೆಗೆ ಚಳಿಜ್ವರ ಬಿಡಿಸಿ, ಸುಧಾರಣೆ ತರಲೆಂದೇ ಏನೋ, ಇದೀಗ ಕರ್ನಾಟಕ ರಾಜ್ಯ ಕಾರಾಗೃಹಗಳ ಮಹಾ ಅಧೀಕ್ಷಕರಾಗಿ ಶುದ್ಧಹಸ್ತರೂ, ದಕ್ಷರೂ ಹಾಗೂ ಮಾನವೀಯ ಗುಣವುಳ್ಳವರೂ ಆದಂತಾ ಶ್ರೀ ದಯಾನಂದರು ಆಗಮಿಸಿದ್ದಾರೆ!!! ಶ್ರೀಯುತರು ಕಾರಾಗೃಹಗಳಿಗೆ ಅಂಟಿರುವ ಭ್ರಷ್ಟ 'ಕೊಳೆ'ಯನ್ನು ಇನ್ನಾದರೂ ತೊಳೆದು ಜೈಲು ಅಂದ್ರೆ 'ದೇವರ ಮನೆ' ಎಂಬುದನ್ನು ಸಾಕಾರಗೊಳಿಸಲಿ...**

ಆರೋಪಿ ದರ್ಶನ್‌ನನ್ನು ಇಂಚಿಂಚೂ ಹಿಂಬಾಲಿಸಿ ಆತನ 'ಹೈಡ್ರಾಮಾ'ವನ್ನು ದಾಖಲೆಸಹಿತ ಸಂಗ್ರಹಿಸಿ ಮಾನ್ಯ ಸುಪ್ರೀಂ ಕೋರ್ಟ್ ಮೊರೆ ಹೋಗಿ 'ನ್ಯಾಯಕ್ಕಾಗಿ' ಹೋರಾಟ ಮಾಡಿದ್ದರ ಫಲವೇ ಆರೋಪಿ ದರ್ಶನ್ ಜಾಮೀನು ರದ್ದು!! ಇದು ಇಬ್ಬರು ಅಧಿಕಾರಿಗಳಿಗೆ ದೊರೆತ ಜಯ ಅಲ್ವೇ ಅಲ್ಲ, ಇಡೀ ಕರ್ನಾಟಕ ಪೊಲೀಸ್ ಇಲಾಖೆಗೆ ದೊರೆತ ಜಯ!!!


ಶ್ರೀಮತಿ ಮಾಲಿನಿ ಕೃಷ್ಣಮೂರ್ತಿ


ಸೆಂಟ್ರಲ್ ಜೈಲ್ ಚೀಫ್ ಜೈಲ್ ಸೂಪರಿಂಟೆಂಡೆಂಟ್ ಸುರೇಶ್

ಅದಿರಲಿ; ಆರೋಪಿ ದರ್ಶನ್ ರೇಣುಕಾಸ್ವಾಮಿ ಕೊಲೆ ಕೇಸ್‌ನಲ್ಲಿ ಬಂಧಿತನಾಗಿ ಮೊದಲಿಗೆ ಬೆಂಗಳೂರು ಸೆಂಟ್ರಲ್ ಜೈಲ್ ಬಂಧಿಯಾಗಿದ್ದಾಗ, ಇಲ್ಲಿ ಅವನಿಗೆ ಅಂದ್ರೆ, ಕೊಲೆ ಆರೋಪಿಗೆ 'ಜೈಲ್' ಅಧೀಕ್ಷಕರು ಕಲ್ಪಿಸಿದ್ದ 'ರಾಜಾತಿಥ್ಯ' ಎಂಥದ್ದು ಎಂಬುದು ಇಡೀ ದೇಶಕ್ಕೇ ಜಗಜ್ಜಾಹೀರು ಆಗಿತ್ತು! ಕೊಲೆ ಆರೋಪಿ ದರ್ಶನ್ ಬೆಂಗಳೂರಿನ ಕುಖ್ಯಾತ ರೌಡಿಶೀಟರ್‌ಗಳೊಂದಿಗೆ ಟೇಬಲ್ ಹಾಕ್ಕೊಂಡು ಕಾಲಿನ ಮೇಲೆ ಕಾಲು ಹಾಕೊಂಡು 'ಚಹ' ಸೇವನೆ ಮಾಡ್ತಾ, ಧಂ ಹೊಡೀತಾ ಕುಳಿತಿದ್ದ ಸಿನಿಮಾ ರಿಲೀಸ್ ಆಗಿತ್ತು!!

ಆವತ್ತು ಇಡೀ ದೇಶದಲ್ಲೇ ಕರ್ನಾಟಕ ರಾಜ್ಯ ಪೊಲೀಸ್ ಇಲಾಖೆಯ (ಕಾರಾಗೃಹ ಕೂಡ ಇಲಾಖೆಯ ಅವಿಭಾಜ್ಯ ಅಂಗವೇ ತಾನೆ!) ಮಾನ-ಮರ್ಯಾದೆ ಮೂರು ಕಾಸಿಗೆ ಹರಾಜ್ ಆಗಿತ್ತು. ಅದನ್ನು ಗ್ರಹಿಸಿದ


ರೌಡಿಗಳೊಂದಿಗೆ ಮೋಜು ಮಸ್ತಿ

'ಆಮೆಗತಿ'ಯ ಗೃಹ ಸಚಿವರು, ಆರೋಪಿ ದರ್ಶನ್‌ನನ್ನು ಬಳ್ಳಾರಿ ಜೈಲಿಗೆ 'ಕಮಾನ್' ಎತ್ತುವಂತೆ ಆದೇಶಿಸಿ ಮುಖ ಉಳಿಸಿಕೊಂಡಿದ್ದರು! ಆವತ್ತು ಸೆಂಟ್ರಲ್ ಜೈಲ್‌ನಲ್ಲಿ ನಡೆದ 'ಭ್ರಷ್ಟಾಚಾರ'ದ ತನಿಖೆಗಾಗಿ ಹೆಚ್ಚುವರಿ ಪೊಲೀಸ್ ಕಮೀಷನರ್ ಡಾ. ಚಂದ್ರಗುಪ್ತ ಅವರನ್ನು ನೇಮಿಸಲಾಗಿತ್ತು. ದಕ್ಷ ಅಧಇಕಾರಿ ಡಾ. ಚಂದ್ರಗುಪ್ತ ಅವರು ಅಂದಿನ ಕಾರಾಗೃಹಗಳ ಮಹಾ ಅಧೀಕ್ಷಕಿ ಶ್ರೀಮತಿ ಮಾಲಿನಿ ಕೃಷ್ಣಮೂರ್ತಿ ಸೇರಿದಂತೆ ಹದಿನೇಳು ಜೈಲು ಅಧಿಕಾರಿಗಳ ವಿರುದ್ಧ ತನಿಖೆ ನಡೆಸಿ ಸರ್ಕಾರಕ್ಕೆ ವರದಿ ನೀಡಿದ್ದರು ಎಂಬ ಮಾಹಿತಿ ಇದೆ! ಏನಾಯ್ತು ಫಲಿತಾಂಶ?! ಒಂದಷ್ಟು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಲಾಗಿತ್ತು. ಮುಖ್ಯ ಯಜಮಾನಿ ಶ್ರೀಮತಿ ಮಾಲಿನಿ ಮೇಡಂ ಅವರಿಗೆ ಏನೇನೂ ಆಗಲಿಲ್ಲ! ಅವರು ಸೇಫ್ ಆಗಿಯೇ ಇದ್ದು, ಮೊನ್ನೆ ಮೊನ್ನೆ ಆರಾಮ್‌ಸೇ ನಿವೃತ್ತಿ ಹೊಂದಿದರು!

ಆವತ್ತು ಸ್ವತಃ ದರ್ಶನ್ನೇ ಢಂಗೂರ ಸಾರಿದ್ದ; ಜೈಲ್ ಅಧಿಕಾರಿಗಳು ನನ್ನತ್ರ ಕೋಟಿ ಕೋಟಿ ತಿಂದ್ರು ಅಂತ...!! ಜೈಲು ಗೋಡೆಗಳು ಪಿಸುಗುಟ್ಟುವ ಪ್ರಕಾರ; ದರ್ಶನ್‌ನಿಂದ ಸುಮಾರು 4 ಕೋಟಿ ರೂ. ಕಸಿಯಲಾಗಿದೆಯಂತೆ!!! ಇದರಲ್ಲಿ ಜೈಲು ಒಳಗಿನ ಅಧಿಕಾರಿ ವರ್ಗ, ಸಿಬ್ಬಂದಿ ಸ್ವಲ್ಪ ಸ್ವಲ್ಪ ಹಂಚಿಕೊಂಡು, ದೊಡ್ಡ ಮೊತ್ತವನ್ನು ಯಜಮಾನರಿಗೆ ತಲುಪಿಸಲಾಗಿದ್ದು, ಅವರು ಆ ದುಡ್ಡಲ್ಲೇ ಜಕ್ಕೂರು ಐಪಿಎಸ್ ಲೇಔಟ್‌ನಲ್ಲಿ ಬೃಹತ್ ಕಾಂಪ್ಲೆಕ್ಸ್ ಎಬ್ಬಿಸುತ್ತಿದ್ದಾರಂತೆ! ಬಿಬಿಎಂಪಿಯಲ್ಲಿ 'ವಾಸದ ಮನೆ'ಗೆ ಎಂದು ಅಪ್ಪಣೆ ಪಡೆದುಕೊಂಡು ಕಮರ್ಷಿಯಲ್ ಕಾಂಪ್ಲೆಕ್ಸ್ ಕಟ್ಟಿಸುತ್ತಿದ್ದಾರೆ ಅಂತ ಅವರ ಸಹಪಾಟಿಗಳೇ ಚರ್ಚಿಸುತ್ತಿರುವುದು ರಹಸ್ಯವಾಗೇನೂ ಉಳಿದಿಲ್ಲ!! ಕೊಲೆ ಆರೋಪಿ ದರ್ಶನ್‌ಗೆ ರಾಜ್ಯಾತಿಥ್ಯ ಕಲ್ಪಿಸಿದ್ದ ವಿಷಯದಲ್ಲಿ ಡಾ. ಚಂದ್ರಗುಪ್ತರಿಂದ ತನಿಖೆ ನಡೆದಾಗ, ವರದಿಯಲ್ಲಿ ಶ್ರೀಮತಿ ಮಾಲಿನಿ ಮೇಡಂ ಹೆಸರು ಇದ್ದಿತಾದರೂ ಅವರ ವಿರುದ್ಧ ಮಾನ್ಯ ಗೃಹ ಸಚಿವರು ಕಾನೂನು ಕ್ರಮ ಜರುಗಿಸದೆ ಬಿಟ್ಟಿದ್ದಕ್ಕೆ, ಈಗ ಸಚಿವ ಪದವಿಯಿಂದ ಡಿಸ್ಮಿಸ್ ಆಗಿರುವ ಮಧುಗಿರಿ ರಾಜಣ್ಣನವರೇ ಕಾರಣ... ಎಂಬ ವಿಚಾರವೂ ಗುಟ್ಟಾಗಿ ಉಳಿದಿಲ್ಲ!

ಆಂಧ್ರಪ್ರದೇಶದ ಹಿಂದುಳಿದ ವರ್ಗವೊಂದರ ಮೇಡಂ, ತಾವು ಎಸ್‌ಟಿ ಎಂದು ರಾಜಣ್ಣನವರಿಗೆ ಹೇಳಿಕೊಂಡೇ ದರ್ಶನ್ 'ರಾಜಾತಿಥ್ಯ' ಪ್ರಕರಣದಿಂದ ಬಚಾವ್ ಆಗುಳಿದು, ಸರ್ಕಾರದಿಂದ ಅದ್ದೂರಿಯಾಗಿ

## ದರ್ಶನ್ ದುಡ್ಡು ತಿಂದು ರಾಜಾತಿಥ್ಯ ಕೊಟ್ಟವರ ತಲೆದಂಡಕ್ಕೆ ಸರ್ಕಾರ ಸಿದ್ಧತೆ!

ಸುಪ್ರೀಂ ಕೋರ್ಟ್ ದರ್ಶನ್‌ಗೆ ಜಾಮೀನು ರದ್ದುಪಡಿಸುವಾಗ ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ರಾಜಾತಿಥ್ಯ ನೀಡಿದ ಜೈಲು ಅಧಿಕಾರಿಗಳ ಮೇಲೆ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕಿತ್ತೆಂದು ತನ್ನ ತೀರ್ಪಿನಲ್ಲಿ ಹೇಳಿದೆ. ಆ ಸಮಯದಲ್ಲಿ ಕರ್ತವ್ಯದಲ್ಲಿದ್ದ ಮುಖ್ಯ ಅಧೀಕ್ಷಕರಾದ ಶೇಷಮೂರ್ತಿ ಮತ್ತು ಅಧೀಕ್ಷಕ ಬಿ.ಮಲ್ಲಿಕಾರ್ಜುನ ಸ್ವಾಮಿ ಹಾಗೂ 11 ಜನ ಇತರರು ಮಾತ್ರ ಅಮಾನತುಗೊಳಿಸಿದ್ದರು. ಆದರೆ ಈ ಪ್ರಕರಣದಲ್ಲಿ ನೇರವಾಗಿ ಆರೋಪವು ಬಂದೀಖಾನೆಗಳ ಮುಖ್ಯಸ್ಥರಾಗಿದ್ದ ಶ್ರೀಮತಿ ಮಾಲಿನಿ ಕೃಷ್ಣ ಮೂರ್ತಿ ಐಪಿಎಸ್‌ರವರ ಮೇಲಿತ್ತು! ಎರಡು ಕೋಟಿ ರೂಪಾಯಿಗಳನ್ನು ಮಾಲಿನಿ ಕೃಷ್ಣ ಮೂರ್ತಿ, ಅಸಿಸ್ಟೆಂಟ್ ಸೂಪರಿಂಡೆಂಟ್ ಕರ್ಣ ಕ್ಷತ್ರಿಯ, ಈಗ ಸೆಂಟ್ರಲ್ ಜೈಲ್ ಮುಖ್ಯ ಅಧೀಕ್ಷಕರಾಗಿರುವ ಸುರೇಶ್ ಮೂಲಕ ಪಡೆದುಕೊಂಡಿದ್ದಾರೆ ಎಂದು ದರ್ಶನ್‌ವಾಗಲೇ ಅಲ್ಲಿಗೆ ಭೇಟಿ ನೀಡಿದ್ದ ಗೃಹ ಮಂತ್ರಿ ಜಿ. ಪರಮೇಶ್ವರರ ಎದುರೇ ಆರೋಪ ಮಾಡಿದ್ದರು!!


ಆಗ ಆ ವಿಚಾರವಾಗಿ ತನಿಖೆ ನಡೆಸಲು ಡಾ. ಚಂದ್ರಗುಪ್ತ ಐಪಿಎಸ್ ಅವರನ್ನು ಸರ್ಕಾರ ನೇಮಿಸಿತ್ತು. ಆ ಸಮಯದಲ್ಲಿ ಕರ್ತವ್ಯದಲ್ಲಿದ್ದ ಸಹಾಯಕ ಅಧೀಕ್ಷಕರಾದ ಕರ್ಣ ಕ್ಷತ್ರಿಯ, ಹೆಡ್ ಆಫೀಸ್‌ನಲ್ಲಿ ಮಾಲಿನಿ ಕೃಷ್ಣಮೂರ್ತಿ ಅವರ ಸಹಾಯಕರಾಗಿದ್ದ ಮುಖ್ಯ ಅಧ್ಯಕ್ಷರಾದ ಸುರೇಶ್ ಇವರುಗಳ ಮೂಲಕ ಎರಡೂವರೆ ಕೋಟಿ ಹಣವನ್ನು ಮಲ್ಲಿಕೃಷ್ಣ ಮೂರ್ತಿ ಪಡೆದುಕೊಂಡಿದ್ದರು ಎಂದು ವರದಿಯಿದ್ದು, ಅದರ ಬಗ್ಗೆ ತನಿಖಾ ವರದಿಯನ್ನು ಸಲ್ಲಿಸಲು ಮಾನ್ಯ ಸುಪ್ರೀಂ ಕೋರ್ಟ್ ಆದೇಶದಲ್ಲಿ ಹೇಳಿದೆ. ಪ್ರಸ್ತುತ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ರವರು ಮಾನ್ಯ ಸುಪ್ರೀಂಕೋರ್ಟಿಗೆ ಈ ವರದಿಯನ್ನು ಸಲ್ಲಿಸುವವರಿದ್ದಾರೆ ಎಂದುಬಲ್ಲ ಮೂಲಗಳು ತಿಳಿಸಿವೆ! ಹೀಗಾದರೆ, ಈಗಿನ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಮುಖ್ಯ ಅದೀಕ್ಷರ ತಲೆ ದಂಡವಾಗುವುದು ಖಚಿತ ಎನ್ನಲಾಗಿದೆ! ಸದ್ಯ, ಮುಖ್ಯ ಅದೀಕ್ಷಕ ಸುರೇಶ್ ಮತ್ತು ಕರ್ಣ ಕ್ಷತ್ರಿಯ ಮೆಲೆ ಅಮಾನತ್ತಿನ ತೂಗುಕತ್ತಿ ತೇಲಾಡುತ್ತಿರುವಂತಿದೆ!

ಡಾ.ಚಂದ್ರಗುಪ್ತ ವರದಿಯನ್ನು ಮಾಲಿನಿ ಕೃಷ್ಣ ಮೂರ್ತಿ ನಿವೃತ್ತಿ ಆಗುವ ಮುನ್ನವೇ ತೆರೆಮರೆಗೆ ಸರಿಸಿ ಬಂದಿಖಾನೆಯ ಕೇಂದ್ರ ಕಛೇರಿಯಲ್ಲೆ ಬಚ್ಚಿಟ್ಟು ಹೋಗಿದ್ದಾರೆಂದು ಹೇಳಲಾಗಿದೆ. ಈಗ ಸುಪ್ರೀಂ ಕೋರ್ಟ್ ಪರಪ್ಪನ ಅಗ್ರಹಾರದ ಲಂಚಕೋರ ಅಧಿಕಾರಿಗಳ ವಿರುದ್ಧ ಚಾಟಿ ಬೀಸಿರುವುದರಿಂದ ಎಲ್ಲವೂ ಒಂದೊಂದಾಗಿ ಹೊರಗೆ ಬರುತ್ತಿವೆ......!! ಅಂದಹಾಗೆ, ದರ್ಶನ್‌ಗೆ ರಾಜಾತಿಥ್ಯ ನೀಡಿದ ಪ್ರಕರಣದಲ್ಲಿ ಒಟ್ಟು 17 ಜೈಲು ಅಧಿಕಾರಿಗಳ ಮೇಲೆ ಡಾ.ಚಂದ್ರಗುಪ್ತ ವರದಿಯಲ್ಲಿ ಆರೋಪ ಸಾಬೀತಾಗಿದ್ದರಿಂದ 11 ಜನರನ್ನು ಪರಪ್ಪನ ಅಗ್ರಹಾರದಿಂದ ಎತ್ತಂಗಡಿ ಮಾಡಲಾಗಿತ್ತು! ಕೆಲವರನ್ನು ಅಮಾನತ್ತು ಗೊಳಿಸಲಾಗಿತ್ತು. ಶ್ರೀಮತಿ ಮಾಲಿನಿ ಕ್ರಷ್ಣಮೂರ್ತಿ ಐಪಿಎಸ್‌ರವರ ಕೃಪಾಕಟಾಕ್ಷದಿಂದ ಸಹಾಯಕ ಅಧೀಕ್ಷಕ ಕರ್ಣ ಕ್ಷತ್ರಿಯ ಮತ್ತು ಈಗ ಪರಪ್ಪನ ಅಗ್ರಹಾರ ಮುಖ್ಯ ಅಧೀಕ್ಷಕರಾಗಿರುವ ಸುರೇಶ್ ಬಚಾವಾಗಿ ಇದೇ ಜೈಲಿನಲ್ಲಿ ಠಿಕಾಣಿ ಹೂಡಿ ತಮ್ಮ ವಸೂಲಿ ದಂಧೆಯನ್ನು ಮುಂದುವರಿಸಿದ್ದಾರೆ!

ಕಳೆದ ವಾರವಷ್ಟೆ ಬೆಂಗಳೂರು ಜೈಲಿನಲ್ಲಿ ಕೋಟ್ಯಾಂತರ ರೂಪಾಯಿ ಹಣವನ್ನ ಫೋನ್ ಪೇ ಮೂಲಕ ಸಜಾ ಬಂದಿಗಳು ಪರಪ್ಪನ ಅಗ್ರಹಾರ ಜೈಲಿನಲ್ಲಿ ಕುಳಿತು ಹೊರಗಿರುವವರಿಗೆ ಧಮ್ಕಿ ಹಾಕಿ ಹಪ್ತಾ ವಸೂಲಿ ಮಾಡಿದ್ದಾರೆಂದು ಸಿಸಿಬಿಯಲ್ಲಿ ಎಫ್‌ಐಆರ್ ದಾಖಲಾಗಿ ತನಿಖೆ ನಡೆಯುತ್ತಿದೆ.(ಈ ಬಗ್ಗೆ ಇನ್ನೊಂದು ಬಾಕ್ಸ್ ನೋಡಿ) ಇದೇ ಹಣದಲ್ಲಿ ಕರ್ಣ ಮತ್ತು ಸುರೇಶ್ ಕೋಟ್ಯಾಂತರ ರೂಪಾಯಿ ಶೇರು ಪಡೆದಿದ್ದಾರೆ ಎಂಬ ಗ್ಯಾಸ್ಸಿಪ್ ಹರಿದಾಡ್ತಾ ಇದೆ!!! ಡಾ.ಚಂದ್ರಗುಪ್ತ ವರದಿಯ ಮೇಲೆ ಈಗಾಗಲೇ ಸಹಾಯಕ ಅಧೀಕ್ಷಕ ಕರ್ಣ ಕ್ಷತ್ರಿಯ ಅವರ ಮೆಲೆ ಪ್ರಾಷಿಕ್ಯೂಷನ್‌ಗೆ ಅನುಮತಿ ನೀಡಲಾಗಿದೆ! ದರ್ಶನ್ ಗೆ ರಾಜಾತಿಥ್ಯ ನೀಡಿದ ಪ್ರಕರಣದಲ್ಲಿ ಕ್ರಿಮಿನಲ್ ಮೊಕದ್ದಮೆ ಅಡಿಯಲ್ಲಿ ಎಫ್‌ಐಆರ್ ದಾಖಲಾಗುವುದು ಬಾಕಿ ಇದೆ!!

☞ 5

4 ☞ ಬೀಳ್ಕೊಡುಗೆ ಪಡೆದುಕೊಂಡು ನಿವೃತ್ತಿಯಾದದ್ದು ಕರ್ನಾಟಕ ರಾಜ್ಯದ ಇತಿಹಾಸದಲ್ಲೇ ದಾಖಲೆ ಎಂದರೆ ತಪ್ಪೇನಿಲ್ಲ ಕಣ್ರೀ!!! ಒಂದನ್ನು ನೆನಪಲ್ಲಿಟ್ಟುಕೊಳ್ಳಿ; ನಾವಿಲ್ಲಿ ಶ್ರೀಮತಿ ಮಾಲಿನಿ ಮೇಡಂ ಅವರನ್ನು ಟೀಕಿಸುತ್ತಿಲ್ಲ. ಅವರು ಜೈಲುಗಳ ಮಹಾ ಅಧೀಕ್ಷಕರಾಗಿ ಬಂದ ನಂತರ,



ಐಪಿಎಸ್ ಲೇಔಟ್‌ನಲ್ಲಿ ಏಳುತ್ತಿರುವ ಬೃಹತ್ ಕಾಂಪ್ಲೆಕ್ಸ್

ಜೈಲುಗಳನ್ನು ಸುಧಾರಣೆ ಮಾಡುವ ಬದಲು, 10-12 ವರ್ಷಗಳಷ್ಟು ಹಿಂದಕ್ಕೆ ಒಯ್ದು ಬಿಟ್ರಲ್ಲಾ, ಈ ದುರಾಡಳಿತವನ್ನು ಖಂಡಿಸುತ್ತೇವೆ!!

**ದಕ್ಷ ಅಧಿಕಾರಿಗಳು ಮೂಲೆಗೆ**
**ಭ್ರಷ್ಟರು ಆಯಕಟ್ಟಿನ ಜಾಗಕ್ಕೆ**


ಬೆಂಗಳೂರು ಕೇಂದ್ರ ಕಾರಾಗೃಹದಲ್ಲಿ ಈ ಹಿಂದೆ ಭ್ರಷ್ಟಾಚಾರಗಳು ನಡೆದಾಗ, ಅವುಗಳ ತನಿಖೆಗಾಗಿ ಎಡಿಜಿಪಿ ಮುರುಗನ್ ಅವರನ್ನು ನೇಮಿಸಲಾಗಿತ್ತು. ಸದರಿ ಮುರುಗನ್ ವರದಿ ಹಿನ್ನಲೆಯಲ್ಲಿ ಸರ್ಕಾರ ಯಾವ್ಯಾವ 'ಭ್ರಷ್ಟ'ರ ವಿರುದ್ಧ ಕಾನೂನು ಕ್ರಮ ಜರುಗಿಸಿತು ಹೇಳಿ?! ಮುರುಗನ್ ವರದಿಯಲ್ಲಿದ್ದ ಭ್ರಷ್ಟಾತಿ ಭ್ರಷ್ಟ ಅಧಿಕಾರಿಗಳೆಲ್ಲಾ ಮಾಲಿನಿ ಮೇಡಂ ಅವರ ಆಶೀರ್ವಾದದಿಂದ ಆಯಕಟ್ಟಿನ ಜಾಗಗಳಲ್ಲಿ ಪ್ರತಿಷ್ಠಾಪಿತರಾಗಿ 'ಕೊಳ್ಳೆ' ಹೊಡೆಯುತ್ತಿದ್ದಾರೆ. ದಕ್ಷ ಅಧಿಕಾರಿಗಳೆಲ್ಲಾ ಕೆಲಸಕ್ಕೆ ಬಾರದ ವೇಸ್ಟ್ ಜಾಗಗಳಿಗೆ ವರ್ಗಾವಣೆಯಾಗಿ, ಹಿಡಿಶಾಪ ಹಾಕುತ್ತಿದ್ದಾರೆ! ಜೀ ಹುಜೂರ್ ಅಂದವ್ರಿಗೆ ಮಾತ್ರ ಮೇಡಂ ಆಶೀರ್ವಾದ. ಎದುರು ಮಾತಾಡಿದವರಿಗೆ ವರ್ಗಾವಣೆ ಶಿಕ್ಷೆ! ಬರೆಯುತ್ತಾ ಹೋದರೆ ಪುಟಗಳು ಸಾಲವು ಬಿಡ್ರಿ! ಬೇರೇನೂ ಬೇಡ, ಕರ್ನಾಟಕ ರಾಜ್ಯ ಜೈಲುಗಳಲ್ಲಿ ನಡೆದಿರುವ ಸಿಸಿ ಕ್ಯಾಮರಾ ಅಳವಡಿಕೆ ಲಫಡಾ, ಡ್ರೋಣ್ ಕ್ಯಾಮರಾ ಕಣ್ಗಾವಲು(!) (ಅದಿದ್ದರೆ ದರ್ಶನ್ ಹೇಗೆ ರೌಡಿಗಳೊಂದಿಗೆ ರಾಜ ದರ್ಬಾರ್ ನಡೆಸ್ತಾ ಇದ್ದ??) ಮೊಬೈಲ್ ಜಾಮರ್ ಕರ್ಮಕಾಂಡ... ಮುಂತಾದ ಬಗ್ಗೆ ಬರೆಯಲು ಹೊರಟರೆ ಅದು ಇನ್ನೊಂದು 'ಕ್ರೈಂ ಥ್ರಿಲ್ಲರ್' ಭಾಗ-1, ಭಾಗ-2 ಚಿತ್ರಿಸುವಷ್ಟು ಸರಕಾಗುತ್ತದೆ!

ನಮ್ಮ ವರದಿಯ ಉದ್ದೇಶವಿಷ್ಟೇ... ಕಾರಾಗೃಹಗಳಿಗೆ ಅಂಟಿಕೊಂಡಿರುವ ಕೊಳೆ ಅರ್ಥಾತ್ ಕಳಂಕ ಇನ್ನಾದರೂ ಅಳಿಸಿ ಹೋಗಬೇಕು. ನಮ್ಮ ಹೆಮ್ಮೆಯ ಹಾಗೂ ದಕ್ಷ ಪೊಲೀಸ್ ಅಧಿಕಾರಿ ಶ್ರೀ ದಯಾನಂದರಿಂದಲೇ ಜೈಲು ಶುದ್ಧೀಕರಣಗೊಂಡು 'ದೇವರಮನೆ' ಆಗಬೇಕು! ದಯಾನಂದರು ಕಾರಾಗೃಹಗಳ ಮಹಾ ಅಧೀಕ್ಷಕರಾಗಿ ಬಂದಿರುವುದೇ ಸುದೈವ ಎಂಬ ಭಾವನೆ ನಮಗೆ ಮಾತ್ರವಲ್ಲ ಹಲವಾರು ಖೈದಿಗಳಲ್ಲಿದೆ. ಖೈದಿಗಳ ಪುನರ್ ವಸತಿ ಕೇಂದ್ರವಾದ, ಸುಧಾರಣ ಮಂದಿರದಲ್ಲಿ ಈವರೆವಿಗೂ ನಡೆಯಬಾರದ ಅನಾಚಾರ, ಭ್ರಷ್ಟಾಚಾರ ನಡೆದಿವೆ. ಇನ್ನು ಮುಂದೆ ಅವುಗಳಿಗೆ ಜಾಗವಿರಲಾರದು! ಎಂಬುದೇ ಎಲ್ಲರ ಅಭಿಲಾಷೆ. ಶ್ರೀ ದಯಾನಂದರಿಗೆ ದೇವರಾಗುವ ಸಾಮರ್ಥ್ಯವಿದೆ!! ☯



ಜೈಲ್ ಒಳಗೆ ಆಶೀಶ್ ಆಯಿಲ್ ಘಾಟು?!

3 ☞ ಅವನ ಪಾಡಿಗೆ ಅವ, ಇವಳ ಪಾಡಿಗೆ ಇವಳು ಮಿಂಚುತ್ತಲೇ ಇದ್ರು. ದೇವಸ್ಥಾನ, ಕಾಡುಮೇಡು ಕ್ಲಬ್ಬು...ಸುತ್ತಾಟ ನಡೀತಾನೇ ಇತ್ತು. ಮತ್ತು ಇದೆಲ್ಲ ಅವರವರ ಮೊಬೈಲ್‌ಗಳಲ್ಲೇ ಸೆರೆಯಾಗಿ, ಹವಾ ಮೇಂಟೈನ್ ಮಾಡಲು ಯಾರ್‍ಯಾರಿಗೋ ಕಳುಹಿಸಿ, ಕಡೆಗದು ಸಾಮಾಜಿಕ ಜಾಲತಾಣ ಸೇರುತ್ತಿತ್ತು! ದರ್ಶನ್‌ಗೆ ದುಡ್ಡಿನ ದೌಲತ್ತು ಹೇಗಿತ್ತೆಂದರೆ, ಬೇಲ್ ಆದ ಬಳಿಕ ಆತನ ಕಾಲು ನೆಲದ ಮೇಲೆ ನಿಲ್ಲಲೇ ಇಲ್ಲಾ. ಲಾಯರ್ ಇದ್ದಾರಲ್ಲ... ದುಡ್ಡು ಬಿಸಾಕಿದ್ರೆ ಆಯ್ತು..... ನೋಡ್ಕೋತಾರೆ... ಎಂದುಕೊಂಡು ಮಿಂಡ್ರ ಮೆರೆಯತೊಡಗಿದ! ಈತ ಬಳ್ಳಾರಿ ಜೈಲ್ ಒಳಗಿದ್ದಾಗ ಇವನ ಪತ್ನಿ ಡಿಕೆಶಿ ಮನೆಗೆ ಹೋಗಿ ಕಾಲು ಮುಟ್ಟಿ ಬಂದಿದ್ದಳೆ ವಿನಃ ಚಿತ್ರರಂಗದ ಒಬ್ಬೇ ಒಬ್ಬ ಹಿರಿಯರ ಕಾಲಿಗೆ ಬಿದ್ದು ಬರಲಿಲ್ಲ! ಹಿರಿಯ ಪೊಲೀಸ್ ಅಧಿಕಾರಿಗಳನ್ನು ಭೇಟಿಸಿ ಕಾನೂನು ಸಲಹೆ ಪಡೆಯಲಿಲ್ಲ!! ಗಂಡ ಹೆಂಡತಿ ಅಸ್ಸಾಂಗೆ ತೆರಳಿ ಕುಕ್ಕರು ಬಡಿದ ಕಾಮಾಕ್ಯ ದೇವಿಯ... ಪೂಜೆ ಸಲ್ಲಿಸಿ ಬಂದರು! ಆದರೂ ಬೆನ್ನು ಹತ್ತಿದ ಕರ್ಮ ಬಿಡಲೇ ಇಲ್ಲಾ!!!



ಅಂದು ಕೊಲೆ ಆರೋಪಿಗಳ ಜಾಮೀನು ರದ್ದಾದ ದಿವಸ ಕೂಡ ದರ್ಶನ್, ಏನಾಗುತ್ತೋ ಏನೋ ಎಂಬ ಭಯದಲ್ಲಿ ಮನೆಯಲ್ಲಿ ಟಿವಿ ನೋಡ್ತಾ ಕುಳಿತಿರಲಿಲ್ಲ! ದುಡ್ಡಿದೆ... ಬಿಸಾಕಿದ್ದೀನಿ... ಎಂಬ ಅಹಮ್ಮಿನಲ್ಲೇ ತಮಿಳು ನಾಡಿನ ಆಂದಿಯೂರ್‌ನಲ್ಲಿ ನಡೆದಿದ್ದ ಕುದುರೆ ಜಾತ್ರೆಗೆ ಹೋಗಿದ್ದ! ಸತ್ಯಮಂಗಲದ ಸಮೀಪ ಆಂದಿಯೂರ್. ಮಾರ್ಗಮಧ್ಯೆ ಮಾದೇಶ್ವರ ಬೆಟ್ಟದಲ್ಲಿ ಮಾದಪ್ಪನ ದರ್ಶನ ಮಾಡಿಕೊಂಡು, ಯಾವುದಕ್ಕೂ ಇರಲಿ ಅಂತ ಮುಡಿ ಕೊಟ್ಟು ಆಂದಿಯೂರ್ ತಲುಪಿ ಜಾತ್ರೆಯಲ್ಲಿ ಎರಡು ಕುದುರೆಗಳನ್ನು ಖರೀದಿ ಮಾಡಿದ್ದಾನೆ!! ಅಡ್ವಾನ್ಸ್ ಕೊಟ್ಟಿದ್ದನೋ ಇಲ್ವೋ, ಜೇಬಲ್ಲಿದ್ದ ಮೊಬೈಲ್ ಕಿರುಚಿಕೊಂಡಿತ್ತು... ಬಾಸ್, ಬೇಲ್ ರದ್ದಾಗಿಬಿಟ್ಟಿದೆ!!! ☯

## ಜೈ ಡಿ ಬಾಸ್...

ಯಾರೂ ಮಾಡದೇ ಇರೋ ತಪ್ಪೇನು ನೀವ್ ಮಾಡಿಲ್ಲ ಬಿಡಿ ಬಾಸ್.... ಇಟ್ಟುಕೊಂಡವಳಿಗೋಸ್ಕರ ಒಂದು ಕೊಲೆ ಮಾಡಿದ್ದೀರಾ, ಹೆಂಡತಿಗೆ ಸಿಗರೇಟ್‌ನಲ್ಲಿ ಸುಟ್ಟಿ ನಾಯಿಗೆ ಹೊಡೆದಂಗೆ ಹೊಡೆದಿದ್ದೀರಾ... ಒಂದೆರಡು ಪೆಗ್ ಹಾಕಿ ಬಾರ್ ಸಪ್ಲೇಯರ್‌ಗೆ ಬಾರಿಸಿದ್ದೀರಾ, ಆಗೊಂದು ಈಗೊಂದು ಹಲ್ಕಾ ಪದದ ಆಡಿಯೋ ರಿಲೀಸ್ ಮಾಡಿದ್ದೀರಾ... ನೂರಾರು ಜನಗಳಿಗೆ ಸಹಾಯ ಮಾಡಿರುವ ನಿಮ್ಮನ್ನು ಒಂದೆರಡು ತಪ್ಪನ್ನು ಸಮಾಜ ಸಹಿಸುವುದಿಲ್ಲವೇ? ಜೈ ಡಿ ಬಾಸ್. ಅದೇನೆ ಆಗ್ಲಿ ಬಾಸ್... ನಿಮ್ಮ ನಡತೆ ನಮ್ಮ ಯುವ ಪೀಳಿಗೆಗೆ ಸ್ಫೂರ್ತಿ. ಅಭಿಮಾನಿಗಳನ್ನೇ ಸೆಲಿಬ್ರೆಟಿ ಅನ್ನುವ ನೀವು ನಿಮ್ಮ ಅಪ್ಪಟ ಅಭಿಮಾನಿಗಳಾದ ಅಲಿಯಾಸ್ ನಿಮ್ಮ ಕೊಲೆ ಕೇಸಿನ ಸಹಪಾಟಿಗಳ ಜೊತೆಯೇ ನೀವು ಇರೋದಿಕ್ಕೆ ಮನಸ್ಸು ಮಾಡಿದ್ದೀರ ಅಥವಾ ಆ ಪುಣ್ಯ ಅವಕಾಶವನ್ನ ಘನ ಸರ್ವೋಚ್ಚ ನ್ಯಾಯಾಲಯವೇ ಮಾಡಿಕೊಟ್ಟಿದೆ!! ದಯವಿಟ್ಟು ಈ ಅವಕಾಶವನ್ನ ಮಿಸ್ ಮಾಡ್ಕೊಬೇಡಿ ಬಾಸ್... ಹೇಗೋ ಜೈಲಲ್ಲೇ ಇದ್ದೀರಿ, ಅಲ್ಲೇ ಆರಾಮಾಗಿರಿ ಬಾಸ್....ಇಷ್ಟೇ ನನ್ನ ಕೋರಿಕೆ. -ಜೈ ಡಿಬಾಸ್ (ಅಭಿಮಾನಿಯೊಬ್ಬರ ಖಾಸಗಿ ಅನಿಸಿಕೆ)

# ಒಳಗಿದ್ದುಕೊಂಡೇ ಹೊರಗಡೆ ಸುಲಿಗೆ ಮಾಡುತ್ತಿರುವ ರೌಡಿ ಖೈದಿಗಳು!

ಬೆಂಗಳೂರಿನಲ್ಲಿ ಕೆಲ ರೌಡಿಗಳು ಜೈಲಿನ ಒಳಗಿದ್ದುಕೊಂಡೇ ಹೊರಗಡೆ ಸುಲಿಗೆ ಮಾಡುತ್ತಿರುವ ವಿಲಕ್ಷಣ ಪ್ರಕರಣವಿದು! ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನಲ್ಲಿರುವ ರೌಡಿ ಕೈದಿಗಳು, ಈ ಮೊದಲು ಜೈಲಿನಲ್ಲಿದ್ದು ಆನಂತರ ಜಾಮೀನಿನ ಮೇರೆಗೆ ಹೊರಗೆ ತೆರಳಿರುವ ವಿಚಾರಣಾಧೀನ ಕೈದಿಗಳನ್ನು ಬೆದರಿಸಿ ಹಣ ವಸೂಲಿ ಮಾಡುತ್ತಿದ್ದಾರೆ ಎಂಬ ಅಘಾತಕಾರಿ ಅಂಶ ಬಯಲಾಗಿದೆ! ಹಾಗೆ ವಸೂಲಿ ಮಾಡುವ ಹಣವನ್ನು ಫೋನ್ ಪೇ, ಗೂಗಲ್ ಪೇ ಮೂಲಕ ತಮ್ಮ ಅಕೌಂಟುಗಳಿಗೆ ಪಾವತಿಸುತ್ತಿದ್ದಾರೆ ಎಂದು ಹೇಳಲಾಗಿದೆ. ಈ ಬಗ್ಗೆ ಸಿಸಿಬಿಯಲ್ಲಿ ಪ್ರಕರಣ ದಾಖಲಾಗಿದೆ! ಬೆಂಗಳೂರಿನ ಪರಪ್ಪನ ಅಗ್ರಹಾರ ಸೆಂಟ್ರಲ್ ಜೈಲಿನಲ್ಲಿ ಇದುವರೆಗೂ ಏನೇನು ಅಪರಾ ತಪರಾ ನಡೆದಿದೆ, ನಡೆಯುತ್ತಿದೆ ಎಂಬುದನ್ನು ಮಾಧ್ಯಮಗಳ ಮೂಲಕ ಅರಿಯುತ್ತಿದ್ದೀರಿ. ಇದೀಗ ಹೊಸತೊಂದು ದಂಧೆ ಬಹಿರಂಗ ವಾಗಿದೆ! ಈ ಜೈಲಿನ ಒಳಗಿರುವ ಕೆಲ ರೌಡಿ ಇಸಮುಗಳು, ಜಾಮೀನು ಪಡೆದು ಹೊರಹೋಗಿರುವ ಕೈದಿಗಳಿಂದ ಸುಲಿಗೆ ಮಾಡುತ್ತಿರುವ ದಂಧೆ ಸ್ಫೋಟವಾಗಿದೆ!

ಜಾಮೀನಿನ ಮೇಲೆ, ಪೇರೋಲ್ ಮೇಲೆ ಹೊರಗಡೆ ಹೋಗಿರೋ ಸಣ್ಣಪುಟ್ಟ ಖೈದಿಗಳನ್ನು ಹೆದರಿಸಿ, ಫೋನ್ ಪೇ, ಗೂಗಲ್ ಪೇ ಮೂಲಕ ಹಣ ವಸೂಲಿ ಮಾಡುತ್ತಿರೋ ಬಗ್ಗೆ ಸಿಸಿಬಿಯಲ್ಲಿ ಪ್ರಕರಣ ದಾಖಲಾಗಿದೆ! ಈ ಮೂಲಕ ಸೆಂಟ್ರಲ್ ಜೈಲಿನ ಮತ್ತೊಂದು ಕರಾಳ ದಂಧೆ ಜಗಜ್ಜಾಹೀರು ಆಗುವುದರ ಜೊತೆಗೆ, ಒಳಗಡೆ ಮೊಬೈಲ್ ಬಳಕೆಗೆ ಸಂಪೂರ್ಣ ಕಡಿವಾಣ ಬಿದ್ದಿಲ್ಲ ಎಂಬುದು ಖಚಿತ ವಾಗಿದೆ!

ಜೈಲಿನಲ್ಲಿರುವ ಕೆಲ ರೌಡಿ ಕೈದಿಗಳು ತಮ್ಮ ಮೋಜು, ಮಸ್ತಿ ಸಲುವಾಗಿ, ಒಳಗಿನ ಭ್ರಷ್ಟರಿಗೆ ಲಂಚ ತಿನ್ನಿಸಿ ತಾವು ಬಿರಿಯಾನಿ ಕಬಾಬ್ ಮುಕ್ಕಲು ಜಾಮೀನು ಪಡೆದು ಹೊರ ಹೋಗಿರುವ ಕೈದಿಗಳಿಗೆ ಕರೆ ಮಾಡಿ ಹೆದರಿಸಿ ಹಣ ಪಡೆಯುತ್ತಿದ್ದಾರೆ! ಫೋನ್ ಪೇ ಹಾಗೂ ಗೂಗಲ್ ಪೇ ಮುಖಾಂತರ ಹಣ ವರ್ಗಾಯಿಸಿಕೊಂಡು ಜೈಲಿಗೆ ತಲುಪಿಸಲು ತಮ್ಮ ಸಂಬಂಧಿಕರನ್ನು ನೇಮಕ ಮಾಡಿಕೊಂಡಿದ್ದಾರೆ. ಕೈದಿಗಳ ಉಪಟಳ ಹಾಗೂ ಜೀವ ಬೆದರಿಕೆಗೆ ಬೇಸತ್ತ ಆರೋಪಿಯೊಬ್ಬರು ಜೈಲಿನೊಳಗೆ ನಡೆಯುತ್ತಿರುವ ಕಾರ್ಯಾಚರಣೆಗಳನ್ನೆಲ್ಲ ಇದೀಗ ಸಿಸಿಬಿ ಪೊಲೀಸರ ಮುಂದೆ ಬಿಚ್ಚಿಟ್ಟಿದ್ದಾನೆ!

**ಹರ್ಷಿತ್, ಗಂಗರಾಜು, ಲಿಖಿತ್**

ಈ ನಿಟ್ಟಿನಲ್ಲಿ ಅರುಳ್ಕುಮಾರ್ ಎಂಬ ವ್ಯಕ್ತಿ ನೀಡಿದ ದೂರಿನ ಅನ್ವಯ ಪರಪ್ಪನ ಅಗ್ರಹಾರದಲ್ಲಿರುವ ಜೈಲಿನಲ್ಲಿಅತ್ಯಾಚಾರ ಪ್ರಕರಣದಲ್ಲಿ ಸಜಾ ಕೈದಿಗಳಾಗಿರುವ ಮಾಗಡಿ ಮೂಲದ ಹರ್ಷಿತ್, ಗಂಗರಾಜು ಹಾಗೂ ಇವರ ಪರವಾಗಿ ತನ್ನ ಯುಪಿಐ ಐಡಿಗಳಿಗೆ ಹಣ ಹಾಕಿಸಿಕೊಳ್ಳುತ್ತಿದ್ದ ಲಿಖಿತ್ ಎಂಬುವವನ ವಿರುದ್ಧ ಎಫ್‌ಐಆರ್ ದಾಖಲಾಗಿದೆ! ಈ ಕೃತ್ಯದಲ್ಲಿ ನೆಲ್ಸನ್ ಸಾವನ್ ಅಲಿಯಾಸ್ ಬಬ್ಲು, ವಿಜಿ ಅಲಿಯಾಸ್ ಗುರು, ಚೇತನ್ ಹಾಗೂ ಶಂಕರ್ ಎಂಬ ರೌಡಿಶೀಟರ್ಸ್ ಕೂಡ ಭಾಗಿಯಾಗಿದ್ದಾರೆ ಎಂದು ತಿಳಿದುಬಂದಿದ್ದು, ಇವರ ವಿರುದ್ಧವೂ ಎಫ್‌ಐಆರ್ ದಾಖಲಾಗಿದೆ.

**ವಿಚಾರಣಾ ಖೈದಿಗಳೇ ಟಾರ್ಗೆಟ್!**

ಎನ್‌ಡಿಪಿಎಸ್ ಪ್ರಕರಣದಲ್ಲಿ ಜೈಲಿನಲ್ಲಿದ್ದ ಅರುಳುಕುಮಾರ್‌ಗೆ ಹರ್ಷಿತ್ ಸೇರಿದಂತೆ ಇತರರು ಪರಿಚಯವಾಗಿದ್ದರು. ಎರಡು ತಿಂಗಳ ಹಿಂದೆ ಜಾಮೀನು ಪಡೆದು ಅರುಳ್ ಜೈಲಿಂದ ಬಿಡುಗಡೆಯಾಗಿದ್ದ, ಜೈಲಿನಲ್ಲಿರುವ ನೆಲ್ಸನ್ ಸಾವನ್ ಅಲಿಯಾಸ್ ಬಬ್ಲುಹಾಗೂ ಗುರು, ಅವರ ಸಹಚರರು ನಿರಂತರವಾಗಿ ವಾಟ್ಸಾಪ್ ಕರೆಗಳನ್ನು ಮಾಡಿ ಹೇಳಿದ ನಂಬರ್ಗಳಿಗೆ ಫೋನ್ ಪೇ ಮಾಡುವಂತೆ ಬೆದರಿಕೆ ಒಡ್ಡುತ್ತಿದ್ದರು. ಹಣ ವರ್ಗಾವಣೆ ಮಾಡದಿದ್ದರೆ ಜೈಲಿಂದ ಬಿಡುಗಡೆಯಾದ ಬಳಿಕ ಕೊಲ್ಲುವುದಾಗಿ ಬೆದರಿಸುತ್ತಿದ್ದರು. ಜೀವ ಬೆದರಿಕೆಯಿಂದ ಹಲವು ಬಾರಿ ಅವರು ನೀಡಿದ್ದ ನಂಬರ್‌ಗಳಿಗೆ ಫೋನ್ ಪೇ ಮಾಡಿದ್ದೆ ಎಂದು ದೂರುದಾರ ಆರೋಪಿಸಿದ್ದಾನೆ.

ಸಜಾ ಕೈದಿಗಳಾದ ಹರ್ಷಿತ್ ಹಾಗೂ ಮುನಿರಾಜು ಸೇರಿ ಇತರ ಖೈದಿಗಳು ಜೈಲಿಂದ ಬಿಡುಗಡೆಯಾಗುವ ಆರೋಪಿಗಳನ್ನೆ ವಸೂಲಿಗೆ ಟಾರ್ಗೆಟ್ ಮಾಡಿಕೊಂಡಿದ್ದರು. ಜೈಲಿನಲ್ಲಿದ್ದಾಗ ಪರಿಚಯವಾಗುತ್ತಿದ್ದ ಆರೋಪಿಗಳು, ಮೊಬೈಲ್ ಸಂಖ್ಯೆ ಪಡೆಯುತ್ತಿದ್ದರು. ಬಳಿಕ ಜಾಮೀನು ಪಡೆದು ಬಿಡುಗಡೆಯಾಗುತ್ತಿದ್ದಂತೆ ವಾಟ್ಸಾಪ್ ಕರೆ ಮಾಡಿ ಹಣಕ್ಕೆ ಬೇಡಿಕೆ ಇಡುತ್ತಿದ್ದರು. ಜತೆಗೆ, ಹರ್ಷಿತ್ ಸಂಬಂಧಿಯಾದ ಲಿಖಿತ್ ಎಂಬುವವನಿಂದ ಫೋನ್ ಪೇ ಮಾಡಿಸುತ್ತಿದ್ದರು. ಫೋನ್ ಪೇಯಿಂದ ಜಮಾ ಆದ ಮೊತ್ತವನ್ನು 'ಡ್ರಾ' ಮಾಡಿಕೊಳ್ಳುತ್ತಿದ್ದ ಲಿಖಿತ್, ಜೈಲಿನಲ್ಲಿ ಕೈದಿಗಳಿಗೆ ತಲುಪಿಸುತ್ತಿದ್ದ ಎಂದು ಹಿರಿಯ ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ. ಇದೇ ಮಾದರಿಯಲ್ಲಿ ವಾಲೆ ಅರುಣ್ ಕೊಲೆ ಪ್ರಕರಣದಲ್ಲಿ ಜೈಲಿನಲ್ಲಿರುವ ಚೇತನ್ ಎಂಬುವವನು ಹೊರಗಡೆ ಇರುವ ತನ್ನ ಸಂಬಂಧಿ ಲೋಕೇಶ್ ರಾವ್ ಎಂಬುವವನ ಮುಖಾಂತರ ಹಣ ವಸೂಲಿ ಮಾಡುತ್ತಿದ್ದ, ಜೈಲಿನಲ್ಲಿದ್ದ ರೌಡಿಶೀಟರ್ ಶೇಖರ್ ಕೂಡ ಫೋನ್ ಪೇ ಮುಖಾಂತರ ಹಣ ಪಡೆಯುತ್ತಿದ್ದ ಎಂಬ ವಿಚಾರ ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ ಎಂದು ಅಧಿಕಾರಿ ತಿಳಿಸಿದ್ದಾರೆ.

**ಕಸ್ಟಡಿಗೆ ಪಡೆಯಲು ಸಿದ್ಧತೆ**

ಜೈಲಿನಲ್ಲಿರುವ ಸಜಾ ಕೈದಿಗಳು ಹಣ ವಸೂಲಿ ಮಾಡುತ್ತಿದ್ದ ವಿಚಾರಕ್ಕೆ ಸಂಬಂಧಿಸಿ 14 ಯುಪಿಐ ವಿಳಾಸಗಳನ್ನು ಪತ್ತೆಹಚ್ಚಲಾಗಿದೆ. ಸದರಿ ಯುಪಿಐಗಳಿಂದ ಎಷ್ಟು ಹಣ ವಹಿವಾಟು ನಡೆದಿದೆ ಎಂಬುದರ ಮಾಹಿತಿ ನೀಡುವಂತೆ ಬ್ಯಾಂಕ್‌ಗಳಿಗೆ ಪತ್ರ ಬರೆಯಲಾಗಿದ್ದು, ಮಾಹಿತಿ ಸಿಕ್ಕ ಬಳಿಕ ಎಷ್ಟು ಪ್ರಮಾಣದ ಹಣವನ್ನು ಖೈದಿಗಳು ವಸೂಲಿ ಮಾಡಿದ್ದಾರೆ ಎಂಬುದು ಸ್ಪಷ್ಟವಾಗಲಿದೆ. ಸಜಾ ಖೈದಿಗಳಾದ ಹರ್ಷಿತ್, ಗಿರೀಶ್, ಮುನಿರಾಜು ಸೇರಿದಂತೆ ಹಲವು ಆರೋಪಿತ ಕೈದಿಗಳ ವಿಚಾರಣೆ ನಡೆಸುವ ಸಲುವಾಗಿ ಕಸ್ಟಡಿಗೆ ನೀಡುವಂತೆ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಲಾಗಿದೆ. ನ್ಯಾಯಾಲಯದ ಅನುಮತಿ ಸಿಕ್ಕ ಬಳಿಕ ಕಸ್ಟಡಿಗೆ ಪಡೆದು ತನಿಖೆ ನಡೆಸಲಾಗುವುದು ಎಂದು ಸಿಸಿಬಿ ಅಧಿಕಾರಿಗಳು ತಿಳಿಸಿದ್ದಾರೆ. ☯

# ಪತ್ನಿಯನ್ನು ಹಾದರಕ್ಕೆ ಒತ್ತಾಯಿಸುತ್ತಿದ್ದ ಅತ್ತೆಯನ್ನು ಪೀಸ್ ಪೀಸ್ ಮಾಡಿ ಬಿಸಾಡಿದ ಡಾಕ್ಟರ್ ಅಳಿಯ!


ಆರೋಪಿ ರಾಮಚಂದ್ರ

**ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ನಾಲ್ಕು ದಿಕ್ಕುಗಳಲ್ಲೂ ಮಧ್ಯವಯಸ್ಕ ಮಹಿಳೆಯ ಶವದ ಭಾಗಗಳು ಪತ್ತೆಯಾಗಿದ್ದವು! ಅದನ್ನು ಕಂಡು ಜನರು ಬೆಚ್ಚಿಬಿದ್ದಿದ್ದರು. ಕೊಲೆಯಾದ ಮಹಿಳೆ ಯಾರೆಂಬುದು ಈಗ ಬಹಿರಂಗವಾಗಿದೆ. ಮಾತ್ರವಲ್ಲ; ಆರೋಪಿಗಳೂ ಸಿಕ್ಕಿಬಿದ್ದಿದ್ದಾರೆ!**


ಕೊಲೆಯಾದ ಲಕ್ಷ್ಮೀದೇವಮ್ಮ



ಮಧ್ಯವಯಸ್ಕ ಮಹಿಳೆಯನ್ನು ಭೀಕರವಾಗಿ ಕೊಲೆ ಮಾಡಿದ ನಂತರ ಶವವನ್ನು ತುಂಡು ತುಂಡಾಗಿ ಕತ್ತರಿಸಿ ಬಿಸಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಕೊರಟಗೆರೆ ಪೊಲೀಸರು ನಾಲ್ವರನ್ನು ವಶಕ್ಕೆ ಪಡೆದುಕೊಂಡಿದ್ದಾರೆ. ಮೃತ ಮಹಿಳೆಯನ್ನು ಲಕ್ಷ್ಮೀದೇವಮ್ಮ ಎಂದು ಗುರುತಿಸಲಾಗಿದೆ. ಮೃತ ಮಹಿಳೆಯ ಅಳಿಯ ಡಾ.ರಾಮಚಂದ್ರ ಸೇರಿದಂತೆ ನಾಲ್ವರನ್ನು ಕೊರಟಗೆರೆ ಪೊಲೀಸರು ವಶಕ್ಕೆ ಪಡೆದುಕೊಂಡು ವಿಚಾರಣೆಗೆ ಒಳಪಡಿಸಿದ್ದಾರೆ. ಮೃತ ಲಕ್ಷ್ಮೀದೇವಮ್ಮ, ತನ್ನ ಮಗಳನ್ನು ವೇಶ್ಯಾವಾಟಿಕೆಗೆ ಬಳಸಿಕೊಳ್ಳಲು ಹೊಂಚು ಹೂಡಿದ್ದಳಂತೆ! ಇದರಿಂದ ಬೇಸತ್ತ ಅಳಿಯ ಡಾ.ರಾಮಚಂದ್ರ ಸ್ನೇಹಿತರ ಸಹಾಯ ಪಡೆದುಕೊಂಡು ಅತ್ತ ಲಕ್ಷ್ಮೀದೇವಮ್ಮಳನ್ನು ಫಾರ್ಮ್‌ಹೌಸ್‌ನಲ್ಲಿ ಕೊಲೆ ಮಾಡಿದ್ದಾರೆ! ಕೊಲೆ ನಂತರ ಮೃತದೇಹವನ್ನು ತುಂಡುಗಳನ್ನಾಗಿ ಮಾಡಿ ವಿವಿಧೆಡೆ ಎಸೆದಿದ್ದಾನೆ!

ಕೊಲೆಯಾದ ಲಕ್ಷ್ಮೀದೇವಮ್ಮ ತುಮಕೂರು ತಾಲ್ಲೂಕಿನ ಬೆಳ್ಳಾವಿಯವರು. ಇವರ ಅಳಿಯ ಡಾಕ್ಟರ್ ರಾಮಚಂದ್ರ, ಡೆಂಟಿಸ್ಟ್ ಆಗಿದ್ದರು. ಡೆಂಟಿಸ್ಟ್ ರಾಮಚಂದ್ರ, ಹುಳುಕು ಹಲ್ಲು ತೆಗೆಯುವ ಕೈಗಳಲ್ಲೇ ಅತ್ತೆಯನ್ನೇ ಪೀಸ್ ಪೀಸ್ ಮಾಡಿದ್ದಾನೆ! ಬಳಿಕ ಶವದ ತುಂಡುಗಳನ್ನು ಕೊರಟಗೆರೆ ತಾಲ್ಲೂಕಿನ ನಾಲ್ಕು ಭಾಗಗಳಲ್ಲಿ ಎಸೆದಿದ್ದಾನೆ. ಬಳಿಕ ಪ್ರಾಯಶ್ಚಿತ್ತ ಮಾಡಿಕೊಳ್ಳಲು ಆರೋಪಿಗಳ ಜೊತೆ ಧರ್ಮಸ್ಥಳ, ಹೊರನಾಡು ಯಾತ್ರೆ ಹೋಗಿ ದೇವರ ದರ್ಶನ ಪಡೆದಿದ್ದಾರೆ!

**ಕುಟುಂಬಸ್ಥರು ನಮ್ಮದಲ್ಲ ಎಂದಿದ್ರು!**

ಶವದ ಭಾಗಗಳನ್ನ ನೋಡಿದ್ದ ಲಕ್ಷ್ಮೀದೇವಮ್ಮನ ಸಂಬಂಧಿಕರು ಇದು ಲಕ್ಷ್ಮೀದೇವಮ್ಮ ಅಲ್ಲ ಎಂದಿದ್ರು. ಇದೇ ಕಾರಣಕ್ಕೆ ಯಾರು ಮಾತಾಡಿರಲ್ಲಿಲ್ಲ. ಆದ್ರೀಗ ಪೊಲೀಸರ ತನಿಖೆಯಲ್ಲಿ ಅಸಲಿ ಸತ್ಯ ಗೊತ್ತಾಗಿದೆ.

ತುಮಕೂರು ಜಿಲ್ಲೆಯ ಕೊರಟಗೆರೆ ತಾಲೂಕಿನ ಹೊಳವನಹಳ್ಳಿ ಹೋಬಳಿಯ ಚಿಂಪುಗಾನಹಳ್ಳಿ ಬಳಿ ಆಗಸ್ಟ್ 7, 2025ರ ಗುರುವಾರ 8 ಕಡೆ ಮಹಿಳೆಯ ಕೈಗಳು ಸೇರಿದಂತೆ ದೇಹದ ಭಾಗಗಳು ಸಿಕ್ಕಿದ್ದವು. ಆಗಸ್ಟ್ 8ರ ಶುಕ್ರವಾರ ಮತ್ತೆ ಸಿದ್ದರಬೆಟ್ಟ ಮತ್ತು ಮಲ್ಲೇಕಾವು ಸುತ್ತಮುತ್ತ 10 ಕಡೆಯ ವಿವಿಧ ಸ್ಥಳಗಳಲ್ಲಿ ಕಪ್ಪು ಕವರಿನ ಪಾಕೇಟ್‌ನಲ್ಲಿ ಮಹಿಳೆಯ ಕಾಲು, ದೇಹ ಸೇರಿದಂತೆ ತಲೆ ಸಿಕ್ಕಿತ್ತು. ಕೊರಟಗೆರೆಯ ಸಿದ್ದರಬೆಟ್ಟದ ಸಮೀಪ, ಮರೇನಾಯಕನಹಳ್ಳಿ, ಮಲ್ಲೇಕಾವು, ಚಿಕ್ಕಾವಳಿ ಕೆರೆ, ಲಿಂಗಾಪುರ, ಜೋನಿಗರಹಳ್ಳಿ ಸೇರಿದಂತೆ 10 ಕಡೆಗಳಲ್ಲಿ ಮಹಿಳೆಯ ಶವದ ತುಂಡುಗಳು ಸಿಕ್ಕಿದ್ದವು. ಮಹಿಳೆಯ ಶವದ ದೇಹದ ತುಂಡಿನ ಜೊತೆ ಸಿಕ್ಕಿರುವ ಪಾಕೇಟ್‌ನಲ್ಲಿ ಕಬ್ಬಿಣದ ಮೇಟಲ್ ಪೀಸ್‌ಗಳು ಪತ್ತೆಯಾಗಿದ್ದವು. ಕೊರಟಗೆರೆ ಕ್ಷೇತ್ರದ ನಾಲ್ಕು ದಿಕ್ಕಿನ ರಸ್ತೆ ಬದಿಗಳಲ್ಲಿ ಶವದ ತುಂಡುಗಳನ್ನು ಹಾಕಿರುವುದರ ಹಿಂದೆ ಆರಂಭದಲ್ಲಿ ವಾಮಚಾರದ ಶಂಕೆಯು ವ್ಯಕ್ತವಾಗಿತ್ತು! ಆದ್ರೆ, ಇದೀಗ ಈ ಪ್ರಕರಣ ಮತ್ತೊಂದು ಆಯಾಮವನ್ನು ಪಡೆದುಕೊಂಡಿದೆ.


ಎಸ್ಪಿ ಅಶೋಕ್ ವೆಂಕಟ್

ಲಕ್ಷ್ಮೀದೇವಮ್ಮ ತುಮಕೂರು ತಾಲ್ಲೂಕಿನ ಬೆಳ್ಳಾವಿ ಗ್ರಾಮದವರು. ಅವರಿಗೆ ಇಬ್ಬರು ಹೆಣ್ಣು ಮಕ್ಕಳಿದ್ದು, ಇಬ್ಬರಿಗೂ ಮದುವೆ ಮಾಡಿದ್ದಾರೆ. ಡಾಕ್ಟರ್ ರಾಮಚಂದ್ರ ಒಬ್ಬ ಹೆಣ್ಣು ಮಗಳನ್ನು ಮದುವೆಯಾಗಿ ತುಮಕೂರು ನಗರದ ಕುವೆಂಪು ನಗರದಲ್ಲಿ ವಾಸ ಇದ್ದರು. ಆದರೆ, ತನ್ನ ಹೆಂಡತಿಯನ್ನು ಅತ್ತೆ ಲಕ್ಷ್ಮೀದೇವಮ್ಮ ಆಗ್ಗಾಗ್ಗೆ ಬೆಳ್ಳಾವಿ ಮನೆಗೆ ಕರೆದುಕೊಂಡು ಹೋಗುತ್ತಿದ್ದಳು. ಅತ್ತೆ ಲಕ್ಷ್ಮೀದೇವಮ್ಮ ಸರಿ ಇಲ್ಲ ಎಂಬುದು ಅಳಿಯ ರಾಮಚಂದ್ರನಿಗೆ ನಿಧಾನವಾಗಿ ಗೊತ್ತಾಗಿತ್ತು. ತನ್ನ ಹೆಂಡತಿಯನ್ನು ಅತ್ತೆಯೇ ವೇಶ್ಯಾವಾಟಿಕೆ ಮಾಡಲು ಬಳಸಿಕೊಳ್ಳುತ್ತಾಳೆ ಎಂದು ರಾಮಚಂದ್ರನಿಗೆ ಅನ್ನಿಸಿತ್ತಂತೆ! ಹೀಗಾಗಿ 'ಫರ್‌ವಾಲಿ' ಅತ್ತೆ ಲಕ್ಷ್ಮೀದೇವಮ್ಮನನ್ನು ಕೊಲೆ ಮಾಡಲು ಆರು ತಿಂಗಳ ಹಿಂದೆಯೇ ನಿರ್ಧರಿಸಿದ್ದಾರೆ, ಡಾಕ್ಟರ್ ರಾಮಚಂದ್ರ!



**ಕೊಲೆಗೆ ಪ್ಲ್ಯಾನ್ ಮಾಡಿದ್ದು ಹೇಗೆ?**

ಆಗಸ್ಟ್ 3 ರಂದು ತುಮಕೂರಿನ ಅಳಿಯ-ಮಗಳ ಮನೆಗೆ ಲಕ್ಷ್ಮೀದೇವಮ್ಮ ಬಂದಿದ್ದಾಳೆ. ಬಳಿಕ ತುಮಕೂರು ನಗರದ ಕುವೆಂಪು ನಗರದ ಮನೆಯಿಂದ ಬೆಳ್ಳಾವಿಗೆ ಡ್ರಾಪ್ ಮಾಡುವುದಾಗಿ ಅಳಿಯ ರಾಮಚಂದ್ರನೇ ಕರೆದುಕೊಂಡು ಹೋಗಿದ್ದಾನೆ. ಮನೆಯಿಂದ ಹೊರಟ ಬಳಿಕ ಸ್ವಲ್ಪ ದೂರದಲ್ಲೇ ಕಾರ್‌ನಲ್ಲೇ ವೇಲ್‌ನಿಂದ ಕುತ್ತಿಗೆ ಬಿಗಿದು ಲಕ್ಷ್ಮೀದೇವಮ್ಮಳನ್ನು ಕೊಲೆ ಮಾಡಿದ್ದಾನೆ. ಬಳಿಕ ಕೊರಟಗೆರೆ ತಾಲ್ಲೂಕಿನ ಕೋಳಾಲ ಬಳಿ ತೋಟಕ್ಕೆ ಶವ ತೆಗೆದುಕೊಂಡು ಹೋಗಿ ಸ್ನೇಹಿತ ಸತೀಶ್ ಎಂಬಾತನ ಜೊತೆ ಸೇರಿ ಚರ್ಚೆ ಮಾಡಿದ್ದಾನೆ. ಶವವನ್ನು ಎಲ್ಲಿಯಾದರೂ ಎಸೆದರೆ, ಬೇಗ ಪತ್ತೆಯಾಗುತ್ತೆ. ಕೆರೆಗೆ ಎಸೆದ್ರೂ ಶವ ಪೊಲೀಸರಿಗೆ ಸಿಗುತ್ತೆ. ಹೀಗಾಗಿ ದೇಹದ ಭಾಗಗಳನ್ನು ಪೀಸ್ ಪೀಸ್ ಮಾಡಿದ್ದಾರೆ. ಕೆರೆಗೆ ಬಿಸಾಕಿದರೇ, ತೇಲುತ್ತೆ ಎಂದು ಪ್ಲಾಸ್ಟಿಕ್ ಕವರ್‌ಗೆ ಮೆಟಲ್ ತುಂಡುಗಳನ್ನು ಹಾಕಿ ಅದರ ಜೊತೆಗೆ ಶವದ ತುಂಡುಗಳನ್ನು ಹಾಕಿ ಬಿಸಾಕಲು ಪ್ಲ್ಯಾನ್ ಮಾಡಿದ್ದಾರೆ!


ಆಗಸ್ಟ್ 6 ರಂದು ಮಧ್ಯಾಹ್ನದಿಂದ ರಾತ್ರಿ ತನಕ ಕಾರಿನಲ್ಲಿ ಸುತ್ತಾಡಿ ಕೊರಟಗೆರೆ ತಾಲ್ಲೂಕಿನಾದ್ಯಂತ ಶವದ ತುಂಡುಗಳಿದ್ದ ಪ್ಲಾಸ್ಟಿಕ್ ಕವರ್‌ಅನ್ನು ಬಿಸಾಕಿದ್ದಾರೆ. ಆಗಸ್ಟ್ 7ನೇ ತಾರೀಖು ರಾತ್ರಿ ಸಿದ್ದರಬೆಟ್ಟದ ಹತ್ತಿರ ತಲೆ ಭಾಗ ಪತ್ತೆಯಾಗಿತ್ತು. ಆಗ ಪೊಲೀಸರಿಗೆ ಕೊಲೆಯಾಗಿರೋದು ಲಕ್ಷ್ಮೀದೇವಮ್ಮ ಅಂತ ಖಚಿತವಾಯಿತು. ಬಳಿಕ ಕೊಲೆ ಕೇಸ್ ತನಿಖೆ ಆರಂಭಿಸಿದ್ದರು. ಆಗ ಫೋನ್ ಟವರ್ ಲೋಕೇಷನ್ ಆಧಾರದ ಮೇಲೆ ತನಿಖೆ ನಡೆಸಿದ್ದರು. ಲಕ್ಷ್ಮೀದೇವಮ್ಮ ಮಗಳ ಮನೆಗೆ ಹೋದವಳು ವಾಪಸ್ ಬಂದಿರಲಿಲ್ಲ. ಅಳಿಯ ರಾಮಚಂದ್ರನೇ ಬೆಳ್ಳಾವಿಗೆ ಕರೆದುಕೊಂಡು ಹೋಗುವುದಾಗಿ ಹೊರಟಿದ್ದವನು ಅಲ್ಲಿಗೆ ಹೋಗಿರಲಿಲ್ಲ! ಹೀಗಾಗಿ ಡಾಕ್ಟರ್ ರಾಮಚಂದ್ರನನ್ನು ಪೊಲೀಸರು ವಶಕ್ಕೆ ತೆಗೆದುಕೊಂಡು ವಿಚಾರಣೆಗೆ ನಡೆಸಿದಾಗ, ತಾನೇ ಕೊಲೆ ಮಾಡಿದ್ದಾಗಿ ಪೊಲೀಸರ ಮುಂದೆ ಸತ್ಯ ಬಾಯಿ ಬಿಟ್ಟಿದ್ದಾನೆ. ಕೊಳಾಲ ಬಳಿಯ ತೋಟದ ಸತೀಶ್ ಹಾಗೂ ಆತನ ಸೋದರ ಕಿರಣ್ ಸೇರಿದಂತೆ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ಇತ್ತ ಬೆಳ್ಳಾವಿ ಪೊಲೀಸ್ ಠಾಣೆಯಲ್ಲಿ ಲಕ್ಷ್ಮೀದೇವಮ್ಮನ ಗಂಡ ನಾಪತ್ತೆ ದೂರು ದಾಖಲಿಸಿದ್ದ. ಇದರ ಆಧಾರದ ಮೇಲೆ ಲಕ್ಷ್ಮೀದೇವಮ್ಮನ ಗಂಡನನ್ನು ಕರೆದುಕೊಂಡು ಹೋಗಿ ತಲೆಯ ಭಾಗವನ್ನು ಪೊಲೀಸರು ತೋರಿಸಿದ್ದಾರೆ. ಆದರೇ, ಆತ ಇದು ಲಕ್ಷ್ಮೀದೇವಮ್ಮನ ತಲೆ ಅಲ್ಲ ಎಂದಿದ್ದ. ಆದರೇ, ಪೊಲೀಸರಿಗೆ ಕೊಲೆಯಾಗಿರೋದು ಲಕ್ಷ್ಮೀದೇವಮ್ಮ ಅಂತ ಪೋಟೋ ಹಾಗೂ ಕೊಲೆಯಾದ ತಲೆ ಭಾಗ ನೋಡಿದ್ದಾಗ ಖಚಿತವಾಗಿತ್ತು. ಹೀಗಾಗಿ ಲಕ್ಷ್ಮೀದೇವಮ್ಮ ಕೊನೆಯದಾಗಿ ಕಾಣಿಸಿಕೊಂಡಿದ್ದು ಅಳಿಯ ರಾಮಚಂದ್ರನ ಮನೆಯಲ್ಲೇ. ಸೋ, ರಾಮಚಂದ್ರನನ್ನೇ ವಶಕ್ಕೆ ತೆಗೆದುಕೊಂಡು ವಿಚಾರಣೆ ನಡೆಸಿದ್ದಾಗ, ಕೊಲೆ ಹಿಂದಿನ ರಹಸ್ಯ ಬಯಲಾಗಿದೆ. ತಾನೇ ಕೊಲೆ ಮಾಡಿದ್ದಾಗಿ ರಾಮಚಂದ್ರ ಒಪ್ಪಿಕೊಂಡಿದ್ದಾನೆ. ಕೊಲೆ ಹೇಗೆ ಮಾಡಿದೆ? ತನ್ನೊಡನೆ ಯಾರ್‍ಯಾರು ಭಾಗಿಯಾಗಿದ್ರು ಎಂಬುದನ್ನು ಪೊಲೀಸರ ಎದುರು ಬಾಯಿ ಬಿಟ್ಟಿದ್ದಾನೆ.

**ದೇಹದ ಭಾಗಗಳು ಎಫ್‌ಎಸ್‌ಎಲ್‌ಗೆ ರವಾನೆ!**

ಕೊರಟಗೆರೆ ಪೊಲೀಸ್ ಠಾಣಾ ವ್ಯಾಪ್ತಿಯ ಚಿಂಪುಗಾನಹಳ್ಳಿ ಹಾಗೂ ಲಿಂಗಾಪುರ ಸೇರಿದಂತೆ ಹಲವು ಕಡೆ ಮಹಿಳೆಯ ಕೈಗಳು, ದೇಹದ ಕೆಲವು ಭಾಗಗಳು ಸಿಕ್ಕಿದ್ದು, ಕೈಗಳ ಮೇಲೆ ಎರಡು ಟ್ಯಾಟೂಗಳು ಕಂಡು ಬಂದಿದ್ದು, ಹೆಚ್ಚಿನ ತನಿಖೆಗಾಗಿ ದೇಹದ ಭಾಗಗಳನ್ನು ಎಫ್‌ಎಸ್‌ಎಲ್‌ಗೆ ರವಾನೆ ಮಾಡಲಾಗಿದೆ. ತುಮಕೂರು ಎಸ್ಪಿ ಅಶೋಕ್ ವೆಂಕಟ್ ಅವರು ತನಿಖೆಯನ್ನು ಮುಂದುವರೆಸಿದ್ದಾರೆ. ☯







ಕೊಲೆಯಾದ ರಮೇಶ್

# ಜಮೀನು ವಿವಾದ : ಒಡಹುಟ್ಟಿದ ತಮ್ಮನನ್ನೇ ಮುಗಿಸಿಬಿಟ್ಟ ಅಣ್ಣಯ್ಯ!

**ತಂದೆ ಆಸ್ತಿಯಲ್ಲಿ ಪಾಲು ಬೇಕೆಂದು ನಾಲ್ವರು ಅಣ್ಣತಮ್ಮಂದಿರು ನ್ಯಾಯಾಲಯದ ಮೊರೆ ಹೋಗಿದ್ದು, ವಿಚಾರಣೆ ಬಾಕಿ ಇರುವಾಗ ವಿವಾದಿತ ಜಮೀನಿನಲ್ಲಿ ತಮ್ಮನೊಬ್ಬ ಹಸುಗಳಿಗೆ ತಾತ್ಕಾಲಿಕ ಶೆಡ್‌ವೊಂದನ್ನು ನಿರ್ಮಿಸಲು ಮುಂದಾದನು. ಆಗ ಅಣ್ಣಂದಿರು ಸ್ಥಳಕ್ಕೆ ಬಂದು ಕೇಸು ನಡೆಯುವಾಗ ಶೆಡ್ ನಿರ್ಮಿಸಬಾರದೆಂದು ತಕರಾರು ತೆಗೆದು ಶೆಡ್‌ನ್ನು ಕಿತ್ತು ಹಾಕಲು ಪ್ರಯತ್ನಿಸಿದರಲ್ಲದೆ ಅವಾಚ್ಯ ಶಬ್ದಗಳಿಂದ ಬೈದು ದೊಣ್ಣೆಗಳಿಂದ ಹೊಡೆದು ಬರ್ಬರವಾಗಿ ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಗಳನ್ನು ಬೇತಮಂಗಲ ಠಾಣೆ ಪೊಲೀಸರು ಬಂಧಿಸಿ ಜೈಲಿಗೆ ಕಳುಹಿಸಿದ್ದಾರೆ.**


ಪ್ರಮುಖ ಆರೋಪಿ ಸೀನಪ್ಪ

**ಕೋ**ಲಾರ ಜಿಲ್ಲೆ ಕೆಜಿಎಫ್ ತಾಲ್ಲೂಕಿನ ಕ್ಯಾಸಂಬಳ್ಳಿ ಹೋಬಳಿಗೆ ಸೇರಿದ ಎನ್.ಜಿ. ಹುಲ್ಕೂರು ಗ್ರಾಮದ ಲೇಟ್ ಬುಡ್ಡಪ್ಪ ಮತ್ತು ಗಂಗೋಜಮ್ಮ ದಂಪತಿಗಳಿಗೆ ಸಂಪಂಗಿ, ಬಿ. ಸೀನಪ್ಪ, ರಘುಪತಿ ಹಾಗೂ ರಮೇಶ್ ಎಂಬ ನಾಲ್ವರು ಮಕ್ಕಳಿದ್ದು, ದೊಡ್ಡ ಮಗ ಸಂಪಂಗಿ ವ್ಯವಸಾಯ ಮಾಡಿಕೊಂಡು ಪೂಗಾನಹಳ್ಳಿ


ಎಸ್ಪಿ ಕೆ.ಎಂ. ಶಾಂತರಾಜು


ಡಿವೈಎಸ್ಪಿ ಪಾಂಡುರಂಗ

ಗೇಟ್ ಬಳಿ ತನ್ನ ಹೆಂಡತಿ, ಮಕ್ಕಳೊಂದಿಗೆ ವಾಸವಾಗಿದ್ದರು. ಎರಡನೇ ಮಗ ಸೀನಪ್ಪನು ಊರೂರು ಸುತ್ತಿ ಗುಲ್ಕನ್ ಮಾರಾಟ ಮಾಡುವುದರ ಜೊತೆಗೆ ವ್ಯವಸಾಯ ಮಾಡಿಕೊಂಡು ಎನ್.ಜಿ. ಹುಲ್ಕಾರು ಗ್ರಾಮದಲ್ಲಿ ತನ್ನ ಹೆಂಡತಿ, ಮಕ್ಕಳೊಂದಿಗೆ ವಾಸವಾಗಿರುತ್ತಾರೆ. ಮೂರನೇಯವನಾದ ರಘುಪತಿ ಮತ್ತು ನಾಲ್ಕನೇಯವನಾದ ರಮೇಶ್ ವ್ಯವಸಾಯದ ಜೊತೆಗೆ ಸಣ್ಣಪುಟ್ಟ ಕೆಲಸ ಮಾಡಿಕೊಂಡು ತನ್ನ ಹೆಂಡತಿ, ಮಕ್ಕಳೊಂದಿಗೆ ಎನ್.ಜಿ. ಹುಲ್ಕೂರಿನಲ್ಲಿ ವಾಸವಾಗಿರುತ್ತಾರೆ. ತಂದೆ ಬುಡ್ಡಪ್ಪನವರು ಸುಮಾರು ವರ್ಷಗಳ ಹಿಂದೆ ವಯೋಸಹಜ ಖಾಯಿಲೆಯಿಂದ ಮೃತಪಟ್ಟಿದ್ದು, ಇವರು ಸಾಯುವುದಕ್ಕೆ ಮುನ್ನವೇ ತನ್ನ ತಂದೆಗೆ ಸೇರಿದ ಪಿತ್ರಾರ್ಜಿತ ಆಸ್ತಿಯನ್ನು ತನ್ನ ನಾಲ್ಕು ಜನ ಮಕ್ಕಳಿಗೆ ಸಮವಾಗಿ ಭಾಗ ಮಾಡಿಕೊಟ್ಟಿರುತ್ತಾರೆ. ಅವರವರಿಗೆ ಬಂದಿರುವ ಜಮೀನುಗಳಲ್ಲಿ ವ್ಯವಸಾಯ ಮಾಡಿಕೊಂಡು ಸುಖವಾಗಿ ಜೀವನ ಸಾಗಿಸುತ್ತಿರುತ್ತಾರೆ. ಆದರೆ ಒಂದು ಕಡೆ ಇದ್ದ 12 ಗುಂಟೆ ಜಮೀನಿನಲ್ಲಿ ಹಂಚಿಕೆ ಮಾಡುವಾಗ ಸರಿಯಾಗಿ ಭಾಗ ಮಾಡಿಲ್ಲ. ದೊಡ್ಡವನಿಗೆ ಬರಬೇಕಾಗಿದ್ದ ಕಡೆ ಚಿಕ್ಕವರಿಗೆ ಕೊಟ್ಟಿದ್ದಾರೆನ್ನುವ ವಿಚಾರದಲ್ಲಿ ಅಣ್ಣತಮ್ಮಂದಿರ ನಡುವೆ ವಿವಾದ ಇದ್ದು, ಈ ಬಗ್ಗೆ ಸಣ್ಣಪುಟ್ಟ ಗಲಾಟೆಗಳು ನಡೆದು ಗ್ರಾಮದಲ್ಲಿ ನ್ಯಾಯ ಪಂಚಾಯಿತಿಗಳು ನಡೆದಿದ್ದವು. ಈ ವಿವಾದ ಪೊಲೀಸ್ ಠಾಣೆ ಮೆಟ್ಟಿಲೇರಿತು. ಅಲ್ಲಿ ಅಣ್ಣತಮ್ಮಂದಿರ ನಡುವೆ ಹೊಂದಾಣಿಕೆ ಇಲ್ಲದೆ ಸಮಸ್ಯೆ ಬಗೆಹರಿಯದ ಕಾರಣ ನ್ಯಾಯಾಲಯದಲ್ಲಿ ದಾವೆ ಹೂಡಿದರು. ನ್ಯಾಯಾಲಯದಲ್ಲಿ ಪ್ರಕರಣವು ವಿಚಾರಣೆಯ ಹಂತದಲ್ಲಿರುವಾಗ ಅಣ್ಣತಮ್ಮಂದಿರ ನಡುವೆ ಗಲಾಟೆಯಾಗಿ ನಡೆಯಬಾರದ ಘಟನೆಯೊಂದು ನಡೆದು ಹೋಯಿತು.


### ಗಂಡನ ಕೊಲೆ ಬಗ್ಗೆ ಪತ್ನಿ ದೂರು

ಎನ್.ಜಿ. ಹುಲ್ಕೂರು ಗ್ರಾಮದ ಮೃತ ರಮೇಶ್‌ರವರ ಸೊಸೆ ತರೀಷ (28)ರವರು ಜೂನ್ 4ರಂದು ರಾತ್ರಿ 8ಂಟೆಗೆ

**ಕೋಲಾರ**

✍ ಕೋಲಾರ ಮಂಜು


ಬೇತಮಂಗಲ ಪೊಲೀಸ್ ಠಾಣೆಗೆ ಹಾಜರಾಗಿ ತಮ್ಮ ಮಾವನ ತಂದೆ ಬುಡ್ಡಪ್ಪನವರಿಗೆ ಸೇರಿದ ಪಿತ್ರಾರ್ಜಿತ ಆಸ್ತಿಯನ್ನು ತನ್ನ ಮಕ್ಕಳಾದ ಸಂಪಂಗಿ ಅಲಿಯಾಸ್ ಸಂಪಂಗೆಪ್ಪ (70), (ಬಿ. ಸೀನಪ್ಪ(65), ರಘುಪತಿ (60), ರಮೇಶ್ (56) ರವರಿಗೆ ಭಾಗ ಮಾಡಿಕೊಟ್ಟಿದ್ದು ಎನ್.ಜಿ. ಹುಲ್ಕೂರು ಗ್ರಾಮದ ಸಮೀಪ ಇರುವ ಸರ್ವೆ ನಂಬರ್ 2ರಲ್ಲಿನ 12 ಗುಂಟೆ ಜಮೀನಿನಲ್ಲಿ ತಲಾ 3 ಗುಂಟೆಯಂತೆ ಹಂಚಿಕೆ


ಪಿಐ ರಂಗಶಾಮಯ್ಯ


ಪಿಎಸ್ಐ ಗುರುರಾಜ ಚಿಂತಾಕಲ


ಮಾಡಿದ್ದು, ಎಲ್ಲರೂ ಅವರವರ ಸ್ವಾಧೀನದಲ್ಲಿದ್ದರು. ಆದರೆ ಜಮೀನು ಭಾಗ ಮಾಡುವಾಗ ಸರಿಯಾಗಿ ಮಾಡಿಲ್ಲವೆಂಬ ತಕರಾರು ಇದ್ದು ನ್ಯಾಯ ಪಂಚಾಯಿತಿ, ಪೊಲೀಸ್ ಠಾಣೆಯಾದ ನಂತರ ನ್ಯಾಯಾಲಯದಲ್ಲಿ ಸಿವಿಲ್ ದಾವೆ ಹೂಡಿದರು. ಈಗ ವಿಚಾರಣೆಯ ಹಂತದಲ್ಲಿತ್ತು.

ಜೂನ್ 13ರಂದು ನಮ್ಮ ಮಾವ ರಮೇಶ್‌ರವರು ತಮ್ಮ ಸ್ವಾಧೀನದಲ್ಲಿದ್ದ ಮೂರು ಗುಂಟೆ ಜಮೀನಿನಲ್ಲಿ ಎನ್.ಜಿ. ಹುಲ್ಕೂರು ಗ್ರಾಮದ ವಾಸಿಯಾದ ಶಂಕರ್ ಎಂಬುವವರಿಗೆ ಹಸುಗಳನ್ನು ಕಟ್ಟಿಕೊಳ್ಳುವ ಸಲುವಾಗಿ ತಾತ್ಕಾಲಿಕವಾಗಿ ಶೆಡ್‌ವೊಂದನ್ನು ನಿರ್ಮಿಸಿಕೊಳ್ಳಲು ಅನುವು ಮಾಡಿಕೊಟ್ಟಿದ್ದರು. ಮರುದಿನ ಸಂಜೆ ಸುಮಾರು 6 ಗಂಟೆ ಸಮಯದಲ್ಲಿ ಮಾವ ರಮೇಶ್‌ರವರು ಶೆಡ್ ಬಳಿ ಬಂದಾಗ ಅದೇ ಸಮಯಕ್ಕೆ ಅಲ್ಲಿಗೆ ಸೀನಪ್ಪ ಮತ್ತು ಸಂಗೆಪ್ಪನ ಪತ್ನಿ ರತ್ನಮ್ಮನವರು ಬಂದು ರಮೇಶ್‌ರವರನ್ನು ಕುರಿತು ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿದ್ದರೂ ಈ ಜಾಗದಲ್ಲಿ ಶೆಡ್ ಹಾಕಿಸಿದ್ದೀಯಾ ಬೋಳಿ ಮಗನೇ ಈ ದಿನ ನಿನ್ನನ್ನು ಪ್ರಾಣ ಸಹಿತ ಬಿಡುವುದಿಲ್ಲವೆಂದು ಗಲಾಟೆ ಮಾಡಿ ಶೆಡ್ ಅನ್ನು ಕಿತ್ತು ಹಾಕಲು ಪ್ರಯತ್ನಿಸುತ್ತಿದ್ದಾಗ ಅಲ್ಲಿಗೆ ಸಂಪಂಗೆಪ್ಪ ಬಂದು ಅವರು ಜೊತೆ ಸೇರಿಕೊಂಡು ಶೆಡ್ ಕಿತ್ತು ಹಾಕಲು ಮುಂದಾದರು. ಆಗ ಮಾವ ರಮೇಶ್ ಶೆಡ್‌ನ್ನು ಕೀಳದಂತೆ ತಡೆಯಲು ಹೋದರು. ಶೆಡ್‌ನ್ನು ಕಿತ್ತು ಹಾಕುತ್ತಿದ್ದ ಸೀನಪ್ಪ ಅಲ್ಲಿಯೇ ಬಿದ್ದಿದ್ದ ದೊಣ್ಣೆಯೊಂದನ್ನು ತೆಗೆದುಕೊಂಡು ರಮೇಶ್‌ರವರ ತಲೆಗೆ ಬಲವಾಗಿ ಹೊಡೆದನು. ಅಲ್ಲಿಯೇ ಇದ್ದ ಸಂಪಂಗೆಪ್ಪ ಸಹ ದೊಣ್ಣೆಯೊಂದನ್ನು ಎತ್ತಿಕೊಂಡು ಅವರು ಸಹ ರಮೇಶ್‌ರವರ ತಲೆಯ ಹಿಂಭಾಗ ಹೊಡೆದರು. ಆಗ ರಮೇಶ್‌ರವರ ತಲೆ ಮತ್ತು ಬಲಕಿವಿಯ ಬಳಿ ರಕ್ತಗಾಯಗಳಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ಇದೇ ಸಮಯದಲ್ಲಿ ಸ್ಥಳದಲ್ಲಿದ್ದ ಸೀನಪ್ಪನ ಪತ್ನಿ ಸುಲೋಚನಮ್ಮ ಮತ್ತು ಸಂಪಂಗೆಪ್ಪನ ಪತ್ನಿ ರತ್ನಮ್ಮನವರು ಸೇರಿಕೊಂಡು ರಮೇಶ್‌ನನ್ನು ಬಿಡಬೇಡಿ ಅವನನ್ನು ಮುಗಿಸಿಬಿಡಿ ಎಂದು ಕೂಗಿ ಹೇಳುತ್ತಿದ್ದರಲ್ಲದೆ ತನ್ನ ಗಂಡಂದಿರಿಗೆ ಪ್ರಚೋದನೆ ನೀಡುತ್ತಿದ್ದರು. ನಮ್ಮ ಮಾವ ರಮೇಶ್‌ರವರನ್ನು ಬರ್ಬರವಾಗಿ ಕೊಲೆ ಮಾಡಿ ಪರಾರಿಯಾಗುವಾಗ ಎನ್.ಜಿ. ಹುಲ್ಕೂರಿನ ವಾಸಿಗಳಾದ ನ್ಯಾತಪ್ಪನ ಮಗ ಮುನಿರಾಜು ಮತ್ತು ರವಿರವರ ಮಗ ಪ್ರಜ್ವಲ್‌ರವರು ಸಂಪಂಗಿ, ಸೀನಪ್ಪ ಮತ್ತು ಸುಲೋಚನ ಹಾಗೂ ರತ್ನಮ್ಮನವರನ್ನು ತಮ್ಮ ದ್ವಿಚಕ್ರ ವಾಹನಗಳಲ್ಲಿ ಹತ್ತಿಸಿಕೊಂಡು ಹೋಗಿ ಆರೋಪಿಗಳಿಗೆ ಸಹಕರಿಸಿರುತ್ತಾರೆ. ಈ ಘಟನೆಯನ್ನು ಪ್ರತ್ಯಕ್ಷವಾಗಿ ಕಂಡ ಶಂಕರ್‌ರವರು ತಿರುಮಲ್ಲೇಶ್ ಎಂಬುವರ ಮಾಹಿತಿಯ ಮೇರೆಗೆ ಸ್ಥಳಕ್ಕೆ ಬಂದು ನೋಡಲಾಗಿ ನಮ್ಮ ಮಾವ ಸತ್ತು ಬಿದ್ದಿರುತ್ತಾರೆ. ನಮ್ಮ ಮಾವನ ಸಾವಿಗೆ ಕಾರಣರಾದ ಆರೋಪಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ದೂರು ನೀಡಿದರ ಮೇರೆಗೆ ಪಿಎಸ್‌ಐ ಗುರುರಾಜ ಚಿಂತಾಕಲರವರು ಮೊ.ಸಂ. 71/2025 ಕಲಂ 103(1) 54, 190 ಬಿಎನ್‌ಸಿ-2023ರ ರೀತ್ಯಾ ಪ್ರಕರಣವನ್ನು ದಾಖಲಿಸಿಕೊಂಡು ಮುಂದಿನ ಕ್ರಮಕ್ಕಾಗಿ ಹಿರಿಯ ಅಧಿಕಾರಿಗಳಿಗೆ ವರದಿ ಸಲ್ಲಿಸಿದರು.


ಆರೋಪಿ ಸಂಪಂಗೆಪ್ಪ

### ಇಬ್ಬರು ಆರೋಪಿಗಳ ಬಂಧನ

ಎನ್.ಜಿ. ಹುಲ್ಕೂರು ಗ್ರಾಮದಲ್ಲಿ ನಡೆದ ರಮೇಶ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳಕ್ಕೆ ಎಸ್ಪಿ ಕೆ.ಎಂ. ಶಾಂತರಾಜು, ಡಿವೈಎಸ್ಪಿ ಪಾಂಡುರಂಗ, ಪಿಐ ವೈ.ಆರ್. ರಂಗಶಾಮಯ್ಯ, ಬೆರಳಚ್ಚು ತಜ್ಞರು, ಶ್ವಾನದಳ ಹಾಗೂ ಸಿಬ್ಬಂದಿ ವರ್ಗದವರು ಸ್ಥಳಕ್ಕೆ ಆಗಮಿಸಿ ಸ್ಥಳ ಮತ್ತು ಶವದ ಮಹಜರವ ನಡೆಸಿದ ನಂತರ ಮೃತದೇಹವನ್ನು ಕೋಲಾರ ನಗರದ ಎಸ್‌ಎನ್‌ಆರ್ ಆಸ್ಪತ್ರೆಗೆ ಸಾಗಿಸಿ ಅಲ್ಲಿ ವೈದ್ಯಾಧಿಕಾರಿಗಳಿಂದ ಮೃತದೇಹದ ಪರೀಕ್ಷೆ ನಡೆಸಿದ ಮೇಲೆ ಶವವನ್ನು ವಾರಸುದಾರರಿಗೆ ನೀಡಲಾಯಿತು. ತಮ್ಮನನ್ನು ಕೊಲೆ ಮಾಡಿ ಪರಾರಿಯಾಗಿರುವ ಅಣ್ಣಂದಿರನ್ನು ಪತ್ತೆಹಚ್ಚಲು ಎಸ್ಪಿ ಕೆ.ಎಂ. ಶಾಂತರಾಜು, ಡಿವೈಎಸ್ಪಿ ಪಾಂಡುರಂಗರವರ ಮಾರ್ಗದರ್ಶನದಲ್ಲಿ ಪಿಐ ವೈ.ಆರ್. ರಂಗಶಾಮಯ್ಯನವರ


ರೈಟರ್ ಮಹೇಂದ್ರಪ್ರಸಾದ್

☞ 14

## ಬೆಳಗಾವಿ : ಆಸ್ತಿ ವಿವಾದದಲ್ಲಿ ಮಲ ತಮ್ಮ ಆತನ ಸೋದರಮಾವನಿಂದ

# ಹಾಡುಹಗಲೇ ಸಿನಿಮೀಯ ರೀತಿ ಬೆನ್ನತ್ತಿ 28ರ ತರುಣನನ್ನು ಮಚ್ಚು, ಟಾಮಿನಿಂದ ಕೊಚ್ಚಿ...ಕೊಚ್ಚಿ...ಕೊಲೆಗೈದ ಹಂತಕರು!


ಮೀರಾಸಾಬ ಜಮಖಂಡಿ ಬದುಕಿದ್ದಾಗ

**ಆತ 28 ವರ್ಷದ ಕಟ್ಟುಮಸ್ತಾದ ಮುಸ್ಲಿಂ ತರುಣ. ಆತನಿಗೆ 24 ವರ್ಷದ ಮಹಾದುಷ್ಟ ಮಲ ತಮ್ಮನಿದ್ದನು. ಇಬ್ಬರೂ ಸೇರಿ ತಂದೆಯ ಆಸ್ತಿ ಸಮವಾಗಿ ಭಾಗ ಮಾಡಿಕೊಂಡಿದ್ದರು. ತನ್ನ ಪಾಲಿನ ಆಸ್ತಿ ಮಾರಾಟಕ್ಕೆ ಮುಂದಾದ ಅಣ್ಣನಿಗೆ ಮಲ ತಮ್ಮ ತೀವ್ರ ತೊಂದರೆ ಮಾಡುತ್ತಿದ್ದನು. ಮಲತಮ್ಮನ ಬೆನ್ನಿಗೆ ಕಂಸಾಸುರನಂತ ಸೋದರಮಾವ ನಿಂತು ಉರಿಯುವ ಬೆಂಕಿಗೆ ತುಪ್ಪ ಸುರಿಯುತ್ತಿದ್ದನು. ಹೀಗಾಗಿ ಮಲತಮ್ಮ ಆತನ ಅಣ್ಣನ ನಡುವೆ ಆಸ್ತಿ ವಿವಾದ ಭುಗಿಲೆದ್ದಿತ್ತು. ಮಲ ತಮ್ಮ ಮತ್ತು ಸೋದರಮಾವ ಸೇರಿಕೊಂಡು ಸ್ಕೇಚ್ ಒಂದನ್ನು ತಣ್ಣಗೆ ರೂಪಿಸಿದರು. ಮಲ ತಮ್ಮ ತನ್ನ ಮಾವನ ಚಿತಾವಣೆಯಿಂದ ಅಣ್ಣನನ್ನು ಮುಗಿಸಲು ಮೂಹರ್ತಕ್ಕಾಗಿ ಕಾಯ್ದಿದ್ದನು. ಇತ್ತೀಚಿಗೆ ಮಲ ತಮ್ಮನ ಅಣ್ಣ ತನ್ನ ಸ್ನೇಹಿತನ ಬೈಕ್ ಮೇಲೆ ಬೆಳಗಾವಿಗೆ ತೆರಳುವ ಸಂದರ್ಭದಲ್ಲಿ ಬೆನ್ನತ್ತಿದ ಮಲತಮ್ಮ, ಸೋದರಮಾವ ಬೆನ್ನತ್ತಿ ಹುಕ್ಕೇರಿ ಪಟ್ಟಣದ ನಾಕಾದಲ್ಲಿ ಜನಜಂಗುಳಿಯ ನಡುವೆ ಹಾಡುಹಗಲೇ ಸಿನೀಮಿಯ ರೀತಿ ಕ್ರೂರವಾಗಿ ಟಾಮಿ, ಮಚ್ಚಿನಿಂದ ಕೊಚ್ಚಿ... ಕೊಚ್ಚಿ ಕೊಲೆಗೈದು ಸಾವಿರಾರು ಜನರು ನೋಡುತ್ತಿದ್ದಂತೆ ಪರಾರಿಯಾದರು. ಸಂತೆಯ ದಿನ ನಡೆದಿದ್ದ ಈ ಭೀಕರ ಕೊಲೆ ಎದೆ ಝಲ್ ಎನಿಸುವಂತಿತ್ತು. ಪ್ರಕರಣ ದಾಖಲಿಸಿಕೊಂಡು ಹಂತಕರ ಬೆನ್ನು ಬಿದ್ದ ಚತುರ ಮತ್ತು ಧಾಡಸಿ ಪೊಲೀಸ್ ಇನ್‌ಸ್ಪೆಕ್ಟರ್ ಮಹಾಂತೇಶ ಬಸಾಪೂರ ಮತ್ತು ಸಿಬ್ಬಂದಿಗಳು ಮಿಂಚಿನ ಕಾರ್ಯಾಚರಣೆ ನಡೆಸಿ ಕೊಲೆ ನಡೆದ ಕೇವಲ 2 ಗಂಟೆಗಳಲ್ಲಿ ಹಂತಕರ ಹೆಡೆಮುರಿ ಕಟ್ಟಿದ ರೋಚಕ ವರದಿಯೊಂದು ಬೆಳಗಾವಿ ಜಿಲ್ಲೆ ಹುಕ್ಕೇರಿ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**


ಹಂತಕ ಮಲ ತಮ್ಮ ಶಾನೂರ್ ಜಮಖಂಡಿ

'ಹೆಣ್ಣಿಗಾಗಿ ರಾಮಾಯಣ... ಮಣ್ಣಿಗಾಗಿ ಮಹಾಭಾರತ' ಎನ್ನುವ ಗಾದೆಯಂತೆ ಇಂದು ಬಹುತೇಕ ಕೊಲೆಗಳು ನಡೆಯುತ್ತಿರುವುದು. ಆಸ್ತಿಯ ದುರಾಸೆ ಎಂತಹ ಅನಾಹುತ ಸೃಷ್ಟಿಸಬಲ್ಲುದು ಎಂಬುದನ್ನು ಊಹಿಸಿಕೊಳ್ಳಲು ಆಗದು. ಇದಕ್ಕೆ ಜೀವಂತ ನಿದರ್ಶನವೆಂಬಂತೆ ಮೊನ್ನೆ ಸೋಮವಾರ ದಿನಾಂಕ 11-08-2025 ರಂದು ಮಟ... ಮಟ ಮಧ್ಯಾಹ್ನ ಹಾಡುಹಗಲೇ ಬೆಳಗಾವಿ ಜಿಲ್ಲೆಯ ಹುಕ್ಕೇರಿ ಪಟ್ಟಣದ ನಾಕಾದಲ್ಲಿ ನಡೆದ 28 ವರ್ಷದ ತರುಣನ ಭೀಕರ ಕೊಲೆ. ಸಿನೀಮಿಯ ರೀತಿ ನಡೆದ ಈ ಕಗ್ಗೊಲೆ ನೋಡುಗರ ಎದೆ ನಡುಗಿಸಿಬಿಟ್ಟಿತ್ತು. ಕೊಲೆಗೆ ಕಾರಣ ಹುಡುಕಲಾಗಿ ಆಸ್ತಿಯ ದುರಾಸೆ ಮತ್ತೊಂದೆಡೆ ಅನೈತಿಕ ಸಂಬಂಧದ ಸಂಶಯದ ವಾಸನೆ. ಭೀಕರ ಕೊಲೆಗೀಡಾದ 28ರ ಸ್ಫುರದ್ರೂಪಿ ತರುಣ ಹುಕ್ಕೇರಿ ತಾಲ್ಲೂಕಿನ ಅವರಗೋಳದ ಮೀರಾಸಾಬ,


ಆಸ್ತಿ ವಿವಾದಕ್ಕೆ ಬರ್ಬರವಾಗಿ ಕೊಲೆಯಾದ ಮೀರಾಸಾಬ

ಹುಸೇನಸಾಬ ಜಮಖಂಡಿ. ಕೊಲೆಗೀಡಾದ ಮೀರಾಸಾಬನ ಮಲ ತಮ್ಮ ಶಾನೂರ ಹುಸೇನಸಾಬ ಜಮಖಂಡಿ ಮತ್ತು

**ಬೆಳಗಾವಿ**
✍ ಮನ್ನಾಪೂರ

ಈತನ ಕಂಸ ಸಂತತಿಯ ಸೋದರಮಾವ ಬಷೀರ್ ಸಿಕಂದರ ಕಿಲ್ಲೇದಾರ ಇಬ್ಬರೂ ಸೇರಿ ಮೀರಾಸಾಬನನ್ನು ಭೀಕರವಾಗಿ ಕೊಲೆ ಮಾಡಿದ್ದಾರೆ. ಮಾಡಿದ ತಪ್ಪಿಗಾಗಿ ಇಂದು ಪೊಲೀಸರ ಕೈಯಲ್ಲಿ ಸಿಕ್ಕು ಜೈಲು ಸೇರಿ ತಂಗಳು ಮುರಿಯುತ್ತಿದ್ದಾರೆ. ಮೀರಾಸಾಬನನ್ನು ಕಳೆದುಕೊಂಡ ತಾಯಿ ಮಮ್ತಾಜ, ಅಕ್ಕ ರೇಷ್ಮಾ, ತಮ್ಮ ಲಾಲಸಾಬ ಎದೆ ಎದೆ ಬಡಿದುಕೊಂಡು ಬಿಕ್ಕಿ ಬಿಕ್ಕಿ ಅತ್ತು ಕಣ್ಣೀರು ಬತ್ತಿಸಿಕೊಂಡಿದ್ದಾರೆ. ಕೊಲೆ ಪ್ರಕರಣದ ಹಿಂದಿನ ಸಂಪೂರ್ಣ ಹಕೀಕತ್ 'ಪೊಲೀಸ್ ನ್ಯೂಸ್' ಓದುಗರಿಗಾಗಿ ವರದಿ ಮಾಡಿದೆ.


ಕೊಲೆಯಾದ ಮೀರಾಸಾಬನ ತಮ್ಮ ಲಾಲಸಾಬ, ಅಕ್ಕ ರೇಷ್ಮಾ, ತಾಯಿ ಮಮ್ತಾಜ್

**ನತದೃಷ್ಟ ಮೀರಾಸಾಬಾ ಜಮಖಂಡಿ...**

'ಮನುಷ್ಯನ ಜೀವನ ಹೀಗೆ ಎಂದು ಹೇಳಲು ಆಗದು.' ಸ್ವಂತ ಮಲ ತಮ್ಮ ಆತನ ಸೋದರ ಮಾವನ ದುಷ್ಟ ಸಂಚಿಗೆ ಅನಾಮತ್ತಾಗಿ ಬಲಿಯಾದ ಮೀರಾಸಾಬ ಹುಸೇನಸಾಬ ಜಮಖಂಡಿ ತುಂಬಾ ನತದೃಷ್ಟನೆಂದು ಹೇಳಬೇಕು. ಬದುಕಬೇಕು ಎಲ್ಲರಂತೆ ಏನಾದರೂ ಸಾಧಿಸಬೇಕು ಎಂಬ ಅದಮ್ಯ ಆಸೆಯ ಯುವಕ ಇಂದು ಬಾರದೂರಿಗೆ ನಡೆದು ಬಿಟ್ಟಿದ್ದಾನೆ.

ಮೀರಾಸಾಬನ ತಂದೆ ಹುಸೇನಸಾಬ ತುಂಬಾ ಶೋಕಿಲಾಲ, ಮೇಲಾಗಿ ಚಪಲ ಚನ್ನಿಗರಾಯ. ಮೂಲತಃ ಗೋಕಾಕ ತಾಲ್ಲೂಕಿನ ಧೂಪದಾಳ ನಿವಾಸಿ. ಸುಮಾರು 30 ವರ್ಷಗಳ ಹಿಂದೆ ಹುಕ್ಕೇರಿ ತಾಲ್ಲೂಕಿನ ಅವರಗೋಳದ ಮಮ್ತಾಜಳನ್ನು ಮದುವೆ ಮಾಡಿಕೊಂಡು ರೇಷ್ಮಾ, ಮೀರಾಸಾಬ, ಲಾಲಸಾಬ ಎಂಬ ಒಂದು ಹೆಣ್ಣು, ಎರಡು ಗಂಡು ಮಕ್ಕಳಿಗೆ ಜನ್ಮ ನೀಡಿದ್ದನು. ಮೀರಾಸಾಬ ಮಾತ್ರ ಐಟಿಐ ಶಿಕ್ಷಣ ಪಡೆದುಕೊಂಡನು. ಉಳಿದ ಇಬ್ಬರು ಅಷ್ಟಕ್ಕಷ್ಟೇ. ತಮ್ಮ ಲಾಲಸಾಬ ಸೆಂಟ್ರಿಂಗ್ ಕೆಲಸ ಮಾಡಿಕೊಂಡಿದ್ದನು. ಅಕ್ಕ ರೇಷ್ಮಾಳಿಗೆ ಮದುವೆ ಆಗಿದೆ. ಮೀರಾ ಮತ್ತು ಲಾಲು ಮದುವೆ ಮಾಡಿಕೊಂಡಿಲ್ಲ. ಒಟ್ಟಿನಲ್ಲಿ ಮೀರಾಸಾಬ ಬದುಕಿನಲ್ಲಿ ವಿಧಿಯಾಟದ ಮುಂದೆ ಏನೇನು ಸಾಧಿಸಲಾಗಲಿಲ್ಲ. ತಂದೆಯ ತಾತ್ಸಾರ, ಕಿತ್ತು ತಿನ್ನುವ ಬಡತನದ


ಹಂತಕ ಸೋದರಮಾವ ಬಷೀರ್ ಕಿಲ್ಲೇದಾರ

ನಡುವೆ ಸೋತು ಹೋಗಿದ್ದನು. ಆದರೂ ಮಲ ತಮ್ಮನ, ಮಲ ತಾಯಿಯ ಮತ್ತು ಸೋದರ ಮಾವನ ಮತ್ಸರಕ್ಕೆ ಬಲಿಯಾಗಿ ಕೊಲೆಯಾಗಿ ಹೋದನು. ಅದಕ್ಕೆ ಮೀರಾಸಾಬ ಬದುಕಿನಲ್ಲಿ ನತದೃಷ್ಟನಾದನು.

**ಹುಸೇನಸಾಬನ ಎರಡನೇ ಹೆಂಡ್ತಿ ಕಥೆ...**

ಶೋಕಿಲಾಲನಾಗಿದ್ದ ಹುಸೇನಸಾಬ ಜಮಖಂಡಿ ಮೊದಲಿನ ಹೆಂಡತಿ ಮಮ್ತಾಜಳ ಸಂಬಂಧಿಕಳಾಗಿದ್ದ ಹುಕ್ಕೇರಿ ತಾಲ್ಲೂಕಿನ ಅವರಗೋಳದ ಮೆಹಬೂಬಿ ಎಂಬ ಚಾಲಾಕಿ ಹೆಣ್ಣು ಮಗಳನ್ನು ಬುಟ್ಟಿಗೆ ಹಾಕಿಕೊಂಡನು. ಅದಾಗಲೇ ಘಟಪ್ರಭಾ, ಮಹಾರಾಷ್ಟ್ರದ ರತ್ನಾಗಿರಿಯಲ್ಲಿ ಈಕೆಗೆ ಮದುವೆಯಾಗಿತ್ತು ಎಂದು ಹೇಳಲಾಗುತ್ತಿದೆ. ಇದೀಗ ಹಂತಕನಾಗಿರುವ ಶಾನೂರ್‌ನ ಹೆರಿಗೆಗೆಂದು ತವರಿಗೆ ಬಂದಾಗ ಮೆಹಬೂಬಿಯನ್ನು ಕರೆದುಕೊಂಡು ಹುಸೇನಸಾಬ ಊರು ಬಿಟ್ಟಿದ್ದನು. ಕೆಲವು ದಿನಗಳ ನಂತರ ಗೋಕಾಕ ತಾಲ್ಲೂಕಿನ ಧೂಪದಾಳ ಗ್ರಾಮಕ್ಕೆ ಬಂದು ಗಂಡ ಹೆಂಡಿರಂತೆ ಬದುಕತೊಡಗಿದ್ದರು. ಮೊದಲ ಹೆಂಡತಿ ಮಮ್ತಾಜಳಿಗೆ ಇದರಿಂದ ಬಹಳ ದುಃಖವಾಯಿತು. ತನ್ನ ಮೂರು ಮಕ್ಕಳನ್ನು ಬಿಗಿದಪ್ಪಿಕೊಂಡು ಕಣ್ಣೀರು ಹಾಕಿದ್ದಳು. ಬಂದದ್ದು ಬರಲಿ ಹೇಗೋ ತಾನು ದುಡಿದಾದರೂ ಮಕ್ಕಳನ್ನು ಸಾಕಬಲ್ಲೆ ಎಂಬ ಛಲ ಮಮ್ತಾಜಳಲ್ಲಿತ್ತು.

ಹುಸೇನಸಾಬನ ತಾಯಿ ಹಸ್ಮತ್‌ಬೀ ಇಲ್ಲಿ ನಿಜಕ್ಕೂ ಮಂಥರೆಯಂತೆ ವರ್ತಿಸಿದ್ದಳು. ಹುಸೇನಸಾಬ ಮತ್ತು ಮೆಹಬೂಬಿಗೆ ಸಾಥ್ ನೀಡಿದಳು. ಇದರಿಂದ ಬಹಳಷ್ಟು ನೊಂದುಕೊಂಡು ಮಮ್ತಾಜ ತನ್ನ ಮೂರು


ಮೀರಾಸಾಬನ ಕೊಲೆ ನಡೆದ ಸ್ಥಳದಲ್ಲಿ ವೀಕ್ಷಣೆ ಮಾಡುತ್ತಿರುವ ಪಿಐ ಮಹಾಂತೇಶ್



ಮಕ್ಕಳೊಂದಿಗೆ ತವರೂರಾದ ಅವರಗೋಳದಲ್ಲಿ ಬಾಡಿಗೆ ಮನೆ ಮಾಡಿ, ಅವರಿವರ ಮನೆಯಲ್ಲಿ ಕೆಲಸ ಮಾಡುತ್ತ ದಿನ ಕಳೆದಳು. ಅತ್ತ ಹುಸೇನಸಾಬ ಎರಡನೇ ಹೆಂಡತಿ ಮೆಹಬೂಬಿ ಜತೆಗೆ ಮಜವಾಗಿ ಜೀವನ ಆರಂಭಿಸಿ ಮೋಜು-ಮಸ್ತಿ ಮಾಡುತ್ತ ಫಾತಿಮಾ ಎಂಬ ಮಗಳಿಗೆ ಜನ್ಮಕ್ಕೆ ಕಾರಣರಾದರು. ನಿಜಕ್ಕೂ ಹುಸೇನಸಾಬ ಎರಡನೇ ಹೆಂಡತಿ ಮೋಹಕ್ಕೆ ಬಿದ್ದು ಮೊದಲ ಹೆಂಡತಿ, ಮಕ್ಕಳನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದ್ದನು. ಎರಡನೇ ಹೆಂಡತಿಯ ತಮ್ಮ ಬಷೀರ್ ಕಿಲ್ಲೇದಾರ ಮಾತ್ರ ಮಜವಾಗಿ ಅಕ್ಕನ ಹಣದಲ್ಲಿ ಚೈನಿ ಮಾಡುತ್ತ ಶಾನೂರನನ್ನು ಕರೆದುಕೊಂಡು ತಿರುಗುತ್ತಿದ್ದನು. ದಿನಗಳು, ತಿಂಗಳಾದವು... ತಿಂಗಳುಗಳು ವರ್ಷಗಳಾದವು. ನೋಡ ನೋಡುತ್ತಿದ್ದಂತೆ ಮಕ್ಕಳೆಲ್ಲ ಬೆಳೆದು ನಿಂತಿದ್ದರು. ಇತ್ತೀಚಿಗೆ ಎರಡು ವರ್ಷಗಳ ಹಿಂದೆ ಹುಸೇನಸಾಬ ಅಲ್ಲಾಹುವಿನ ಪಾದ ಸೇರಿಬಿಟ್ಟನು.

**ತಂದೆಯ ಆಸ್ತಿಯಲ್ಲಿ ಸಮಪಾಲು...**

ಹುಸೇನಸಾಬ ಜಮಖಂಡಿಗೆ ಸೇರಿದ್ದ ಧೂಪದಾಳದಲ್ಲಿ ಎರಡು ಮನೆ ಮತ್ತು ಎರಡು ಶಾಪಿಂಗ್ ಕಾಂಪ್ಲೆಕ್ಸ್‌ಗಳಿದ್ದವು. ಇದರಲ್ಲಿ ಮೊದಲಿನ ಹೆಂಡತಿ ಮಕ್ಕಳಿಗೆ ಒಂದು ಮನೆ, ಒಂದು ಶಾಪಿಂಗ್ ಕಾಂಪ್ಲೆಕ್ಸ್ ಪಾಲಾಗಿ ಬಂದಿದ್ದವು. ಇದರಂತೆ ಎರಡನೇ ಹೆಂಡತಿ ಮೆಹಬೂಬಿ ಮತ್ತು ಒಬ್ಬನೇ ಮಗ ಶಾನೂರನ ಪಾಲಿಗೂ ಬಂದಿತ್ತು. ಇತ್ತ ತಮ್ಮ ಪಾಲಿನ ಆಸ್ತಿ ಭಾಗ ಮಾಡಿಕೊಂಡು ಮೊದಲಿನ ಹೆಂಡತಿ ಮಮ್ತಾಜ ಮತ್ತು ಮಕ್ಕಳು ಅವರಗೋಳದಲ್ಲಿ ಬಾಡಿಗೆ ಮನೆಯಲ್ಲಿ ಉಳಿದುಕೊಂಡಿದ್ದರು. ಹಿರಿಯ ಮಗ ಮೀರಾಸಾಬ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡಿಕೊಂಡಿದ್ದನು. ಈತನೇ ಕುಟುಂಬಕ್ಕೆ ಆಧಾರಸ್ತಂಭವಾಗಿದ್ದನು. ಕಿರಿಯ ಮಗ ಸೆಂಟ್ರಿಂಗ್ ಕೆಲಸ ಮಾಡಿ ಮನೆಗೆ ಖರ್ಚು ಕೊಡುತ್ತಿದ್ದನು.



ಮೀರಾಸಾಬನನ್ನು ಕೊಲೆಗೈದು ಮಾರಕಾಸ್ತ್ರಗಳೊಂದಿಗೆ ಹಂತಕರು ನಡೆದು ಹೋಗುತ್ತಿರುವುದು

ಮಮ್ತಾಜಳು ಅವರಿವರ ಮನೆಯಲ್ಲಿ ಸಣ್ಣಪುಟ್ಟ ಕೆಲಸ ಮಾಡಿಕೊಂಡಿದ್ದಳು.

ಇತ್ತ ಮೀರಾಸಾಬನ ಮಲ ತಾಯಿ ಮೆಹಬೂಬಿ, ಮಲ ತಮ್ಮ ಶಾನೂರ್ ತಂದೆಯ ಆಸ್ತಿಯಲ್ಲಿ ಸಮ ಭಾಗ ತೆಗೆದುಕೊಂಡು ಮಜವಾಗಿದ್ದರು. ಶಾನೂರ್‌ನಂತೂ ಉಂಡಾಡಿಗುಂಡನಾಗಿದ್ದನು. ಯಾವಾಗಲಾದರೂ ಅವರಗೋಳಕ್ಕೆ ತನ್ನ ಅಜ್ಜ-ಅಜ್ಜಿಯ ಮನೆಗೆ ಹೋದಾಗ ದೊಡ್ಡವ್ವನ ಕುಟುಂಬದ ಜತೆ ಮಾತನಾಡುತ್ತಿರಲಿಲ್ಲ. ಕಂಸನ ಸಂತತಿಯ ಸೋದರಮಾವ ಬಷೀರ್ ಮಮ್ತಾಜಜ್ ಮತ್ತವಳ ಮಕ್ಕಳನ್ನು ಕಂಡರೆ ಉರಿದು ಬೀಳುತ್ತಲಿದ್ದನು. 'ಮೀರಾಸಾಬನಿಗೆ ನನ್ನ ಹೆಂಡ್ತಿ ಜತೆಗೆ ಯಾಕೆ ಸಲುಗೆಯಿಂದ ಮಾತಾಡತಿ' ಎಂದು ಬಾಯಿಗೆ ಬಂದಂತೆ ಬಯುತ್ತಿದ್ದನು. ಆದರೆ ಮೀರಾಸಾಬ ಆತನ ಹೆಂಡ್ತಿ ಉಸಾಬರಿ ಮಾಡುತ್ತಿರಲಿಲ್ಲ ಎಂದು ಅವರ ಮನೆಯವರು ಹೇಳುತ್ತಾರೆ.


ಎಸ್ಪಿ ಡಾ. ಭೀಮಾಶಂಕರ ಗುಳೇದ



ಅ|| ಎಸ್ಪಿ ರಾಮನಗೌಡ ಬಸರಗಿ


ಧೂಪದಾಳದಲ್ಲಿದ್ದ ತಮ್ಮ ಪಾಲಿನ ಆಸ್ತಿ ಮಾರಿ ಇಲ್ಲೇ ಅವರಗೋಳದಲ್ಲಿ ತೆಗೆದುಕೊಂಡರಾಯಿತೆಂದು ಮಮ್ತಾಜ ಮತ್ತು ಮಕ್ಕಳು ನಿರ್ಧರಿಸಿ ಮಾರಾಟಕ್ಕೆ ಪ್ರಯತ್ನಿಸುತ್ತಿದ್ದರು.

**ಆಸ್ತಿ ಮಾರಾಟ ಬೇಡವೆಂದು ತಕರಾರು...**

ಮಮ್ತಾಜಳ ಮಕ್ಕಳಾದ ಮೀರಾಸಾಬ ಮತ್ತು ಲಾಲಸಾಬ ತಮ್ಮ ಪಾಲಿನ ಒಂದು ಮನೆ ಹಾಗೂ ಒಂದು ಶಾಪಿಂಗ್ ಕಾಂಪ್ಲೆಕ್ಸ್ ಮಾರಾಟ ಮಾಡುವ ಸಲುವಾಗಿ ತಯಾರಿ ನಡೆಸಿದ್ದರು. ಅದಕ್ಕಾಗಿ ಕೆಲವೊಂದು ಗಿರಾಕಿಗಳು ಬಂದು ನೋಡಿಕೊಂಡು ಹೋಗಿದ್ದರು. ಇದನ್ನರಿತ ಮಲ ತಾಯಿ ಮೆಹಬೂಬಿ, ಮಲ ತಮ್ಮ ಶಾನೂರ 'ಯಾವುದೇ ಕಾರಣಕ್ಕೂ ನೀವು ಆಸ್ತಿ ಮಾರಬಾರದೆಂದು' ತಕರಾರು ಮಾಡತೊಡಗಿದರು. ಇದು ಸುಮಾರು ಒಂದೂವರೆ ವರ್ಷಗಳಿಂದ ಮುಂದುವರಿದು ಬಂದಿತ್ತು. ಬೆಲೆಬಾಳುವ ಆಸ್ತಿ ಇದನ್ನು ನಮಗೆ ನೀವು ಕೊಡಬೇಕು. ಬೇರೆಯವರಿಗೆ ಮಾರಲು ಅವಕಾಶ ಕೊಡುವುದಿಲ್ಲ ಎಂದು ಜಗಳ ಮಾಡತೊಡಗಿದರು. ಇದಕ್ಕೆ ಮೀರಾಸಾಬ ಜಮಖಂಡಿ ಕೂಡಾ ಎದುರು ವಾದಿಸುತ್ತ 'ನಮ್ಮ ಪಾಲಿನ ಆಸ್ತಿ ನಾವು ಬೇಕಾದ್ದನ್ನು ಮಾಡುತ್ತೇವೆ' ಎಂದಾಗ ಇದು ವಿವಾದ ಮುಂದುವರಿಯಲು ಕಾರಣವಾಯಿತು. ದಿನದಿಂದ ದಿನಕ್ಕೆ ಇವರ ವ್ಯಾಜ್ಯ ಭುಗಿಲೆದ್ದು ಬಿಟ್ಟಿತು. ಇದೇ ಸಂದರ್ಭದಲ್ಲಿ ಮಲ ತಮ್ಮ ಶಾನೂರ್, ಆತನ ಸೋದರಮಾವ ಬಷೀರ್ ಜತೆಯಾಗಿ ಒಂದು ನಿರ್ಧಾರಕ್ಕೆ ಬಂದು ಬಿಟ್ಟರು. 'ಯಾವುದೇ ಕಾರಣಕ್ಕೂ ಮೀರಾ ಬದುಕಿರಬಾರದು' ಎಂದು ತಮ್ಮ ತಮ್ಮಲ್ಲಿ ಮಾತನಾಡಿಕೊಂಡರು.


ಡಿವೈಎಸ್ಪಿ ರವಿ ನಾಯಕ


ಇನ್‌ಸ್ಪೆಕ್ಟರ್ ಮಹಾಂತೇಶ ಬಸಾಪೂರ


ಮೃತನ ಸ್ನೇಹಿತ ಸಚಿನ್ ಹೂಗಾರ

**ಮೀರಾಸಾಬನ ಕೊಲೆಗೆ ಸ್ಕೆಚ್...**

ಆಸ್ತಿ ಮಾರಾಟದ ವಿವಾದ ಕಳೆದ ಒಂದೂವರೆ ವರ್ಷಗಳಿಂದಲೂ ಭುಗಿಲೆದ್ದಿತ್ತು. ತನ್ನ ಅಣ್ಣ ಮೀರಾಸಾಬ ತನ್ನ ಮಾತಿಗೆ ಬಗ್ಗುತ್ತಿಲ್ಲ ಎಂದು ಮಲ ತಮ್ಮ ಶಾನೂರ್ ಆತನ ಮಾವ ಬಷೀರ್ ಕಿಲ್ಲೇದಾರ ಮುಂದೆ ಹೇಳಿದಾಗ ಉರಿಯುವ ಬೆಂಕಿಗೆ ತುಪ್ಪ ಹಾಕಿದಂತೆ ಬಷೀರ್ 'ಏ... ಶಾನೂರ್, ಆ ಮಗನ ಉಳಸುದು ಬ್ಯಾಡಲೇ... ನನ್ನ ಹೆಂಡ್ತಿ ಜೋಡಿ ಸಲಿಗಿಲಿ ಮಾತಾಡತಾನ. ಹಂಗೆಲ್ಲಾ ಬ್ಯಾಡ ಅವನನ್ನು ಮುಗಿಸಿ ಬಿಡುಣು' ಎಂದು ಶಾನೂರ್ ಕೂಡಾ ಬುರು... ಬುರು ಬಸವಣ್ಣನಂತೆ ತಲೆ ಅಲ್ಲಾಡಿಸಿದ್ದನು. ಒಬ್ಬನೇ ಸಿಕ್ಕರೆ ಆತನನ್ನು ಹಣಿದುಬಿಡೋಣವೆಂದು ತೀರ್ಮಾನಕ್ಕೆ ಬಂದ ಶಾನೂರ್ ಇತ್ತಿತ್ತಲಾಗಿ ಅವರಗೋಳ ಪರಿಸರದಲ್ಲಿ ತಿರುಗಾಟ ನಡೆಸಿದ್ದನು. ಆದರೆ ಮೀರಾಸಾಬ ಇದನ್ನು ಅರಿಯದೇ ತನ್ನ ಪಾಡಿಗೆ ತಾನು ಬೆಳಗಾವಿ ಅಶೋಕ ಐರನ್ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಹೊರಟಿದ್ದನು. ವಾರಕ್ಕೊಮ್ಮೆ ಊರಿಗೆ ಬಂದು ಹೋಗುತ್ತಿದ್ದನು. ಇತ್ತ ಶಾನೂರ ಮತ್ತು ಮಾವ ಬಷೀರ್ ಮೀರಾಸಾಬನ ಕೊಲೆ ಮಾಡಲು ಮುಹೂರ್ತ ವಿಟ್ಟಿದ್ದರು. ಇದಕ್ಕಾಗಿ ಶಾನೂರ್ ಒಂದು ದೊಡ್ಡ ಕಬ್ಬಿಣದ ಟಾಮಿ, ಬಷೀರ್ ಒಂದು ಮಚ್ಚು ಹಿಡಿದುಕೊಂಡು ತಿರುಗುತ್ತಿದ್ದರು.

**ಅಜ್ಜಿಯ ಅಂತ್ಯ ಕ್ರಿಯೆಗೆ ಬಂದಿದ್ದ ಮೀರಾ...**

ಮೀರಾಸಾಬ ಕೊಲೆಯಾಗುವುದಕ್ಕಿಂತ ಒಂಬತ್ತು ದಿನಗಳ ಮುಂಚೆ ತನ್ನ ತಾಯಿಯ ತಾಯಿಯಾದ ಹಸ್ಮತ್‌ಬೀ ಮೃತಪಟ್ಟಿದ್ದಳು. ಅವಳ ಅಂತ್ಯಕ್ರಿಯೆಗೆ ಮೀರಾಸಾಬ ರಜೆ ಮೇಲೆ ಬಂದಿದ್ದನು. ಆತನಿಗೂ ಕೂಡಾ ಮೈಯಲ್ಲಿ ಹುಷಾರಿಲ್ಲದೇ ಆಸ್ಪತ್ರೆಗೆ ತೋರಿಸಿ ರೆಸ್ಟನಲ್ಲಿದ್ದನು. ಇದು ಮೀರಾಸಾಬನ ಮಲ ತಮ್ಮ ಮತ್ತು ಸೋದರಮಾವನಿಗೆ ಗೊತ್ತಿತ್ತು. ಇದೇ ಸುಸಂಧಿ ಆತನು ತಿರುಗಿ ಬೆಳಗಾವಿಗೆ ಹೋಗುವುದನ್ನೇ ಕಾಯ್ದು ಕುಳಿತಿದ್ದರು. ಈ ಹಿಂದೆ ಕೂಡಾ ಮೂರ್ನಾಲ್ಕು ಬಾರಿ ಕೊಲೆ ಮಾಡಲು ಬಂದು ವಿಫಲ ಯತ್ನ ನಡೆಸಿದ್ದರು. ಹೀಗಾಗಿ ಮೀರಾಸಾಬ ಮೈ ತುಂಬಾ ಕಣ್ಣಾಗಿರಿಸಿಕೊಂಡಿದ್ದನು.

**ಬೆನ್ನತ್ತಿ ಬಂದಿದ್ದರು...**

ಅವರಗೋಳದ ತನ್ನ ಸ್ನೇಹಿತ ಸಚಿನ್ ಹೂಗಾರ ಜತೆಗೆ ಬೈಕ್ ಮೇಲೆ ಮೀರಾಸಾಬ ಹಿಂದೆ ಕುಳಿತು ಹುಕ್ಕೇರಿ ಮಾರ್ಗವಾಗಿ ಬೆಳಗಾವಿಗೆ ಹೊರಟಿದ್ದನು. ಇದನ್ನೇ ಕಾಯ್ದು ಕುಳಿತ ಶಾನೂರ್ ಮತ್ತು ಬಷೀರ್ ಇವರಿಬ್ಬರು ತಮ್ಮ ಮಾರಕಾಸ್ತ್ರಗಳಿಂದ ಬೆನ್ನತ್ತಿದ್ದರು. ಅಂದು ಸೋಮವಾರ ದಿನಾಂಕ 11-08-2025ರ ದಿನ. ಹುಕ್ಕೇರಿಯಲ್ಲಿ ವಾರದ ದೊಡ್ಡ ಸಂತೆ. ಸಾವಿರಾರು ಜನ ಜಮಾಯಿಸಿದ್ದರು. ಮಧ್ಯಾಹ್ನ 12-30 ಗಂಟೆಯ ಸುಮಾರಿಗೆ ಹುಕ್ಕೇರಿ ನಾಕಾ ಸಮೀಪ ಸಚಿನ್ ಮತ್ತು ಮೀರಾ ಬಂದಿದ್ದರು. ಮೀರಾನ ಹಿಂದಿನಿಂದಲೇ ಯಮಧೂತರಂತೆ ಶಾನೂರ್ ಮತ್ತು ಬಷೀರ್ ಬರುತ್ತಿದ್ದರು.

ಇದನ್ನು ಗಮನಿಸಿದ್ದ ಮೀರಾಸಾಬ ತಕ್ಷಣ 'ಸಚಿನ್ ಬೇಗ ಗಾಡಿ ಓಡಿಸು ಅವರು ನನ್ನನ್ನು ಕೊಲ್ಲುತ್ತಾರೆ' ಎಂದು ತೀವ್ರ ಆತಂಕದಿಂದ ಹೇಳಿದಾಗ ಸಚಿನ್ ಬೇಗ ಬೈಕ್ ಚಲಾಯಿಸಬೇಕೆಂದರೆ ಸಂತೆ ಆದ ಕಾರಣ ಜನರ ಓಡಾಟದಿಂದ ಸಾಧ್ಯವಾಗಲಿಲ್ಲ.

**ಟಾಮಿ, ಮಚ್ಚಿನಿಂದ ಕೊಚ್ಚಿ ಕೊಚ್ಚಿ ಕೊಲೆ...**

ಬಷೀರ್ ಕಿಲ್ಲೇದಾರ ವೇಗವಾಗಿ ಬೈಕ್ ಓಡಿಸಿಕೊಂಡು ಬಂದು ಸಚಿನ್ ಚಲಾಯಿಸುತ್ತಿದ್ದ ಬೈಕ್ ತಡೆದನು. ಆಗ ಹಿಂದಿನಿಂದ ಶಾನೂರ್ ಇಳಿದು ತನ್ನ ಕೈಲಿದ್ದ ಕಬ್ಬಿಣದ ಟಾಮಿಯಿಂದ ಮೀರಾಸಾಬನ ತಲೆಗೆ ಹೊಡೆದಾಗ ಆತ ಕೆಳಗೆ ಬಿದ್ದನು. ಹಿಂದಿನಿಂದ ಬಷೀರ್ ಮಚ್ಚಿನಿಂದ ಭೀಕರವಾಗಿ ಹಲ್ಲೆಮಾಡಿ ಕೊಚ್ಚತೊಡಗಿದನು. ಮುಖ, ಎದೆ, ಹೊಟ್ಟೆ, ಬರಕಿ ಮುಂತಾದ ಕಡೆ ಗಂಭೀರ ಗಾಯಗಳಾದವು. 'ಏ ಮಾಮಾ ನನ್ನ ಕೊಲಬ್ಯಾಡೋ ಬಿಟ್ಟಬಿಡೋ' ಎಂದು ಕೈ ಮೇಲೆ ಮಾಡಿದಾಗ ಆಕ್ರೋಶದಿಂದ ಬಷೀರ್ ಬೀಸಿದ ಮಚ್ಚಿನೇಟಿಗೆ ಮುಂಗೈ ತುಂಡಾಗಿ ದೂರ ಸಿಡಿದು ಬಿದ್ದಿತು. ಹಾಡುಹಗಲೇ ಸಿನೀಮಿಯ ರೀತಿ ನಡೆಯುತ್ತಿದ್ದ ಕೊಲೆಯನ್ನು ನೂರಾರು ಜನ ಗುಂಪಾಗಿ ನೋಡಿ ನಡುಗಿ ಹೋದರು.

ಕಬ್ಬಿಣದ ಟಾಮಿ ಮತ್ತು ಮಚ್ಚಿನೇಟಿಗೆ ವಿಲ... ವಿಲನೇ ಒದ್ದಾಡಿ ವಿಪರೀತ ರಕ್ತಸ್ರಾವದಿಂದ ನರಳಿ ಮೀರಾಸಾಬ ಗತ ಪ್ರಾಣನಾದನು. ಇದೆಲ್ಲ ದೃಶ್ಯವೂ ನೆರೆದಿದ್ದ ನೂರಾರು ಜನರ ಮೊಬೈಲ್‌ನಲ್ಲಿ ಸೆರೆಯಾಯಿತು. ಸಂತೆಯ ದಿನ ಭೀಕರ ಕೊಲೆಯ ಸುದ್ದಿ ಹರಡಿ ಜನ ನೋಡಲು ಮುಗಿಬಿದ್ದರು. ಈ ಸಂದರ್ಭದಲ್ಲಿ ಜನರನ್ನು ಚದುರಿಸಲು ಪೊಲೀಸರು ಹರ ಸಾಹಸಪಟ್ಟರು.

**ಪರಾರಿಯಾದ ಹಂತಕರು...**

ಮೀರಾಸಾಬನನ್ನು ಭೀಕರವಾಗಿ ಕೊಲೆ ಮಾಡಿದ ಮಲ ತಮ್ಮ ಶಾನೂರ ಜಮಖಂಡಿ (ಧೂಪದಾಳ) ಸೋದರಮಾವ ಬಷೀರ್ ಶಿಕಂದರ್ ಕಿಲ್ಲೇದಾರ (ಅವರಗೋಳ) ಇವರಿಬ್ಬರು ಮಾರಕಾಸ್ತ್ರಗಳೊಂದಿಗೆ ಪರಾರಿ ಆಗಲು ಯತ್ನಿಸಿದರು. ಆದರೆ ಇವರ ಮೋಟಾರ್ ಬೈಕ್ ಕೈಕೊಟ್ಟ ಕಾರಣ ಜನ ಜಂಗುಳಿಯಲ್ಲಿ ಏನೂ ಆಗಿಲ್ಲವೆನ್ನುವಂತೆ ಮಾರಕಾಸ್ತ್ರ ಹಿಡಿದುಕೊಂಡು ಸರಸರನೇ ಓಡುತ್ತ ಪರಾರಿ ಆಗಿಬಿಟ್ಟರು. ಮೀರಾಸಾಬನ ಕೊಲೆ ನಡೆದು ಹತ್ತು ನಿಮಿಷಗಳ ಅಂತರದಲ್ಲಿ ಹುಕ್ಕೇರಿ ಪೊಲೀಸ್ ಠಾಣೆಯ ಚತುರ ಹಾಗೂ ಧಾಡಸಿ ಇನ್‌ಸ್ಪೆಕ್ಟರ್ ಮಹಾಂತೇಶ ಬಸಾಪುರ ಮತ್ತು ಸಿಬ್ಬಂದಿಗಳು ಧಾವಿಸಿ ಬಂದರು.

**ಪೊಲೀಸರಿಗೆ ದೂರು...**

ಇತ್ತ ಮೀರಾಸಾಬ ಜಮಖಂಡಿ ಕೊಲೆಯ ಸುದ್ದಿ ತಿಳಿಯುತ್ತಲೇ ತಮ್ಮ ಲಾಲಸಾಬ ಜಮಖಂಡಿ, ಅಕ್ಕ ರೇಷ್ಮಾ, ತಾಯಿ ಮಮ್ತಾಜ ಹಾಗೂ ಬಂಧು-ಬಳಗದವರು ಧಾವಿಸಿ ಬಂದರು. ಕೊಲೆಯಾದ ಮೀರಾಸಾಬನ ಶವ ಕಂಡು ಎದೆ ಎದೆ ಬಡಿದುಕೊಂಡು ಅತ್ತು ಕರೆದರು. ಲಾಲಸಾಬ ಜಮಖಂಡಿ ಸ್ಥಳದಲ್ಲಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಮಹಾಂತೇಶ ಬಸಾಪೂರ ಅವರಿಗೆ ದೂರು ನೀಡಿದರು. ತಕ್ಷಣ ಇನ್‌ಸ್ಪೆಕ್ಟರ್ ಮಹಾಂತೇಶ ಅವರು ವಿಷಯವನ್ನು ಗೋಕಾಕ ಡಿವೈಎಸ್ಪಿ ರವಿ ನಾಯಕ, ಬೆಳಗಾವಿಯ ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರಿಗೆ ತಿಳಿಸಿ ಅವರ


ಮುಖ್ಯಪೇದೆ ಚನಗೌಡ ಪಾಟೀಲ ಹಾಗೂ ಪೇದೆ ಮಂಜುನಾಥ ಕಬ್ಬೂರ


ಮೃತನ ಮಲತಾಯಿ ಮೆಹಬೂಬಿ


ಮೃತನ ಅಜ್ಜಿ ಹಸ್ಮತ್‌ಬೀ


ಹಂತಕರಾದ ಮಲ ತಮ್ಮ ಶಾನೂರ್ ಆತನ ಸೋದರಮಾವ ಬಷೀರ್ ಕಿಲ್ಲೆದಾರ್‌ನಿಂದ ನಡೆದ ಮೀರಾಸಾಬನ ಕೊಲೆಯನ್ನು ನೋಡಲು ಸೇರಿದ್ದ ಜನಸಮೂಹ

☞ 10

# ಘಟಪ್ರಭಾದ ಪೊಲೀಸ್ ಕಾನ್‌ಸ್ಟೇಬಲ್ ರಾಜು ಧುಮಾಳೆ ಅವರಿಗೆ ಅತ್ಯುತ್ತಮ ಕರ್ತವ್ಯ ನಿರ್ವಹಣೆಗಾಗಿ ಹಿರಿಯ ಅಧಿಕಾರಿಗಳಿಂದ ಪ್ರಶಂಸಾ ಪತ್ರ

ಬೆಳಗಾವಿ

✍ ಮನ್ನಾಪೂರ


ಕರ್ತವ್ಯ ದಕ್ಷ ಕಾನ್‌ಸ್ಟೇಬಲ್ ರಾಜು ಧುಮಾಳೆ

**ಪೊ**ಲೀಸ್ ಇಲಾಖೆಯಲ್ಲಿ ಶಿಸ್ತು, ಧಾಡಸಿತನ, ಚತುರತೆಗೆ ಹೆಸರಾದ ಕಾನ್‌ಸ್ಟೇಬಲ್ ರಾಜು ಧುಮಾಳೆ ಅವರು ದಕ್ಷತೆ, ಪ್ರಾಮಾಣಿಕತೆ ಮೈಗೂಡಿಸಿಕೊಂಡು ಅತ್ಯುತ್ತಮವಾಗಿ ಕರ್ತವ್ಯ ನಿಭಾಯಿಸುತ್ತಿದ್ದಾರೆ. ಸಮಾಜದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ನಿಟ್ಟಿನಲ್ಲಿ ಹಿರಿಯ ಅಧಿಕಾರಿಗಳ ನಿರ್ದೇಶನದಲ್ಲಿ ಸಹೋದ್ಯೋಗಿಗಳ ಜತೆ ಕೂಡಿ ಹಗಲಿರುಳು ಶ್ರಮಿಸುತ್ತಿದ್ದಾರೆ. ರಾಜು ಧುಮಾಳೆಯವರ ಅತ್ಯುತ್ತಮ ಕರ್ತವ್ಯ ನಿರ್ವಹಣೆ ಮನಗಂಡು ಬೆಳಗಾವಿ ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿಗಳಾದ ಶ್ರುತಿ ಎನ್.ಎಸ್. ರಾಮನಗೌಡ ಬಸರಗಿ ಪ್ರಶಂಸಾ ಪತ್ರ ನೀಡಿ ಗೌರವಿಸಿದ್ದಾರೆ.

ಬೆಳಗಾವಿ ಜಿಲ್ಲೆಯ ಮೂಡಲಗಿ ತಾಲ್ಲೂಕಿನ ಘಟಪ್ರಭಾ ಪೊಲೀಸ್ ಠಾಣೆ ಭೌಗೋಳಿಕವಾಗಿ ತುಂಬಾ ದೊಡ್ಡ ಠಾಣೆಯಾಗಿದ್ದು, ಪೊಲೀಸ್ ಠಾಣೆಯ ವ್ಯಾಪ್ತಿಯ ಅನೇಕ ಹಳ್ಳಿಗಳು ಸೂಕ್ಷ್ಮವಾಗಿ ಗುರುತಿಸಿಕೊಂಡಿವೆ. ಇಲ್ಲಿ ಕರ್ತವ್ಯ ನಿರ್ವಹಿಸಲು ಚತುರತೆ ಮತ್ತು ಧಾಡಸಿತನ, ಬಹಳ ಮುಖ್ಯ. ಇಂತಹದರಲ್ಲಿ ಪೊಲೀಸ್ ಕಾನ್‌ಸ್ಟೇಬಲ್ ರಾಜು ಧುಮಾಳೆ ಅವರು ಹಿರಿಯ ಅಧಿಕಾರಿಗಳ ನಿರ್ದೇಶನದಂತೆ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸುತ್ತ, ಸಮಾಜ ದ್ರೋಹಿಗಳನ್ನು ಗುರುತಿಸುವುದರೊಂದಿಗೆ, ಮಟಕಾ, ಜೂಜಾಟ, ಇಸ್ಪೀಟ್, ಗಾಂಜಾ, ಕಳ್ಳತನ, ದರೋಡೆ, ಕಳ್ಳಭಟ್ಟಿ, ಶ್ರೀಗಂಧ, ಕಳ್ಳಸಾಗಣೆ, ಕೊಲೆ, ಸುಲಿಗೆ ಮುಂತಾದ ಕೃತ್ಯಗಳನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿದ್ದಾರೆ.

ಮೂಲತಃ ರಾಯಭಾಗ ತಾಲ್ಲೂಕಿನ ಮೊರಬ ಗ್ರಾಮದಲ್ಲಿ ಕಲ್ಲಪ್ಪ ಹಾಗೂ ಜೀಜಾಬಾಯಿ ದಂಪತಿಗಳಿಗೆ ಹಿರಿಯ ಸುಪುತ್ರರಾಗಿ ರಾಜು ಧುಮಾಳೆ ಬಾಲ್ಯದಿಂದಲೇ ಆದರ್ಶ ಸಂಸ್ಕಾರಗಳನ್ನು ಬೆಳೆಸಿಕೊಂಡಿದ್ದಾರೆ. ಪದವಿವರೆಗೆ ವ್ಯಾಸಂಗ ಮಾಡಿದ ಇವರು 2012 ಜನವರಿಯಲ್ಲಿ ಹುಬ್ಬಳ್ಳಿ-ಧಾರವಾಡ ನಗರಕ್ಕೆ ಪೊಲೀಸ್ ಕಾನ್‌ಸ್ಟೇಬಲ್ ಆಗಿ ಆಯ್ಕೆಗೊಂಡು ಬುನಾದಿ ತರಬೇತಿಯಲ್ಲೂ ಕೂಡಾ ಚತುರತೆ ಮತ್ತು ಧಾಡಸಿತನ ಮೈಗೂಡಿಸಿಕೊಂಡು ಹಿರಿಯ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರರಾದರು. ಅಲ್ಲಿಂದ ಮುಂದೆ ಸಬರ್ಬನ್ ಪೊಲೀಸ್ ಠಾಣೆ ಹುಬ್ಬಳ್ಳಿಯಲ್ಲಿ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಸೇವೆ ಸಲ್ಲಿಸಿ 2016ರಲ್ಲಿ ಬೆಳಗಾವಿ ಜಿಲ್ಲೆ ಅಥಣಿ ಪೊಲೀಸ್ ಠಾಣೆಗೆ ವರ್ಗವಾಗಿ ಬಂದರು. ರಾಜು ಧುಮಾಳೆ ಅವರಿಗೆ ಇಬ್ಬರೂ ಕಿರಿಯ ಸಹೋದರರಿದ್ದು, ಅಣ್ಣನಂತೆ ಅವರೂ ಕೂಡಾ ಆದರ್ಶ ಮೈಗೂಡಿಸಿಕೊಂಡಿದ್ದಾರೆ.

ಅಥಣಿ ಪೊಲೀಸ್ ಠಾಣೆ ಬೆಳಗಾವಿ ಜಿಲ್ಲೆಯಲ್ಲಿ ದೊಡ್ಡದು. ಮಹಾರಾಷ್ಟ್ರದ ಗಡಿಗೆ ಹೊಂದಿಕೊಂಡಿರುವ ಅತ್ಯಂತ ಸೂಕ್ಷ್ಮ ಪೊಲೀಸ್ ಠಾಣೆ. ಇಲ್ಲಿಯೂ ಕೂಡಾ ರಾಜು ಧುಮಾಳೆ ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಚುನಾವಣೆ ಸಂದರ್ಭದಲ್ಲಿ ಶಿಸ್ತು, ಧಾಡಸಿತನ, ಚತುರತೆಯಿಂದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಿದ್ದಾರೆ.


2020ರಲ್ಲಿ ಅಥಣಿ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಅಂದಿನ ಎಸ್ಪಿ ಲಕ್ಷ್ಮಣ ನಿಂಬಾಳಕರ ಪ್ರಶಂಸಾ ಪತ್ರ ನೀಡಿ ರಾಜು ಧುಮಾಳೆಯವರನ್ನು ಗೌರವಿಸಿದ್ದರು



2025 ಘಟಪ್ರಭಾ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಎಸ್ಪಿ ಡಾ. ಭೀಮಾ ಶಂಕರ ಗುಳೇದ ಪ್ರಶಂಸಾ ಪತ್ರ ನೀಡಿ ಗೌರವಿಸಿದರು

ಠಾಣೆಯ ಸಿಬ್ಬಂದಿಗಳೊಂದಿಗೆ ಸೇರಿಕೊಂಡು ಅಧಿಕಾರಿಗಳ ನಿರ್ದೇಶನದಲ್ಲಿ ಕೊಲೆ, ಸುಲಿಗೆ, ಕಳ್ಳತನ, ದರೋಡೆ, ಗ್ಯಾಂಬ್ಲಿಂಗ್ ಮುಂತಾದ ಕೃತ್ಯಗಳನ್ನು ಪತ್ತೆಹಚ್ಚಿ ಸಮಾಜದಲ್ಲಿ ಶಾಂತಿ ಮತ್ತು ಸುವ್ಯವಸ್ಥೆ ನೆಲೆಸುವಂತೆ ಶ್ರಮಿಸುತ್ತ ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಣೆ ಮಾಡಿದ್ದಕ್ಕಾಗಿ 2020ರಲ್ಲಿ ಅಂದಿನ ಎಸ್ಪಿ ಲಕ್ಷ್ಮಣ ನಿಂಬರಗಿ ಇವರು ರಾಜು ಧುಮಾಳೆ ಅವರಿಗೆ ಪ್ರಶಂಸಾ ಪತ್ರ ನೀಡಿ ಗೌರವಿಸಿದ್ದಾರೆ. ಇದರೊಂದಿಗೆ ಗ್ರಾಮಸ್ಥರು, ವಿವಿಧ ಸಂಘ ಮತ್ತು ಸಂಘಟನೆಗಳು ಕೂಡಾ ಧುಮಾಳೆ ಅವರನ್ನು ಸತ್ಕರಿಸಿ ಗೌರವಿಸಿದ್ದಾರೆ.

2020ರಲ್ಲಿಯೇ ವರ್ಗಾವಣೆ ಆಗಿ ಘಟಪ್ರಭಾ ಪೊಲೀಸ್ ಠಾಣೆಯಲ್ಲಿ ರಾಜು ಧುಮಾಳೆ ಅವರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಇಲ್ಲಿಯೂ ಕೂಡಾ ಚತುರತೆ ಮತ್ತು ಧಾಡಸಿತನದಿಂದ ಕರ್ತವ್ಯ ನಿರ್ವಹಿಸುತ್ತ ಅನೇಕ ಕಳ್ಳತನ ಪತ್ತೆಹಚ್ಚುವಲ್ಲಿ ಹಿರಿಯ ಅಧಿಕಾರಿಗಳಿಗೆ ನೆರವಾಗಿದ್ದಾರೆ. ಸರಳ, ಸಜ್ಜನ ಸ್ನೇಹಜೀವಿಯಾದ ಧುಮಾಳೆ ಅವರೊಂದಿಗೆ ವಿಸ್ತೃತವಾದ ಮಾಹಿತಿದಾರರ ಜಾಲವೇ ಇದೆ. ಘಟಪ್ರಭಾ ಪೊಲೀಸ್ ಠಾಣೆ ವ್ಯಾಪ್ತಿಯ ಕಲ್ಲೋಳಿ ಗ್ರಾಮದಲ್ಲಿನ ಜೀವವಿಮೆಗಾಗಿ ತಮ್ಮನೇ ಸ್ವತಃ ಅಣ್ಣನನ್ನು ಕೊಲೆ ಮಾಡಿ ಬೀಸಾಕಿದ ಪ್ರಕರಣವನ್ನು ಪತ್ತೆ ಮಾಡುವಲ್ಲಿ ಕಾನ್‌ಸ್ಟೇಬಲ್ ರಾಜು ಧುಮಾಳೆಯವರ ಪಾತ್ರ ನಿರ್ಣಾಯಕವಾಗಿತ್ತು. ಸಿಪಿಐ, ಹೆಚ್.ಡಿ ಮುಲ್ಲಾ, ಪಿಎಸ್ಐಗಳಾದ ಹಣಮಂತ ನರಲೆ, ಎಸ್.ಆರ್. ಕಣವಿ ಅವರೊಂದಿಗೆ ಸೇರಿಕೊಂಡು ಅತ್ಯುತ್ತಮವಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

2025ನೇ ಸಾಲಿನಲ್ಲಿ ಕಾನ್‌ಸ್ಟೇಬಲ್ ರಾಜು ಧುಮಾಳೆಯವರ ಕರ್ತವ್ಯ ದಕ್ಷತೆ ಕಂಡು ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರು ಪ್ರಶಂಸಾ ಪತ್ರ ನೀಡಿ 'ನಿಮ್ಮ ಅತ್ಯುತ್ತಮ ಕರ್ತವ್ಯವು ಶ್ಲಾಘನೀಯವಾಗಿದೆ. ತಮ್ಮ ಕರ್ತವ್ಯವನ್ನು ನಾನು ಮನಪೂರ್ವಕ ಅಭಿನಂದಿಸಿ ಹಾಗೂ ತುಂಬು ಹೃದಯದಿಂದ ಶ್ಲಾಘಿಸಿ ಮುಂದೆಯೂ ಸಹ ನೀವು ಇದೇ ರೀತಿ ಕರ್ತವ್ಯವನ್ನು ನಿರ್ವಹಿಸಿಕೊಂಡು ಬರಲೆಂದು ಹಾರೈಸುತ್ತೇನೆ' ಎಂದು ಪ್ರಶಂಸಾ ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಕರ್ತವ್ಯ ದಕ್ಷ ಕಾನ್‌ಸ್ಟೇಬಲ್ ರಾಜು ಧುಮಾಳೆ ಅವರ ಕಾರ್ಯದಕ್ಷತೆಯನ್ನು ಗೋಕಾಕ ಉಪವಿಭಾಗದ ಡಿವೈಎಸ್ಪಿ ರವಿ ನಾಯಕ, ಘಟಪ್ರಭಾದ ಸಿಪಿಐ ಹೆಚ್.ಡಿ. ಮುಲ್ಲಾ, ಪಿಎಸ್ಐಗಳಾದ ಹಣಮಂತ ನೆರಲೆ, ಎಸ್.ಆರ್. ಕಣವಿ ಮತ್ತು ಸಿಬ್ಬಂದಿಗಳು ಅಭಿನಂದಿಸಿದ್ದಾರೆ. ರಾಜು ಧುಮಾಳೆ ಅವರಿಗೆ 'ಪೊಲೀಸ್ ನ್ಯೂಸ್'ನ ಹ್ಯಾಟ್ಸಫ್...! ☯


ಡಾ. ಭೀಮಾಶಂಕರ ಎಸ್ ಗುಳೇದ, ಐ.ಪಿ.ಎಸ್.
ಆರಕ್ಷಕ ಅಧೀಕ್ಷಕರು
ಪೊಲೀಸ ಭವನ, ಹಳೇ ಪಿ. ಬಿ. ರಸ್ತೆ
ಬೆಳಗಾವಿ ಜಿಲ್ಲೆ, ಬೆಳಗಾವಿ-590 016 ಕರ್ನಾಟಕ ರಾಜ್ಯ
ಕಛೇರಿ : 0831-2405204 ಮೊ : 9480804001
ಇ-ಮೇಲ್ : spbgm@ksp.gov.in

Dr. BheemaShankar S. Guled, I.P.S.
Superintendent of Police
Police Bhavan, Old P.B.Road, Belagavi Dist.
Belagavi - 590 016, Karnataka State.
Off : 0831-2405204 | Mobile : 9480804001
e-mail : spbgm@ksp.gov.in

ಸಂಖ್ಯೆ: ಸಿಬಿ/08/2025

ದಿನಾಂಕ : 14-07-2025.

: : ಪ್ರಶಂಸನಾ ಪತ್ರ : :

ಬೆಳಗಾವಿ ಜಿಲ್ಲೆಯ ಗೋಕಾಕ ಉಪವಿಭಾಗದ ಘಟಪ್ರಭಾ ಪೊಲೀಸ್ ಠಾಣೆಯಲ್ಲಿ ನೀವು ತನಿಖಾ ಸಹಾಯಕ ಕರ್ತವ್ಯ ನಿರ್ವಹಿಸುತ್ತ, 01 ಪ್ರಕರಣದಲ್ಲಿ ಅಪರಿಚಿತ ಶವದ ಬಗ್ಗೆ ವಿಚಾರಣೆ ಮಾಡಿ ಅದು ಕೊಲೆ ಪ್ರಕರಣವೆಂದು ಪತ್ತೆ ಹಚ್ಚುವಲ್ಲಿ ಮಹತ್ವದ ಪಾತ್ರವನ್ನು ವಹಿಸಿರುತ್ತೀರಿ. ಈ ನಿಮ್ಮ ಕರ್ತವ್ಯವು ಶ್ಲಾಘನೀಯವಾಗಿದೆ ಹಾಗೂ ಮೆಚ್ಚುಗೆಗೆ ಪಾತ್ರವಾಗಿದೆ. ಈ ನಿಮ್ಮ ಕರ್ತವ್ಯವನ್ನು ನಾನು ಮನ:ಪೂರ್ವಕವಾಗಿ ಅಭಿನಂದಿಸುತ್ತೇನೆ ಹಾಗೂ ತುಂಬು ಹೃದಯದಿಂದ ಶ್ಲಾಘಿಸುತ್ತಾ ಇನ್ನು ಮುಂದೆಯೂ ಸಹ ನೀವು ಇದೇ ರೀತಿ ಕರ್ತವ್ಯವನ್ನು ನಿರ್ವಹಿಸಿಕೊಂಡು ಬರುತ್ತೀರೆಂದು ಆಶಿಸುತ್ತಾ ಈ ಪ್ರಶಂಸನಾ ಪತ್ರವನ್ನು ನೀಡಲಾಗಿದೆ.

(ಡಾ. ಭೀಮಾಶಂಕರ ಎಸ. ಗುಳೇದ)

ಗೆ,
ಶ್ರೀ ಆರ್. ಕೆ. ದುಮಾಳೆ,
ಸಿ.ಪಿ.ಸಿ. ಬ.ನಂ: 3222,
ಘಟಪ್ರಭಾ ಪೊಲೀಸ್ ಠಾಣೆ,
ಬೆಳಗಾವಿ ಜಿಲ್ಲೆ.

ಕಾನ್‌ಸ್ಟೇಬಲ್ ರಾಜು ಧುಮಾಳೆ ಅವರಿಗೆ ನೀಡಿದ ಪ್ರಶಂಸಾ ಪತ್ರ

# ಕೊಚ್ಚಿ ಕೊಚ್ಚಿ ಕೊಲೆಗೈದ ಹಂತಕರು!

9 ☞

ನಿರ್ದೇಶನದಂತೆ ಹುಕ್ಕೇರಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿಕೊಂಡು ಪಂಚನಾಮೆ, ಸಂಬಂಧಿಕರ ಮತ್ತು ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡರು.

**ಮಿಂಚಿನ ಕಾರ್ಯಾಚರಣೆ... ಹಂತಕರ ಬಂಧನ...**

ಮಟ... ಮಟ ಮಧ್ಯಾಹ್ನ ಹಾಡುಹಗಲೇ ಸಿನೀಮಿಯ ರೀತಿ ನಡೆದ ಕೊಲೆಯನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಿದ್ದ ಪೊಲೀಸ್ ಇನ್‌ಸ್ಪೆಕ್ಟರ್ ಮಹಾಂತೇಶ ಅವರು ಡಿವೈಎಸ್ಪಿ ರವಿ ನಾಯಕ, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಎಸ್ಪಿ ಡಾ. ಭೀಮಾಶಂಕರ ಗುಳೇದ ಅವರೊಂದಿಗೆ ಸಮಾಲೋಚಿಸಿ ನಿರ್ದೇಶನಗಳನ್ನು ಪಡೆದುಕೊಂಡು ಹಂತಕರ ಬಂಧನಕ್ಕೆ ಮಿಂಚಿನ ಕಾರ್ಯಾಚರಣೆಗೆ ಸಿದ್ಧರಾದರು. ತಮ್ಮ ಚತುರ ಮತ್ತು ಧಾಡಸಿ ಸಿಬ್ಬಂದಿಗಳಾದ ಸಿ.ಡಿ. ಪಾಟೀಲ, ಮಂಜುನಾಥ ಕಬ್ಬೂರ, ಅಜೀತ ನಾಯಿಕ, ಆರ್.ಯು. ಹಣಮನ್ನವರ, ಕೆ.ವಿ. ಕರೆಣ್ಣವರ, ಬಿ.ಕೆ. ಸಣ್ಣಕ್ಕಿ ಅವರ ತಂಡ ಖಚಿತವಾದ ಮಾಹಿತಿ ಆಧರಿಸಿ ಹುಕ್ಕೇರಿ ಹೊರವಲಯದಲ್ಲಿರುವ ಬಾಪೂಜಿ ಸ್ಕೂಲ್ ಹತ್ತಿರ ಹಂತಕರನ್ನು ತಮ್ಮ ವಶಕ್ಕೆ ತೆಗೆದುಕೊಂಡು ಇನ್‌ಸ್ಪೆಕ್ಟರ್ ಮಹಾಂತೇಶ ಬಸಾಪೂರ ಮುಂದೆ ಹಾಜರುಪಡಿಸಿದರು. ವಿಚಾರಣೆ ಕಾಲಕ್ಕೆ ಹಂತಕರು ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಕೇವಲ ಒಂದೆರಡು ಗಂಟೆಗಳ ಕ್ಷಿಪ್ರ ಕಾರ್ಯಾಚರಣೆ ಇದಾಗಿದೆ. ಬಂಧಿತರನ್ನು ನ್ಯಾಯಾಧೀಶರ ಮಂದೆ ಹಾಜರುಪಡಿಸಿದಾಗ ಅವರನ್ನು ಗೋಕಾಕದ ಉಪ ಕಾರಾಗೃಹಕ್ಕೆ ಕಳಿಸಲು ಆದೇಶಿಸಿದ್ದಾರೆ.

**ಇನ್‌ಸ್ಪೆಕ್ಟರ್ ಮಹಾಂತೇಶ ತಂಡಕ್ಕೆ ಶ್ಲಾಘನೆ...**

ಹಾಡುಹಗಲೇ ಸಿನೀಮಿಯ ರೀತಿ ಮೀರಾಸಾಬನನ್ನು ಬರ್ಬರವಾಗಿ ಕೊಲೆ ನಡೆಸಿ ತಲೆಮರೆಸಿಕೊಳ್ಳಲು ಪ್ರಯತ್ನಿಸುತ್ತಿದ್ದ ಹಂತಕರಾದ ಶಾನೂರ ಹಾಗೂ ಬಷೀರ್‌ನನ್ನು ಕೃತ್ಯ ನಡೆದು ಎರಡು ಗಂಟೆಯ ಒಳಗಾಗಿ ಮಿಂಚಿನ ಕಾರ್ಯಾಚರಣೆ ನಡೆಸಿ ಬಂಧಿಸುವಲ್ಲಿ ಯಶಸ್ವಿಯಾದ ಪೊಲೀಸ್ ಇನ್‌ಸ್ಪೆಕ್ಟರ್ ಮಹಾಂತೇಶ ಬಸಾಪೂರ, ಸಿಬ್ಬಂದಿಗಳಾದ ಸಿ.ಡಿ. ಪಾಟೀಲ, ಎಂ.ಎಸ್. ಕಬ್ಬೂರ, ಎ.ಎಲ್. ನಾಯಿಕ, ಆರ್.ಯು. ಹಣಮನ್ನವರ, ಕೆ.ವಿ. ಕರೆಣ್ಣವರ, ಬಿ.ಕೆ. ಸಣ್ಣಕ್ಕಿ ಇವರ ಕಾರ್ಯದಕ್ಷತೆಯನ್ನು ಎಸ್ಪಿ ಡಾ. ಭೀಮಾಶಂಕರ ಗುಳೇದ, ಹೆಚ್ಚುವರಿ ಎಸ್ಪಿ ರಾಮನಗೌಡ ಬಸರಗಿ, ಡಿವೈಎಸ್ಪಿ ರವಿ ನಾಯಕ ಶ್ಲಾಘಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸಾರ್ವಜನಿಕರು ಕೂಡಾ ಹುಕ್ಕೇರಿ ಪೊಲೀಸರ ಕಾರ್ಯದಕ್ಷತೆಯನ್ನು ಕೊಂಡಾಡುತ್ತಿದ್ದಾರೆ. ಇವರಿಗೆಲ್ಲ 'ಪೊಲೀಸ್ ನ್ಯೂಸ್'ನ ಹ್ಯಾಟ್ಸಫ್. ☯


ಮಚ್ಚಿನ ಹೊಡೆತಕ್ಕೆ ಮೀರಾಸಾಬ ಜಮಖಂಡಿ ಮುಂಗೈ ಬೇರ್ಪಟ್ಟಿರುವುದು





ಕೊಲೆಯಾದ ನಾಯಿಗಳು

# ಮೂಕಪ್ರಾಣಿ ನಾಯಿಗಳ ಮೇಲೆ ಇದೆಂತಾ ಕ್ರೌರ್ಯ?!

**ದಯವಿಲ್ಲದ ಧರ್ಮ ಯಾವುದಯ್ಯ ? ದಯ ಬೇಕು ಸಕಲ ಪ್ರಾಣಿಗಳಲ್ಲಿ... 12ನೇ ಶತಮಾನದ ಬಸವಣ್ಣನವರ ಕರ್ಮಭೂಮಿಯಾದ ಬೀದರ ಜಿಲ್ಲೆಯಲ್ಲಿ ನಡೆಯಬಾರದ್ದೆಲ್ಲವೂ ಎಗ್ಗಿಲ್ಲದೆ ನಡೆಯುತ್ತಲೇ ಇದೆ! ಮಾನವೀಯತೆ ಇಲ್ಲದ ಮಾನಗೇಡಿಗಳು ಮೂಕಪ್ರಾಣಿ ನಾಯಿಗಳ ಮೇಲೆ ರೌದ್ರಾವತಾರ ತಾಳಿ ಕ್ರೌರ್ಯವನ್ನು ಮೆರೆದಿರುವುದು ಬೀದರ ಜಿಲ್ಲೆಯ ಮನ್ನಾಏಖೆಳ್ಳಿ ಗ್ರಾಮ ಪಂಚಾಯತ್‌ನಲ್ಲಿ ನಡೆದಿದೆ!**



ನಾಯಿ ಕಡಿತಕ್ಕೆ ಗಾಯಗೊಂಡ ಮಕ್ಕಳು

ಬೀದರ
ವೀರಶೆಟ್ಟಿ ಕುಂಬಾರ

ನಡೆದಿರುವುದೇನೆಂದರೆ, ಹುಚ್ಚುನಾಯಿಯೊಂದು ಇಬ್ಬರು ಬಾಲಕರು ಸೇರಿದಂತೆ ನಾಲ್ಕು ಜನರಿಗೆ ಕಚ್ಚಿ ಗಾಯ ಗೊಳಿಸಿದೆ. ಇದರಿಂದಾಗಿ ಮನ್ನಾ ಏಖೆಳ್ಳಿ ಗ್ರಾಮ ಪಂಚಾಯತ್‌ನವರು ಬೀದಿನಾಯಿಗಳನ್ನು ರೇಬೀಸ್ ಹಾಗೂ ಇನ್ನಿತರ ರೋಗಗಳು ಹರಡ ದಂತೆ ಚಿಕಿತ್ಸೆ ನೀಡುವ ನೆಪದಲ್ಲಿ ಸುಮಾರು 30ರಿಂದ 40 ನಾಯಿಗಳಿಗೆ ಹಿಡಿದು ಮನಸೋಇಚ್ಛೆ ಹಲ್ಲೆ ನಡೆಸಿರುವುದು



ಸಾಮಾಜಿಕ ಜಾಲತಾಣಗಳಲ್ಲಿ ಮತ್ತು ದೃಶ್ಯ ಮಾಧ್ಯಮಗಳಲ್ಲಿ ವರದಿಯಾಗಿದೆ! ಇದರ ಬೆನ್ನಲ್ಲೆ ದಿನಾಂಕ 11-8-2025 ರಂದು ಮನ್ನಾಏಖೆಳ್ಳಿ ಪೊಲೀಸ್ ಠಾಣೆಯ ಸಿಪಿಐ ಅರವಿಂದರವರು ಕರ್ನಾಟಕ ರಾಜ್ಯ ಪೊಲೀಸ್ ಪರವಾಗಿ ಮನ್ನಾಏಖೆಳ್ಳಿ ಪೊಲೀಸ್ ಠಾಣೆಯಲ್ಲಿ ಒಂದು ದೂರು ದಾಖಲಿಸಿದ್ರು.

ದಿನಾಂಕ 8-8-2025ರಂದು ಮುಂಜಾನೆ 10 ಗಂಟೆಯಿಂದ ಸಾಯಂಕಾಲ 5 ಗಂಟೆಯ ಮಧ್ಯದ ಅವಧಿಯಲ್ಲಿ ಯಾರೋ ಅಪರಿಚಿತರು ಬೀದಿ ನಾಯಿಗಳನ್ನು ಸಾಯುವ ರೀತಿಯಲ್ಲಿ ಹೊಡೆಯುತ್ತಿರುವ ವಿಡಿಯೋ ಚಿತ್ರೀಕರಣವನ್ನು ನೋಡಿ ಊರಿಗೆ ಊರೇ ರೊಚ್ಚಿಗೆದ್ದಿತ್ತು. ಗ್ರಾಮದಲ್ಲಿ ಆ ಮನೆ ಈ ಮನೆಗಳಿಂದ ಹಳಸಲ ಅನ್ನ ತಿಂದುಕೊಂಡು ಚೆನ್ನಾಗಿರುವ ಬೀದಿನಾಯಿಗಳನ್ನು ಕ್ರೂರವಾಗಿ ಹೊಡೆದು ಪ್ರಾಣಿಗಳ ಮೇಲೆ ತಮ್ಮ ಕ್ರೌರ್ಯವೆಸಗಿರುತ್ತಾರೆ! ಈ ಘಟನೆಗೆ ಕಾರಣಕರ್ತರಾದವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸಬೇಕೆಂದು ದೂರಿನಲ್ಲಿ ಆಗ್ರಹಿಸಲಾಗಿತ್ತು.

ಪಿಎಸ್‌ಐ ಮಹೇಂದ್ರಕುಮಾರ್‌ರವರು ಅಸಂಜ್ಞೆಯ ಅಪರಾಧವಾಗಿದ್ದರಿಂದ ಠಾಣೆಯ ಎನ್‌ಸಿ ನಂ. 15/2025 ಕಲಂ 11(1)(ಎ) Prevtion of Cruelty to Animal Acto 1960 ನೇದ್ದರ ಕಲಂ 174 ಬಿಎನ್ ಎಸ್‌ಎಸ್ ಅಡಿಯಲ್ಲಿ ಕೇಸು ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

## ನೇರ ಆರೋಪ!

ಮನ್ನಾಏಖೆಳ್ಳಿ ಗ್ರಾಮದ ಗ್ರಾಮ ಪಂಚಾಯತ್ ನೇತೃತ್ವದಲ್ಲಿ ಬೀದಿನಾಯಿಗಳಿಗೆ ರೇಬೀಸ್ ಚುಚ್ಚುಮದ್ದು ನೀಡುವ ನೆಪದಲ್ಲಿ ಅಮಾಯಕ ನಾಯಿಗಳನ್ನು ಕೊಲ್ಲಲಾಗಿದೆ, ಕೆಲವು ನಾಯಿಗಳಿಗೆ ಚಿತ್ರಹಿಂಸೆ ನೀಡಲಾಗಿದೆ. ಇದರ ನೇತೃತ್ವ ವಹಿಸಿದ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಭಾಗ್ಯಜ್ಯೋತಿರವರ ಮೇಲೆ ಸೂಕ್ತ ಕಾನೂನು ಕ್ರಮ ಜರುಗಿಸ ಬೇಕೆಂದು ಹೆಮರೆಡ್ಡಿ ಮಲ್ಲಮ್ಮ ವೇಲ್ ಫೇರ್ ಮತ್ತು ಚಾರಿಟಬಲ್ ಟ್ರಸ್ಟ್(ರಿ)ಯ ಅಧ್ಯಕ್ಷರಾದ ಪ್ರಶಾಂತರೆಡ್ಡಿ ಜವಳಗಿಯವರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯವರಿಗೆ ಬರೆದ ದೂರಿದಲ್ಲಿ ನೇರವಾಗಿ ಆರೋಪಿಸಿದ್ದಾರೆ.

ರೇಬಿಸ್ ಚುಚ್ಚುಮದ್ದು ಕೊಡುವ ನೆಪದಲ್ಲಿ ಅಮಾಯಕ ನಾಯಿಗಳನ್ನು ಚಿತ್ರಹಿಂಸೆ ನೀಡಿದವರು ಮತ್ತು ನಾಯಿಗಳನ್ನು ಕೊಲೆ ಮಾಡಿ ಪಕ್ಕದ ಮುಕುಂದ ಗ್ರಾಮದ ವ್ಯಾಪ್ತಿಯಲ್ಲಿ ಬಿಸಾಡಲಾಗಿದೆ! ಈ ಬಗ್ಗೆ ತನಿಖೆ ನಡೆಸಿ ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕೆಂದು ಮನವಿ ಮಾಡಿದ್ದಾರೆ.



ಸಿಎಸ್ ಗಿರೀಶ್ ದಿಲೀಪ್ ಬದೋಲೆ



ಇಓ ಲಕ್ಷ್ಮಿ ಉಮಾಕಾಂತ್



ಪಿಡಿಓ ಭಾಗ್ಯಜ್ಯೋತಿ

## ಶಿಕ್ಷೆಯಾಗಲಿ!

ನಿಷ್ಪಾಕ್ಷಪಾತ ತನಿಖೆಗೆ ಹೆಸರಾದ ಜಿಲ್ಲಾಧಿಕಾರಿ ಶ್ರೀಮತಿ ಶಿಲ್ಪಾ ಶರ್ಮಾರವರು ಅಮಾಯಕ ನಾಯಿಗಳ ಮೇಲೆ ಕ್ರೌರ್ಯ ಮೆರೆದಿರುವ ಮನ್ನಾಏಖೆಳ್ಳಿ ಗ್ರಾಮ ಪಂಚಾಯತಿ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಾಗಿದೆ.


ತೊದಲು ಮಾತನಾಡುವ ಮಗುವಿನಿಂದ ಹಿಡಿದು ಸಾವಿನ ಅಂಚಿನಲ್ಲಿರುವ ಮುದುಕರತನಕ ಕೇಳಿ, ಇದು ಗ್ರಾಮ ಪಂಚಾಯತ್ ಮನ್ನಾಏಖೆಳ್ಳಿಯವರು ಮಾಡಿರುವ ಕೃತ್ಯವೆಂದು ಹೇಳ್ತಾರೆ! 'ಅಪರಿಚಿತರು' ಎಂಬ ಪ್ರಶ್ನೆ ಹೇಗಾಯಿತು? ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ್ ಗುಂಟೆ, ಹೆಚ್ಚುವರಿ ಎಸ್ಪಿ ಚಂದ್ರಕಾಂತ್ ಪೂಜಾರಿ, ಡಿವೈಎಸ್ಪಿ ಜೆ.ಎಸ್. ನ್ಯಾಮಗೌಡರು, ಸಿಪಿಐ ಶ್ರೀನಿವಾಸ ಅಲ್ಲಾಪೂರೆ, ಪಿಎಸ್‌ಐ ಮಹೇಂದ್ರಕುಮಾರ್ ಮತ್ತು ಸಿಬ್ಬಂದಿಗಳು ತಪ್ಪಿತಸ್ಥ ಗ್ರಾಮ ಪಂಚಾಯತ್ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರಿಗೆ ಒದ್ದು ವಿಚಾರಣೆ ನಡೆಯಿಸಿ ಕಠಿಣ ಕಾನೂನು ಕ್ರಮ ಜರುಗಿಸಬೇಕಾಗಿದೆ!



ಸಚಿವ ಈಶ್ವರ ಖಂಡ್ರೆ




ಸಚಿವ ಪ್ರಿಯಾಂಕ ಖರ್ಗೆ



ಸಚಿವ ಕೆ. ವೆಂಕಟೇಶ್



ಸಚಿವ ರಹೀಮ್ ಖಾನ್



ಶಾಸಕ ಡಾ. ಶೈಲೇಂದ್ರ



ಜಿಲ್ಲಾಧಿಕಾರಿ ಶ್ರೀಮತಿ ಶಿಲ್ಪಾ ಶರ್ಮಾ

ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್‌ರವರ ಮುಗ್ಧ ನಾಯಿಗಳ ಮೇಲೆ ದೌರ್ಜನ್ಯವೆಸಗಿದ ಮನ್ನಾಏಖೆಳ್ಳಿ ಗ್ರಾಮ ಪಂಚಾಯತ್‌ನವರಿಗೆ ಶಿಕ್ಷೆಯಾಗುವಂತೆ ಗಮನಹರಿಸಬೇಕಾಗಿದ್ದು ಅವಶ್ಯಕವಾಗಿದೆ!

ಪ್ರತಿ ಜೀವಿಗೂ ಜೀವಿಸುವ ಹಕ್ಕು ಇದೆ. ಅವುಗಳಿಗೆ ಹಿಂಸೆ ನೀಡಬಾರದು, ಕೊಲೆ ಮಾಡಬಾರದು ಎಂದು ಹೇಳುವ ಬೀದರ ಜಿಲ್ಲೆಯ ಉಸ್ತುವಾರಿ ಸಚಿವರು, ಅರಣ್ಯ, ಪರಿಸರ ಮತ್ತು ಜೀವಶಾಸ್ತ್ರ ಸಚಿವರಾದ ಈಶ್ವರ ಬಿ. ಖಂಡ್ರೆಯವರೇ ಮಾನವೀಯತೆ ಇಲ್ಲದ ಮಾನಗೇಡಿ ಮನ್ನಾಏಖೆಳ್ಳಿ ಗ್ರಾಮ ಪಂಚಾಯತ್‌ನ ಮೇಲೆ ಕಠಿಣ ಕಾನೂನು ಕ್ರಮ ಜರುಗಿಸಬೇಕಾದ್ದು ಇದೀಗ ಅತ್ಯಾವಶ್ಯಕ ವಾಗಿದೆ!

ಶಾಸಕ ಡಾ. ಶೈಲೇಂದ್ರ ಕೆ. ಬೆಲ್ದಾಳೆಯವರ ಮತ ಕ್ಷೇತ್ರದ ಕೇಂದ್ರ ಬಿಂದುವಾದ ಮನ್ನಾಏಖೆಳ್ಳಿಯಲ್ಲಿ ಈ ಘಟನೆಯ ಮೇಲೆ ಕಠಿಣ ಕ್ರಮಕ್ಕೆ ಮುಂದಾಗಬೇಕಾಗಿದ್ದು ಅತ್ಯಾವಶ್ಯಕವಾಗಿದೆ.

ದಿನಾಂಕ 13-8-2025ರಂದು ಸದನದಲ್ಲಿ ಶಾಸಕ ಗೌಡರವರ ನಾಯಿಗಳ ಪ್ರಶ್ನೆಗೆ ಪೌರಾಡಳಿತ ಸಚಿವ ರಹಿಮ್‌ಖಾನ್‌ರವರು ಉತ್ತರಿಸಿ ಸಂತಾಹರಣ ಮತ್ತು ಲಸಿಕೆ ಹಾಕಲು ಮಾತ್ರ ಕಾನೂನಿನಲ್ಲಿ ಅವಕಾಶವಿದೆ ಎಂದಾದರೆ ಇಲ್ಲಿ ನಾಯಿಗಳ ಮಾರಣಹೋಮ ನಡೆದಿದೆಯಲ್ಲಾ, ನ್ಯಾಯ ಕೊಡಿಸುವವರು ಯಾರು?

ಸುಪ್ರೀಂ ಕೋರ್ಟ್‌ನ ಆದೇಶದಲ್ಲಿ ನಾಯಿಗಳನ್ನು ಕೊಲ್ಲಿ ಎಂದು ಎಲ್ಲಿಯೂ ಹೇಳಿಲ್ಲ! ಬೀಡಾಡಿ ನಾಯಿಗಳಿಗೆ ಒಂದು ಸ್ಥಳದಲ್ಲಿ ಸೂಕ್ತ ವ್ಯವಸ್ಥೆ ಕಲ್ಪಿಸಿ, ಅಲ್ಲಿ ಸೌಲಭ್ಯ ಒದಗಿಸಲು ಹೇಳಿದೆ. ಇದರಿಂದ ನಾಯಿಗಳಿಗೂ ಸಮಸ್ಯೆ ಇಲ್ಲ, ಜನರಿಗೂ ತೊಂದರೆ ಇಲ್ಲ ಎಂದು ತಿಳಿಸಿದೆ.

## ಅತಿದೊಡ್ಡ ಗ್ರಾಮ ಪಂಚಾಯ್ತಿ

ಬೀದರ ಜಿಲ್ಲೆಯಲ್ಲಿ ಅತಿದೊಡ್ಡ ಗ್ರಾಮ ಪಂಚಾಯತ್ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದ್ದು ಅಷ್ಟೇ ಅಲ್ಲ, ಜಿಲ್ಲೆಯಲ್ಲಿ ಅತಿ ಆದಾಯ ಇರುವ ಗ್ರಾಮ ಪಂಚಾಯತ್ ಮನ್ನಾಏಖೆಳ್ಳಿ ಆಗಿದೆ. ಕಲ್ಯಾಣ ಕರ್ನಾಟಕ ಭಾಗದವರೇ ಆದ ಸಚಿವ ಪ್ರಿಯಾಂಕ ಖರ್ಗೆಯವರೆ, ಈ ಗ್ರಾಮ ಪಂಚಾಯತ್‌ನತ್ತ ಗಮನಹರಿಸಬೇಕಾಗಿದ್ದು ಅತ್ಯಾವಶ್ಯಕವಾಗಿದೆ. ಈ ಗ್ರಾಮ ಪಂಚಾಯಿತಿಯಲ್ಲಿ ಪ್ರಮಾಣಿಕವಾಗಿ ಜನಸಾಮಾನ್ಯನ ಯಾವುದೇ ಕೆಲಸ ಆಗುವುದಿಲ್ಲ!

## ಡಿಜಿಟಲ್ ಖಾತೆ

ಡಿಜಿಟಲ್ ಖಾತೆಗೆ ಬೇಕಾದ ದಾಖಲೆಗಳನ್ನು ತೆಗೆದು ಹೋದರೆ ಅಲ್ಲಿ ಅಲ್ಲದ ಕುಂಟು ನೆಪ ಹೇಳುವುದು. ಸುಮಾರು 30-40 ವರ್ಷ ಹಿಂದಿನ ಮನೆಗಳಿಗೆ ತಮ್ಮ ಮೂಲ ದಾಖಲೆಗಳನ್ನು ತನ್ನಿ ಎಂಬ ನೆಪ ಹೇಳಿ ಸಾಗಿ ಹಾಕುವ ಈ ಗ್ರಾಮ ಪಂಚಾಯತ್ ಮೂಲ ದಾಖಲೆಗಳು ಬೇಕಾದರೆ ಸರಕಾರದ ಆದೇಶವಾಗಲಿ, ಗೆಜೆಟ್ ಆಗಲಿ ಬಹಿರಂಗಪಡಿಸಿ. ಸಚಿವ ಖರ್ಗೆಯವರೆ ಬೇರೆ ಎಲ್ಲಾ ಗ್ರಾಮ ಪಂಚಾಯತ್‌ಗಳಿಗೆ ಸರಕಾರದ ಸುತ್ತೋಲೆಯಂತೆ ದಾಖಲೆಗಳು ಜನರು ತೆಗೆದುಕೊಂಡು ಹೋದಾಗ ಅಲ್ಲಿ ಕೆಲಸವಾಗುತ್ತದೆ. ಆದರೆ ಮನ್ನಾಏಖೆಳ್ಳಿ ಗ್ರಾಮ ಪಂಚಾಯತ್‌ನ ಕಂಪ್ಯೂಟರ್, ಯಾವುದೇ ವ್ಯಕ್ತಿಗಳ ಮೂಲ ದಾಖಲೆ ಇಲ್ಲದೆ ತೆಗೆದುಕೊಳ್ಳುವುದಿಲ್ಲವೆ? ಮನ್ನಾಏಖೆಳ್ಳಿ ಗ್ರಾಮ ಪಂಚಾಯತ್‌ಗೆ ಪ್ರತ್ಯೇಕವಾದ ಕಾನೂನು ಇದೆಯೆ? ಸಚಿವರು ಇದಕ್ಕೆ ಸ್ಪಷ್ಟನೆ ನೀಡಬೇಕಾಗಿದೆ.

ಇಲ್ಲಿ ಕಾನೂನಿಗೆ ಯಾವ ಕಿಮ್ಮತ್ತು ಇಲ್ಲವೆಂದು ಅರ್ಥವೆ. ತಮ್ಮ ಮನಬಂದಂತೆ ತಾವೇ ಸರ್ವಾಧಿಕಾರಿಗಳು ಎಂಬ ಧೋರಣೆ ಹೊಂದಿರುವ ಈ ಗ್ರಾಮ ಪಂಚಾಯತ್ ಬಗ್ಗೆ ಸಿಓ ಡಾ. ಗಿರೀಶ್ ಬದೋಲೆ, ಇಓ ಲಕ್ಷ್ಮಿ ಉಮಾಕಾಂತ ಬಿರಾದಾರ ಆಗಲಿ ಯಾವುದೇ ಕ್ರಮ ಜರುಗಿಸದೆ ಮೌನಕ್ಕೆ ಶರಣಾಗಿರುವುದು ಸಂಶಯಕ್ಕೆ ಎಡೆಮಾಡಿ ಕೊಟ್ಟಿದೆ. ಈ ಗ್ರಾಮ ಪಂಚಾಯತ್‌ನ ಕರ್ಮ ಕಾಂಡದ ಕಥೆಗಳನ್ನು ಒಂದೊಂದಾಗಿ ಹೇಳುತ್ತಾ ಹೋಗುತ್ತೇನೆ ಪುಟಗಳು ಸಾಲವು ಸ್ವಾಮೀ...




ಎಸ್ಪಿ ಪ್ರದೀಪ್ ಗುಂಟಿ



ಅ॥ ಎಸ್ಪಿ ಚಂದ್ರಕಾಂತ್ ಪೂಜಾರಿ



ಸಿಪಿಐ ಶ್ರೀನಿವಾಸ್ ವಲ್ಲಾಪೂರ



ಪಿಎಸ್‌ಐ ಮಹೇಂದ್ರಕುಮಾರ್

**ಕೈಯ್ಯಲ್ಲಿ ಬುರುಡೆ ಹಿಡಿದುಕೊಂಡು ಧರ್ಮಸ್ಥಳದಲ್ಲಿ ಹೆಣ್ಮಕ್ಕಳ ನೂರಾರು ಶವಗಳನ್ನು ಹೂತು ಹಾಕಿದ್ದೇನೆ ಎಂಬುದಾಗಿ ಹೇಳಿಕೊಂಡು ಬಂದಂತಹ ಅನಾಮಿಕ ಮುಸುಕು ಧಾರಿಯ ಮಾತಿನಂತೆ ಎಸ್ ಐಟಿಯವರು ಆತ ಹೂತಿಟ್ಟಿದ್ದಾನೆ ಎಂದು ಹೇಳಿದ ಸ್ಥಳಗಳಲ್ಲಿ ಉತ್ಖನನ ಮಾಡಿದರೂ ಆತ ನೀಡಿದ ಹೇಳಿಕೆಗೆ ಹೊಂದಿಕೆಯಾಗುವ ಯಾವುದೇ ಕುರುಹುಗಳು ಸಿಗದೆ ಇರುವುದು ರಾಜ್ಯದಲ್ಲಿ ಸ್ವಾಮಿ ಮಂಜುನಾಥನನ್ನು ನಂಬುವ ಧರ್ಮಸ್ಥಳದ ಭಕ್ತರ ಆಕ್ರೋಶಕ್ಕೆ ಕಾರಣವಾಗಿದೆ. ಜತೆಗೆ ರಾಜಕೀಯವಾಗಿಯೂ ಈ ಪ್ರಕರಣ ತಿರುವು ಪಡೆಯುತ್ತಿದೆ.**



# ಧರ್ಮಸ್ಥಳದಲ್ಲಿ ಶವ ಹೂತಿಟ್ಟ ಪ್ರಕರಣಕ್ಕೆ ರಾಜಕೀಯ ತಿರುವು!

✍ಬಿ.ಎಂ. ಲವಕುಮಾರ್

ಈಗಾಗಲೇ ಧರ್ಮಸ್ಥಳದ ಪರವಾಗಿ ಗಟ್ಟಿಧ್ವನಿಯಲ್ಲಿ ಬಿಜೆಪಿ ನಿಂತಿದೆ. ಅಷ್ಟೇ ಅಲ್ಲದೆ ಧರ್ಮಸ್ಥಳದ ಕಡೆಗೆ ಮುಖಮಾಡಿದೆ. ರಾಜ್ಯದಲ್ಲಿ ಧರ್ಮಸ್ಥಳದ ಬಗೆಗಿನ ಅಪಪ್ರಚಾರವನ್ನು ವಿರೋಧಿಸಿ ಜನ ಬೀದಿಗೆ ಬರುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ಮೌನಕ್ಕೆ ಜಾರಿದರೆ ಮತ್ತೊಮ್ಮೆ ರಾಜ್ಯದಲ್ಲಿರುವ ಕಾಂಗ್ರೆಸ್ ಸರ್ಕಾರ ಹಿಂದೂ ವಿರೋಧಿ ಹಣೆಪಟ್ಟಿ ಕಟ್ಟಿಕೊಳ್ಳಬೇಕಾಗುತ್ತದೆ ಎಂದರಿತ ಸರ್ಕಾರದ ಕೆಲವು ಸಚಿವರು ಅದರಲ್ಲೂ ಡಿಸಿಎಂ ಡಿ.ಕೆ. ಶಿವಕುಮಾರ್, ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್, ಸಚಿವ ದಿನೇಶ್ ಗುಂಡೂರಾವ್ ಅವರು ಧರ್ಮಸ್ಥಳದ ವಿರುದ್ಧ



ಷಡ್ಯಂತ್ರವಿದ್ದು ಅದರ ಬಗ್ಗೆ ತನಿಖೆಯಾಗಬೇಕೆಂದು ಹೇಳಿಕೆ ನೀಡಿದ್ದಾರೆ.

ಈ ಮಾತುಗಳನ್ನು ಕಾಂಗ್ರೆಸ್‌ನ ಶಾಸಕನೋ, ನಾಯಕನೋ ಹೇಳಿದ್ದರೆ ಬಹುಶಃ ಕಾಂಗ್ರೆಸ್‌ನ ಕೆಲವರು ಇದು ವೈಯಕ್ತಿಕ ಹೇಳಿಕೆ ಎಂದು ತಿಪ್ಪೆಸಾರಿಸಿ ಬಿಡುತ್ತಿದ್ದರೇನೋ ಆದರೆ ಸರ್ಕಾರದ ಮುಖ್ಯಭಾಗವಾಗಿರುವವರೇ ಷಡ್ಯಂತ್ರವಿದೆ ಎಂಬ ಹೇಳಿಕೆಯನ್ನು ನೀಡಿರುವ ಕಾರಣದಿಂದಾಗಿ ಬಿಜೆಪಿ ಅದನ್ನೇ ಮುಂದಿಟ್ಟುಕೊಂಡು ತನ್ನ ಹೇಳಿಕೆಗಳನ್ನು ನೀಡುತ್ತಿದೆಯಲ್ಲದೆ, ತನಿಖೆಗೆ ಆಗ್ರಹಿಸುತ್ತಿದೆ. ಸದ್ಯ ಧರ್ಮಸ್ಥಳದ ವಿಚಾರಕ್ಕೆ ಬಿಜೆಪಿ ಎಂಟ್ರಿ ಕೊಟ್ಟಿದೆ. ಅಷ್ಟೇ ಅಲ್ಲದೆ ಈ ವಿಚಾರದಲ್ಲಿ ಎಲ್ಲರೂ ಒಗ್ಗಟ್ಟಾಗಿ ಹೋರಾಟ ಮಾಡಲು ಮುಂದಾಗಿದ್ದಾರೆ.

ಒಂದು ವೇಳೆ ಡಿ.ಕೆ.ಶಿವಕುಮಾರ್, ಲಕ್ಷ್ಮಿ ಹೆಬ್ಬಾಳ್ಕರ್, ದಿನೇಶ್ ಗುಂಡೂರಾವ್, ಭೈರತಿ ಸುರೇಶ್ ಅವರು ಧರ್ಮಸ್ಥಳದ ಅಪಪ್ರಚಾರದ ಹಿಂದೆ ಷಡ್ಯಂತ್ರವಿದೆ ಎಂದು ಹೇಳದೆ ಹೋಗಿದ್ದರೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಹಿಂದೂ ವಿರೋಧಿ ಸರ್ಕಾರ ಎಂಬ ಹಣೆಪಟ್ಟಿ ಬರುತ್ತಿದ್ದದಂತು ನಿಜ. ಆದರೆ ಎಚ್ಚೆತ್ತುಕೊಂಡಿರುವ ಅವರು ಧರ್ಮಸ್ಥಳದ ವಿಚಾರದಲ್ಲಿ ಷಡ್ಯಂತ್ರ ನಡೆದಿದೆ ಎಂಬುದನ್ನು ಬಹಿರಂಗವಾಗಿ ಒಪ್ಪಿಕೊಂಡಿದ್ದಾರೆ. ಅಷ್ಟೇ ಅಲ್ಲದೆ ತನಿಖೆಗೂ ಒತ್ತಾಯಿಸಿರುವುದು ಧರ್ಮಸ್ಥಳ ವಿರುದ್ಧ ಅಪಪ್ರಚಾರ ಮಾಡುತ್ತಾ ಬಂದವರ ಬುಂಡೆಗೆ ಬಿಸಿ ನೀರು ಸುರಿದಂತಾಗಿದೆ.

ಹಾಗೆ ನೋಡಿದರೆ, ಭೀಕರವಾಗಿ ಕೊಲೆಯಾಗಿ ಹೋದ ಸೌಜನ್ಯಳಿಗೆ ನ್ಯಾಯ ಕೊಡಿಸುವ ನಿಟ್ಟಿನಲ್ಲಿ ನಡೆದ ಹೋರಾಟಗಳು ಕಳೆದ ಹದಿಮೂರು ವರ್ಷಗಳಲ್ಲಿ ಹಲವು ತಿರುವುಗಳನ್ನು ಪಡೆದುಕೊಳ್ಳುತ್ತಾ ಇವತ್ತು ಅಂತಿಮ ಹಂತಕ್ಕೆ ಬಂದು ನಿಂತಿದೆ. ಸೌಜನ್ಯಳಿಗೆ ಯಾರಿಂದಲೂ ನ್ಯಾಯಕೊಡಿಸಲು ಸಾಧ್ಯವಾಗಿಲ್ಲ ಎನ್ನುವುದು ಎಷ್ಟು ಸತ್ಯವೋ ಅದಕ್ಕಿಂತ ಹೆಚ್ಚಾಗಿ ಆಕೆಯ ಸಾವಿಗೆ ನ್ಯಾಯ ಕೊಡಿಸುವುದಕ್ಕಿಂತ ಹೆಚ್ಚಾಗಿ ಆಕೆಯ ಹೆಸರಿನಲ್ಲಿ ಬಹುತೇಕ ಜನರು ಬೇಳೆ ಬೇಯಿಸಿಕೊಂಡಿದ್ದಾರೆ ಎನ್ನುವುದು ಅಷ್ಟೇ ಸತ್ಯ..

ಸದ್ಯ ಎಲ್ಲದಕ್ಕೂ ಅಂತ್ಯ ಹಾಡುವ ಸಮಯ ಇದೀಗ ಬಂದಿದೆ. ಅದಕ್ಕಾಗಿ ನಾಡಿನ ಜನ ಕಾಯುತ್ತಿದ್ದಾರೆ. ಸೌಜನ್ಯ ಸಾವು ಮತ್ತು ಆ ನಂತರದ ಬೆಳವಣಿಗೆಗಳು ಏನಾಗಿದೆ ಎಂಬುದು ಧರ್ಮಸ್ಥಳದ ಸುತ್ತಮುತ್ತಲಿನ ಜನಕ್ಕೆ ಮತ್ತು ಕರಾವಳಿಗರಿಗೆ ಗೊತ್ತಿದೆ. ಆದರೆ ಎಲ್ಲೋ ಕುಳಿತವರಿಗೆ ಅಲ್ಲಿನ ವಿಚಾರಗಳು ಗೊತ್ತಿಲ್ಲ. ಹೀಗಾಗಿ ಊಹಾಪೋಹಗಳನ್ನು ಅವರು ನಂಬಿದ್ದಾರೆ. ಜತೆಗೆ ಅದನ್ನು ತಮಗೆ ತೋಚಿದಂತೆ ಮಾತನಾಡಲು, ಧರ್ಮಸ್ಥಳದ ಬಗ್ಗೆ ಅವಹೇಳನಕಾರಿಯಾಗಿ ಹೇಳಿಕೆ ನೀಡಲು ಅವರಿಗೆ ಕಷ್ಟವಾಗಿಲ್ಲ, ಹೀಗಾಗಿಯೇ ಊಹಾಪೋಹದ ಮಾತುಗಳೇ ಇವತ್ತು ಧರ್ಮಸ್ಥಳದ ಸುತ್ತ ಗಿರಕಿ ಹೊಡೆಯುವಂತಾಗಿದೆ.

ಮಾರುದ್ದ ಮಾತನಾಡುವವರು ದಾಖಲೆಗಳನ್ನಿಟ್ಟುಕೊಂಡು ಮಾತನಾಡುತ್ತಿಲ್ಲ. ಸೋಷಿಯಲ್ ಮೀಡಿಯಾಗಳಲ್ಲಿ ಏನೇನು ಬರುತ್ತಿದೆಯೋ ಅದೇ ಸತ್ಯ ಎಂದು ಜನ ನಂಬಿದ್ದಾರೆ. ಅದನ್ನು ಪ್ರಶ್ನಿಸುವ ಕೆಲಸಕ್ಕೆ, ವಿಮರ್ಶಿಸುವ ಪ್ರಯತ್ನಕ್ಕೂ ಕೈಹಾಕುತ್ತಿಲ್ಲ. ಹೀಗಾಗಿ ಎಲ್ಲೋ ಒಂದು ಕಡೆ ಧರ್ಮಸ್ಥಳದಲ್ಲಿ ಆಗಿರೋದೆಲ್ಲವೂ ಅಧರ್ಮವೇ ಎಂಬುದಾಗಿ ಬಿಂಬಿಸುವುದು ಕಷ್ಟವಾಗಲಿಲ್ಲ. ಕಳೆದ ಕೆಲವು ವರ್ಷಗಳಿಂದ ಸೌಜನ್ಯಳಿಗೆ ನ್ಯಾಯಕೊಡಿಸುವ ಸಂಬಂಧದ ಹೋರಾಟಗಳು ಧರ್ಮಸ್ಥಳವನ್ನು ಟಾರ್ಗೆಟ್ ಮಾಡಿ ನಡೆದಿದೆ ಎನ್ನುವುದು ನಮ್ಮೆಲ್ಲರ ಮುಂದಿರುವ ಸತ್ಯ.







ಇವತ್ತು ಸೌಜನ್ಯನ ಸಾವಿಗೆ ಸಂಬಂಧಿಸಿದಂತೆ ನಮ್ಮ ಬಳಿ ದಾಖಲೆಗಳಿವೆ ಎಂದು ಹೇಳುತ್ತಾ ಬಂದವರು ಅದನ್ನು ಕೋರ್ಟ್‌ಗೆ ನೀಡಿ ನ್ಯಾಯಯುತವಾಗಿ ಕಾನೂನಿನಡಿಯಲ್ಲಿ ಹೋರಾಟ ಮಾಡಿದ್ದರೆ ಬಹುಶಃ ಸೌಜನ್ಯಳ ಸಾವಿಗೆ ನ್ಯಾಯ ಸಿಗುತ್ತಿತ್ತೇನೋ ಆದರೆ ಅದ್ಯಾವುದೂ ಆಗದಿರುವುದು ಇವತ್ತು ಜನ ಸಂಶಯದಿಂದ ನೋಡುವಂತಾಗಿದೆ. ಇದಿಷ್ಟೇ ಅಲ್ಲದೆ ಧರ್ಮಸ್ಥಳ ಮತ್ತು ವೀರೇಂದ್ರ ಹೆಗಡೆ ಅವರ ಕುರಿತಂತೆ ಸಾಮಾಜಿಕ ಜಾಲತಾಣಗಳಲ್ಲಿ ಮಾಡಲಾಗಿರುವ ಆರೋಪಗಳಿಗೆ ಯಾವುದೇ ದಾಖಲೆಯನ್ನು ಒದಗಿಸದೆ ಇರುವುದು ಕಾನೂನಿಗೆ ಮಾಡಿದ ವಂಚನೆಯಾಗಿದೆ.

ಧರ್ಮಸ್ಥಳದ ಬಗ್ಗೆ ಸಮೀರ್ ಎಂಬಾತ ಯೂಟ್ಯೂಬ್‌ನಲ್ಲಿ ಹರಿಬಿಟ್ಟ ವೀಡಿಯೋಗಳು, ಅದಾದ ನಂತರ ಧರ್ಮಸ್ಥಳದಲ್ಲಿ ನಾಪತ್ತೆಯಾದ ಅನನ್ಯ ಭಟ್ ಪ್ರಕರಣ, ನಾನೇ ಸಾವಿರಾರು ಹೆಣಗಳನ್ನು ಹೂತಿದ್ದೇನೆ ಅದನ್ನು ತೋರಿಸುವುದಾಗಿ ಮುಂದೆ ಬಂದ ಮುಸುಕುಧಾರಿ ತನಕ ಎಲ್ಲವನ್ನೂ ಜನ ನೋಡುತ್ತಲೇ ಬರುತ್ತಿದ್ದರು. ಆದರೆ ಎಸ್‌ಐಟಿ ತನಿಖೆ ಆರಂಭವಾಗಿ ಮುಸುಕುಧಾರಿ ಆರೋಪ ಮಾಡಿರುವಂತೆ ಯಾವುದೇ ಕಳೆಬರಹಗಳ ಕುರುಹುಗಳು ಪತ್ತೆಯಾಗದೆ ಹೋದಾಗ ಜನರ ತಾಳ್ಮೆಯ ಕಟ್ಟೆ ಒಡೆಯಲಾರಂಭಿಸಿತ್ತು. ಅದೇ ವೇಳೆ ಧರ್ಮಸ್ಥಳ ಪರ ಹೋರಾಟಗಾರರು ಒಂದಷ್ಟು ವಿಚಾರಗಳನ್ನು ಹೊರ ಹಾಕಲು ಶುರು ಮಾಡಿದರು.



ಇದೇ ಸಂದರ್ಭದಲ್ಲಿ ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಜನ ಧರ್ಮಸ್ಥಳದ ವಿರುದ್ಧ ಷಡ್ಯಂತ್ರ ನಡೆಯುತ್ತಿದೆ ಎಂದು ಆರೋಪಿಸಿ ಅಲ್ಲಲ್ಲಿ ಹೋರಾಟಗಳು ಆರಂಭವಾದವು. ಇದಕ್ಕೆ ಬಿಜೆಪಿ ಸಾಥ್ ನೀಡಲು ಆರಂಭಿಸಿದರಲ್ಲದೆ, ಧರ್ಮಸ್ಥಳದ ಪರವಾಗಿ ಧ್ವನಿ ಎತ್ತ ತೊಡಗಿದರು. ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಲಾರಂಭಿಸಿದರು. ಯಾವಾಗ ಧರ್ಮಸ್ಥಳದಲ್ಲಿ ಶವಹೂತಿಟ್ಟ ಪ್ರಕರಣ ಬುರುಡೆ ಎನ್ನುವುದು ಗೊತ್ತಾಗುತ್ತಾ ಬಂತೋ? ಜನ ಸರ್ಕಾರವನ್ನು ಸಂಶಯದಿಂದ ನೋಡಲಾರಂಭಿಸಿದರು. ಜತೆಗೆ ಇದೇ ಸಮಯದಲ್ಲಿ ಸದನವೂ ನಡೆಯುತ್ತಿರುವುದರಿಂದ ಬಿಜೆಪಿ ನಾಯಕರು ಅನಾಮಿಕ ಮುಸುಕುಧಾರಿ ಹೇಳಿದಂತೆ ಸಮಾಧಿ ಉತ್ಖನನ ಮಾಡಿದರೂ ಅಸ್ಥಿಗಳು ಸಿಗದೆ ಇರುವುದರ ಬಗ್ಗೆ ಆಕ್ರೋಶ ವ್ಯಕ್ತಪಡಿಸಿದರಲ್ಲದೆ, ಇದಕ್ಕೆ ಉತ್ತರ ನೀಡುವಂತೆ ಆಗ್ರಹಿಸಲಾರಂಭಿಸಿದರು. ಇದು ಭಾರೀ ಸದ್ದು ಮಾಡಿತು.

ಇದೀಗ ಪ್ರಕರಣವನ್ನು ಜನ ವಿಶ್ಲೇಷಣೆಗೆ ಒಳಪಡಿಸುತ್ತಿದ್ದಾರೆ. ಅದಕ್ಕಿಂತ ಹೆಚ್ಚಾಗಿ ಸುಜಾತಭಟ್ ಎಂಬ ವೃದ್ಧೆ ತನ್ನ ಮಗಳು 2003ರಲ್ಲಿ ಧರ್ಮಸ್ಥಳಕ್ಕೆ ಹೋದವಳು ನಾಪತ್ತೆಯಾಗಿದ್ದು ಆಕೆ ಕೊಲೆಯಾಗಿದ್ದಾಳೆ. ಹೀಗಾಗಿ ಆಕೆಯ ಅಸ್ಥಿ ಸಿಕ್ಕರೆ ಅದನ್ನು ನನಗೆ ಕೊಡಿಸಿ ನಾನು ಸನಾತನ ಬ್ರಾಹ್ಮಣ ಸಂಪ್ರದಾಯದಂತೆ ವಿಧಿವಿಧಾನವನ್ನು ನೆರವೇರಿಸಿ ಅವಳ ಆತ್ಮಕ್ಕೆ ಶಾಂತಿ ಮಾಡುತ್ತೇನೆ ಎಂದು ಕಣ್ಣೀರಿಟ್ಟಿದ್ದಳು. ಆದರೆ ಸುಜಾತ ಭಟ್ ಮಗಳು ಅನನ್ಯ ಭಟ್ ನಾಪತ್ತೆ ಪ್ರಕರಣದ ಹಿಂದೆ ಬಿದ್ದ ಮಾಧ್ಯಮಗಳು ಸುಜಾತ ಭಟ್ ಬುರುಡೆ ಬಿಟ್ಟಿದ್ದಾಳೆ. ಅನನ್ಯ ಭಟ್ ಅವರ ಕಾಲ್ಪನಿಕ ಮಗಳು ಎಂಬುದನ್ನು ಸಮಾಜದ ಮುಂದೆ ತೆರೆದಿಟ್ಟಿದ್ದಾರೆ.

ಮಾಧ್ಯಮಗಳು ಮಾಡಿದ ವರದಿಗಳು ಸುಳ್ಳು ನನ್ನ ಮಗಳು ನಾಪತ್ತೆಯಾಗಿದ್ದು ನಿಜ ಎಂಬುದಕ್ಕೆ ಯಾವುದೇ ದಾಖಲೆಗಳನ್ನು ಒದಗಿಸದಿರುವುದು ಸುಜಾತ ಭಟ್ ಮೇಲೆ ಅನುಮಾನ ಸುಳಿಯುವಂತೆ ಮಾಡಿದೆ. ಆಕೆಯ ಹೇಳಿಕೆಯನ್ನು ನಂಬಿ ಆಕೆಯ ಪರವಾಗಿ ಧರ್ಮಸ್ಥಳಕ್ಕೆ ಹಿಡಿಶಾಪ ಹಾಕಿದವರು ಇದೀಗ ತಲೆಮೇಲೆ ಕೈಹೊತ್ತು ಕುಳಿತುಕೊಳ್ಳುವಂತಾಗಿದೆ. ಸದ್ಯಕ್ಕೀಗ ಸುಜಾತ ಭಟ್ ಎಲ್ಲಿದ್ದಾರೆ ಎನ್ನುವುದು ನಿಗೂಢವಾಗಿದೆ. ರಾಜ್ಯದ ಜನ, ಸಂಘಟನೆಗಳು, ವಿರೋಧ ಪಕ್ಷಗಳು ಅಷ್ಟೇ ಅಲ್ಲದೆ ಸರ್ಕಾರದ ಕೆಲವು ಸಚಿವರು ಈ ವಿಚಾರದಲ್ಲಿ ಆಕ್ರೋಶಗೊಂಡಿದ್ದು, ಮುಸುಕುಧಾರಿ ಅನಾಮಿಕ ಮತ್ತು ಆತನ ಹಿಂದಿರುವ ದುಷ್ಟ ಶಕ್ತಿಗಳ ವಿರುದ್ಧ ತನಿಖೆ ನಡೆಸುವಂತೆ ಆಗ್ರಹಿಸುತ್ತಿರುವುದರಿಂದ ಈ ಪ್ರಕರಣದಲ್ಲಿ ಕೈಯಾಡಿಸುತ್ತಿರುವವರು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲದಾಗಿದೆ.

ಇನ್ನು ಸೌಜನ್ಯ ಸಾವಿಗೆ ನ್ಯಾಯ ಬೇಕೆಂದು ಹೋರಾಟವನ್ನು ಮಾಡುತ್ತಿರುವ ಮಹೇಶ್ ತಿಮ್ಮರೋಡಿ, ಗಿರೀಶ್ ಮಟ್ಟಣ್ಣನವರ್, ಹಾಗೆಯೇ ಯೂಟ್ಯೂಬ್ ನಲ್ಲಿ ಧರ್ಮಸ್ಥಳದ ಬಗ್ಗೆ ಹರಿಯ ಬಿಟ್ಟಿರುವ ವಿಡಿಯೋಗಳಿಗೆ ಸಮೀರ್ ಎಂಬಾತ ದಾಖಲೆಗಳನ್ನು ನೀಡಬೇಕಾಗುತ್ತದೆ. ಮತ್ತು ಈ ಪ್ರಕರಣದಲ್ಲಿ ಎನ್‌ಐಎ, ಇಡಿ ಎಂಟ್ರಿಯಾಗಬೇಕಾಗುತ್ತದೆ. ಎಲ್ಲವೂ ಸಮಗ್ರ ತನಿಖೆಯಾಗಬೇಕಾಗುತ್ತದೆ. ಜತೆಗೆ ಯಾವುದೇ ಶ್ರದ್ಧಾ ಕೇಂದ್ರವಾಗಿರಲಿ ಅದರ ಬಗ್ಗೆ ಅವಹೇಳನ, ಆರೋಪ ಮಾಡಬೇಕಾದರೆ ದಾಖಲೆ ಬೇಕಾಗುತ್ತದೆ. ಅದಿಲ್ಲದೆ ಮಾಡುವುದು ಅಪರಾಧ.. ಇಲ್ಲಿ ಯಾರೆಲ್ಲ ಯಾವುದೇ ದಾಖಲೆಗಳಿಲ್ಲದೆ ಆರೋಪ ಮಾಡಿದ್ದಾರೋ ಅವರು ದಾಖಲೆಗಳನ್ನು ನೀಡಬೇಕಾಗುತ್ತದೆ. ಇಲ್ಲದೆ ಹೋದರೆ ಅವರ ವಿರುದ್ಧವೂ ಕಾನೂನು ಕ್ರಮ ಕೈಗೊಳ್ಳುವುದು ಅಗತ್ಯವಿದೆ.

ಸೌಜನ್ಯಳಿಗೆ ನ್ಯಾಯಕೊಡಿಸುವ ಕೆಲಸವನ್ನು ಸರ್ಕಾರ ಮಾಡಬೇಕಿದೆ. ಅದರ ಜತೆಗೆ ಈ ಪ್ರಕರಣದ ಹಿಂದಿನ ಷಡ್ಯಂತ್ರವನ್ನು ಬಯಲು ಮಾಡಬೇಕಿದೆ. ಅದು ಆಗದೆ ಹೋದರೆ ಮುಂದಿನ ದಿನಗಳಲ್ಲಿ ಭಾರೀ ಬೆಲೆ ತೆರಬೇಕಾಗಿ ಬಂದರೂ ಬರಬಹುದು.

# 101 ಜನರೊಂದಿಗೆ ಜಿಮ್ ರವಿ ಕಾಶಿಯಾತ್ರೆ

ಕೋಲಾರ ಮೂಲದ ಎ.ವಿ.ರವಿ, ಜಿಮ್ ರವಿ ಎಂದೇ ಖ್ಯಾತಿ ಪಡೆದವರು. ಅಂತಾರಾಷ್ಟ್ರೀಯ ದೇಹದಾರ್ಢ್ಯ ಪಟುವಾಗಿ ದೇಶ ಹಾಗೂ ವಿದೇಶಗಳಲ್ಲೂ ಪ್ರಸಿದ್ಧರಾಗಿರುವ ಜಿಮ್ ರವಿ, ಮಿಸ್ಟರ್ ಇಂಡಿಯಾ ಹಾಗೂ ಕರ್ನಾಟಕದ ಏಕಲವ್ಯ ಪ್ರಶಸ್ತಿ ವಿಜೇತರು ಕೂಡ. ಇತ್ತೀಚೆಗೆ ಪುರುಷೋತ್ತಮ ಎಂಬ ಚಿತ್ರದಲ್ಲಿ ನಾಯಕ ನಾಗೂ ರವಿ ನಟಿಸಿದ್ದರು. ಇದೆಲ್ಲಾ ಒಂದು ಕಡೆಯಾದರೆ, ರವಿ ಅವರು ಸಾಮಾಜಿಕ ಕಾರ್ಯಗಳ ಮೂಲಕವೂ ಹೆಸರುವಾಸಿ. ಆದರೆ ಒಂದು ದಿನ ಆದರೆ ತಾವು ಮಾಡುವ ಸಾಮಾಜಿಕ ಕೆಲಸದ ಬಗ್ಗೆ ಒಂದು ದಿನವೂ ಪ್ರಚಾರ ಬಯಸಿದವರಲ್ಲ. ಸ್ಪೋರ್ಟ್ಸ್ ಕೋಟಾದಡಿ ಪೊಲೀಸ್ ಇಲಾಖೆಯಲ್ಲಿ ನೌಕರಿ ಗಿಟ್ಟಿಸಿ ಆದಾಯ ತೆರಿಗೆ ಇಲಾಖೆಯಲ್ಲಿ ಆಫೀಸರ್ ಆಗಿ ದುಡಿದ ಹಿನ್ನೆಲೆಯೂ ರವಿ ಅವರಿಗಿದೆ.





ಎ.ವಿ. ರವಿ ಅವರು ಈಗ ಅನೇಕ ಜನರಿಗೆ ಆದರ್ಶವಾಗುವಂತಹ ಮಹತ್ತರ ಕಾರ್ಯ ಮಾಡಿದ್ದಾರೆ. ರವಿ ಅವರ ತಂದೆಗೆ ಕಾಶಿಯಾತ್ರೆ ಮಾಡುವ ಆಸೆ ಇತ್ತಂತೆ. ಆದರೆ ಕಾರಾಣಾಂತರದಿಂದ ಅದು ಸಾಧ್ಯವಾಗಿರಲಿಲ್ಲ, ತಂದೆಗೆ ಕಾಶಿಯಾತ್ರೆ ಮಾಡಿಸಲಿಲ್ಲ, ಎಂಬ ಕೊರಗು ರವಿ ಅವರನ್ನು ಸದಾ ಕಾಡುತ್ತಿತ್ತಂತೆ. ಹಾಗಾಗಿ ರವಿ ಅವರು ಹದಿನಾಲ್ಕು ವರ್ಷಗಳ ಹಿಂದೆಯೇ ಒಂದು ಸಂಕಲ್ಪ ಮಾಡಿದರಂತೆ. ನಮ್ಮ ಅಪ್ಪನ ಹೆಸರಿನಲ್ಲಿ ಕೈಲಾದಷ್ಟು ಜನ ಅಶಕ್ತರಿಗೆ ಕಾಶಿಯಾತ್ರೆ ಮಾಡಿಸುತ್ತೇನೆ ಅಂತ. ಅಂದುಕೊಂಡ ಹಾಗೆ ಎ.ವಿ. ರವಿ ಮಾಡಿದ್ದಾರೆ. ಐದಲ್ಲ, ಹತ್ತಲ್ಲ.. ಬರೋಬರಿ 101 ಜನರಿಗೆ ವಿಮಾನದ ಮೂಲಕ ಕಾಶಿಯಾತ್ರೆ ಮಾಡಿಸಿಕೊಂಡು ಬಂದಿದ್ದಾರೆ.

ಕರ್ನಾಟಕ ಸೇರಿದಂತೆ ಆಂದ್ರ ಹಾಗೂ ತಮಿಳುನಾಡಿನಿಂದ ಸುಮಾರು



ತಂದೆಯವರ ನೆನೆದು ಕಣ್ಣೀರಿಟ್ಟ ರವಿ






101 ಜನ ಈವರೆಗೂ ಕಾಶಿಯಾತ್ರೆ ಮಾಡದ ಅಶಕ್ತರನ್ನು ಆಯ್ಕೆ ಮಾಡಿ ಯಾವುದೇ ತೊಂದರೆ ಬಾರದ ಹಾಗೆ ಕಾಶಿಯಾತ್ರೆಯನ್ನು ಅದ್ದೂರಿಯಾಗಿ ಮಾಡಿಸಿದ್ದಾರೆ. ಅವರವರ ಊರುಗಳಿಂದ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬರಲು ವಾಹನದ ವ್ಯವಸ್ಥೆ ಮಾಡಿ, ವಿಮಾನ ನಿಲ್ದಾಣದಲ್ಲಿ ಉಪಹಾರ ಮುಗಿಸಿ ನೇರವಾಗಿ ಅಯೋಧ್ಯೆಗೆ ತೆರಳಿದ್ದಾರೆ. ವಿಮಾನ ನಿಲ್ದಾಣಕ್ಕೆ ಆಗಮಿಸಿದ ತಕ್ಷಣ ಎಲ್ಲರಿಗೂ ಲಘು ಉಪಾಹಾರ ಹಾಗೂ ನೀರಿನ ಬಾಟಲ್ ನೀಡಲಾಯಿತು ಹಾಗೂ ದೇವರ ದರ್ಶನಕ್ಕಾಗಿ ಮಹಿಳೆಯರಿಗೆ ಎರಡು ಹೊಸ ಸೀರೆ, ಪುರುಷರಿಗೆ ಎರಡು ಹೊಸ ಪಂಚೆ ಉಡುಗೊರೆಯಾಗಿ ಕೊಡಲಾಯಿತು. ಅಯೋಧ್ಯೆಯಲ್ಲಿ ಪೊಲೀಸ್ ಅಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕನ್ನಡದವರಾದ ಚೆನ್ನಪ್ಪ ಅವರು ಇಷ್ಟು ಜನರಿಗೆ ವಿಶೇಷ ದರ್ಶನದ ವ್ಯವಸ್ಥೆ ಮಾಡಿಸಿದ್ದರು. ಪೊಲೀಸ್ ಸಿಬ್ಬಂದಿಗಳು ಸಹ ಇವರೆಲ್ಲರು ಸುಲಭವಾಗಿ ದೇವರ ದರ್ಶನ ಮಾಡಲು ಸಹಕಾರ ನೀಡಿದ್ದಾರೆ. ಅಲ್ಲಿಂದ ವಿಶೇಷ ಬಸ್ ಮೂಲಕ ಕಾಶಿಗೆ ಬಂದ 101 ಜನರ ತಂಡಕ್ಕೆ ಪ್ರಸಿದ್ಧ ಜಂಗಮವಾಡಿ ಮಠದಲ್ಲಿ 45 ಅಇ ಟ್ಟಟಇ ಗಳನ್ನು ವಾಸ್ತವ್ಯಕ್ಕಾಗಿ ವ್ಯವಸ್ಥೆ ಮಾಡಲಾಗಿತ್ತು. ಅಲ್ಲೇ ಉಪಹಾರ ಹಾಗೂ ಭೋಜನದ ವ್ಯವಸ್ಥೆ ಕೂಡ ಆಯೋಜಿಸಲಾಗಿತ್ತು. ಕಾಶಿ ವಿಶ್ವನಾಥನ ಮಂದಿರದ ಹತ್ತಿರವಿರುವ ಕರ್ನಾಟಕದ ಈ ಮಠ, ಶಿಸ್ತು, ಸಂಯಮಕ್ಕೆ ಹೆಸರುವಾಸಿ. ಅಲ್ಲಿನ ಆತಿಥ್ಯ ಬಹು ಚೆಂದ. ಮಠದಲ್ಲಿ ಉಳಿದುಕೊಂಡ ಯಾತ್ರಾರ್ಥಿಗಳ ತಂಡವನ್ನು ಕಾಶಿಯಲ್ಲೂ ಸಹ ಚೆನ್ನಪ್ಪ ಅವರ ಸಹಕಾರದಿಂದ ವಿಶೇಷ ದರ್ಶನ ಮಾಡಿಸಲಾಯಿತು. ಸಂಜೆ ನಡೆಯುವ ಗಂಗಾರತಿಯಲ್ಲೂ ಭಾಗವಹಿಸಲಾಯಿತು. ಕಾಶಿಯಲ್ಲಿರುವ ಅನ್ನಪೂರ್ಣ ಮಂದಿರ ಸೇರಿದಂತೆ ವಿವಿಧ ಮಂದಿಗಳಿಗೆ ಭೇಟಿ ನೀಡಲಾಯಿತು. ಗಂಗೆಯ ತಟದಲ್ಲೇ ಯಾತ್ರಾರ್ಥಿಗಳಿಂದ ತೀರ್ಥವಿಧಿ(ಪಿಂಡಪ್ರದಾನ) ಸಹ ಮಾಡಿಸಲಾಯಿತು. ಮಾರನೇ ದಿವಸ ವಿಶ್ರಾಂತಿಯ ದಿವಸವಾಗಿದ್ದು, ಅಂದು ರವಿ ಮತ್ತು ತಂಡದವರು ಯಾತ್ರಾರ್ಥಿಗಳನ್ನು ಶುಶ್ರೂಷೆ ಮಾಡಿದರು. ಆನಂತರ ಶಾಪಿಂಗ್‌ಗೆ ಕರೆದುಕೊಂಡು ಹೋಗಲಾಯಿತು. ಶಾಪಿಂಗ್ ಖರ್ಚಿಗೂ ಸ್ವಲ್ಪ ಹಣವನ್ನು ರವಿ ಅವರೆ ನೀಡಿದ್ದರು. ಈ ಸುಸ್ಸಜಿತ ವ್ಯವಸ್ಥೆಯನ್ನು ಕಂಡು ಭಾವುಕರಾದ ಯಾತ್ರಾರ್ಥಿಗಳು ಆನಂದಭಾಷ್ಪ ಸುರಿಸಿದರು. ರವಿ ಹಾಗೂ ಕಟುಂಬದವರಿಗೆ ತುಂಬು ಹೃದಯದಿಂದ ಆಶೀರ್ವಾದ ಮಾಡಿದರು. ರವಿ ಅವರ ತಂದೆಯ ಆತ್ಮಕ್ಕೆ ಶಾಂತಿ ಸಿಗಲೆಂದು ಪ್ರಾರ್ಥನೆ ಮಾಡಿದರು. ಯಾತ್ರಾರ್ಥಿಗಳು ಎಲ್ಲಾ ಕಡೆ ಓಡಾಡಲು ಎಸಿ ವಾಹನದ ವ್ಯವಸ್ಥೆಯನ್ನೇ ಮಾಡಲಾಗಿತ್ತು. ಪುನಃ ಬೆಂಗಳೂರು ವಿಮಾನ ನಿಲ್ದಾಣಕ್ಕೆ ಬಂದ ಮೇಲೂ ಅವರವರ ಊರುಗಳಿಗೆ ತೆರಳಲು ಅನುಕೂಲವಿರುವ ವಾಹನ ವ್ಯವಸ್ಥೆ ಮಾಡಲಾಗಿತ್ತು. ದೇವರ ದಯೆಯಿಂದ ಇಷ್ಟು ದೊಡ್ಡ ತಂಡದ ಪ್ರಯಾಣದಲ್ಲಿ ಯಾರೊಬ್ಬರಿಗೂ ಆರೋಗ್ಯ ಸೇರಿದಂತೆ ಯಾವುದೇ ತೊಂದರೆ ಆಗಿಲ್ಲ.

ತಂದೆಯ ಆಸೆಯನ್ನು ಈಡೇರಿಸಿ, ಎಲ್ಲರ ಆಶೀರ್ವಾದದಿಂದ ಬಹಳ ಭಾವುಕರಾದ ಎ.ವಿ.ರವಿ ಅವರು ಯಾತ್ರೆ ಸುಸಜ್ಜಿತವಾಗಿ ಮುಗಿಯಲು ಸಹಕಾರ ನೀಡಿದ income tax ಕಮೀಷನರ್ ಜನಾರ್ದನ್, ಅಯೋಧ್ಯೆಯಲ್ಲಿ ಸಹಕಾರ ಸುಲಲಿತವಾಗಿ ದರ್ಶನದ ವ್ಯವಸ್ಥೆ ಮಾಡಿದ ಸೋಮಣ್ಣ ಅವರಿಗೆ, ಶ್ರೀ ರಾಘವೇಂದ್ರ ಚಿತ್ರವಾಣಿ ಸಂಸ್ಥೆಗೆ, ತುರುವೇಕೆರೆ ಕ್ಷೇತ್ರದ ಮಾಜಿ ಶಾಸಕರಾದ ಮಸಾಲೆ ಜಯರಾಮ್ ಅವರಿಗೆ, ನವರತನ್ ಪ್ಯಾಲೆಸ್ ಮದನ್ ಅವರಿಗೆ, ಚಸ್ಕಾಂ ಎಂ.ಡಿ. ಶಿಲಾ ಅವರಿಗೆ ಹಾಗೂ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕಾರ ನೀಡಿದ ಪ್ರತಿಯೊಬ್ಬರಿಗೂ ಧನ್ಯವಾದ ತಿಳಿಸಿದ್ದಾರೆ.


101 ಜನರ ಅತೀ ದೊಡ್ಡ ತಂಡವನ್ನು ಕಾಶಿಯಾತ್ರೆ ಮಾಡಿಸಿರುವುದು ಶ್ಲಾಘನೀಯ. ಈವರೆಗೂ ಕರ್ನಾಟಕದಲ್ಲಾಗಲಿ ಅಥವಾ ಭಾರತದಲ್ಲಾಗಲಿ ಈ ರೀತಿ ಯಾರು ಈ ಪ್ರಯತ್ನ ಮಾಡಿಲ್ಲ ಎನ್ನಬಹುದು. ಜಿಮ್ ರವಿ ಅವರ ಈ ಕಾರ್ಯ ಎಲ್ಲರಿಗೂ ಆದರ್ಶ... ನಿಮಗೆ ಒಳ್ಳೆಯದಾಗಲಿ ಸಾರ್. ☯

## ದೊಡ್ಡ ಚಿತ್ರಗಳ ನಡುವೆಯೂ 100 ಕೋಟಿ ಕ್ಲಬ್ ಸೇರಿತು ಸು ಫ್ರಮ್ ಸೋ




ಆಗಸ್ಟ್ 14 ರಂದು ರಿಲೀಸ್ ಆಗಿರುವ ಸೂಪರ್ ಸ್ಟಾರ್ ರಜನಿ ಅಭಿನಯದಕೂಲಿ ಮತ್ತು ಹೃತಿಕ್ ರೋಷನ್, ಎನ್‌ಟಿಆರ್ ಜುಗಲ್‌ಬಂದಿಯ ವಾರ್ 2 ಚಿತ್ರಗಳು ಅಷ್ಟೇನೂ ಜನ ಪ್ರಿಯತೆ ಹೊಂದಿಲ್ಲ! ಪಬ್ಲಿಕ್‌ನಿಂದ ಹಾಗೂ ಮಾಧ್ಯಮಗಳಿಂದ ಎರಡಕ್ಕೂ ಮಿಶ್ರ ಪ್ರತಿಕ್ರಿಯೆ ದೊರಕಿದೆ. ಆದರೂ, ಬಾಕ್ಸ್ ಆಫೀಸ್‌ನಲ್ಲಿ ದಾಖಲೆಯ ಕಲೆಕ್ಷನ್ ಆಗುತ್ತಿದೆ!!

ಇನ್ನೊಂದು ವಿಶೇಷ ವಾರ್ತೆ ಏನೆಂದರೆ, ಕೂಲಿ ಹಾಗೂ ವಾರ್-2 ಚಿತ್ರಗಳು ತೆರೆಗೆ ಅಪ್ಪಳಿಸಿದಾಗ, ಕನ್ನಡದ ಸು ಫ್ರಮ್ ಸೋ ಕಲೆಕ್ಷನ್ ಬಿದ್ದುಹೋಗುತ್ತೆ... ಅಂದುಕೊಂಡಿದ್ದವರಿಗೆ ಮಹದಚ್ಚರಿ ಎಂಬಂತೆ, ಕಲೆಕ್ಷನ್ ಮತ್ತಷ್ಟು ಜಾಸ್ತಿಯಾಗಿದೆ! ಒಳ್ಳೆಯ ಚಿತ್ರವನ್ನ ಜನ ಕೈಬಿಡಲ್ಲ ಎಂಬುದಕ್ಕೆ ನಿದರ್ಶನವಾಗಿದೆ, ‘ಸು ಫ್ರಮ್ ಸೋ’. ರಾಜ್ ಬಿ. ಶೆಟ್ಟಿ ನಿರ್ಮಾಣದ ಈ ಸಿನಿಮಾ ಬಿಡುಗಡೆಯಾಗಿ 25 ದಿನಗಳು ಕಳೆದಿವೆ. 24 ನೇ ದಿನಕ್ಕೆ 100 ಕೋಟಿ ಕ್ಲಬ್ ಸೇರಿಕೊಂಡಿದೆಯಂತೆ!! ಮಲ್ಟಿಪ್ಲೆಕ್ಸ್ ಸೇರಿದಂತೆ ಸುಮಾರು 150 ಚಿತ್ರಮಂದಿರಗಳಲ್ಲಿ ಹೌಸ್‌ಫುಲ್ ಪ್ರದರ್ಶನ ಕಾಣುತ್ತಿರುವ ಸು ಫ್ರಮ್ ಸೋ ಶತದಿನ ಓದುವುದರಲ್ಲಿ ಯಾವುದೇ ಅನುಮಾನವಿಲ್ಲ. 50 ದಿನಗಳ ಕಾಲ ಹೌಸ್‌ಫುಲ್ ಪ್ರದರ್ಶನ ಕಂಡರೂ 200 ಕೋಟಿ ಜಾಕ್‌ಪಾಟ್ ಗ್ಯಾರೆಂಟಿ!!! ☯





2 ☞

ಬೆದರಿಸುವ ಅತಿರೇಕದ ವರ್ತನೆಯನ್ನು ರಾಹುಲ್ ಗಾಂಧಿ ತೋರಿ ತಮ್ಮ ಹತಾಶೆನ್ನು ಬಯಲು ಮಾಡಿಕೊಂಡಿದ್ದಾರೆ!

### ಲಿಂಬಾವಳಿ ತಿರುಗೇಟು!

ಮಹದೇವಪುರದಲ್ಲಿ ಒಂದು ಲಕ್ಷಕ್ಕೂ ಅಧಿಕ ಮತಗಳ ಕಳ್ಳತನದ ರಾಹುಲ್ ಗಾಂಧಿ ಆರೋಪವನ್ನು ಬಿಜೆಪಿ ನಾಯಕ ಅರವಿಂದ್ ಲಿಂಬಾವಳಿ ತಳ್ಳಿಹಾಕಿದ್ದಾರೆ. ಕಳೆದ ಆಗಸ್ಟ್ 8ರಂದು ಮಹದೇವಪುರ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ದಾಖಲೆಗಳ ಸಮೇತ ರಾಹುಲ್ ಗಾಂಧಿಯವರ ಆರೋಪಗಳಿಗೆ ತಿರುಗೇಟು ನೀಡಿದ್ದು, ಅವರ ಆರೋಪಗಳು ಆಧಾರ ರಹಿತವಾಗಿವೆ ಎಂದು ಹೇಳಿದ್ದಾರೆ. ಅಲ್ಲದೆ, ರಾಹುಲ್ ಗಾಂಧಿಯವರ ತಾವು ಮಾಡಿರುವ ಆರೋಪಗಳನ್ನು ವಾಸ್ತವವಾಗಿ ಪರಿಶೀಲಿಸಿಲ್ಲ ಎಂದು ಟೀಕಿಸಿದ್ದಾರೆ.

2008ರಲ್ಲಿ ಮಹದೇವಪುರ ವಿಧಾನಸಭಾ ಕ್ಷೇತ್ರ ಅವತ್ತಿನ ಡಿಲಿಮಿಟೇಷನ್ ನಿಯಮಗಳ ಅನ್ವಯ ರೂಪುಗೊಂಡಿತ್ತು. ಆಗಿನಿಂದ ಈಗಿನವರೆಗೆ ಅಲ್ಲಿ 4 ಲೋಕಸಭಾ ಚುನಾವಣೆಗಳು, 4 ವಿಧಾನಸಭಾ ಚುನಾವಣೆಗಳು ನಡೆದಿವೆ. ಆ ಎಲ್ಲಾ ಚುನಾವಣೆಗಳಲ್ಲಿ ಬಿಜೆಪಿಯವರೇ ಗೆದ್ದಿದ್ದಾರೆ ಎಂದು ಕ್ಷೇತ್ರದ ಪರಿಚಯ ಮಾಡಿದರು. ಲೋಕಸಭಾ ಚುನಾವಣೆಯಲ್ಲಿ 6.59 ಲಕ್ಷ 3.59 ಲಕ್ಷ ಜನ ಮತ ಚಲಾಯಿಸಿದ್ದಾರೆ ಎಂದು ಹೇಳಿದ ಅವರು, ಈಗ 6,80.514 ಜನ ಮತದಾರರಿದ್ದಾರೆ.



ರಾಹುಲ್ ಗಾಂಧಿಯವರು ತಮ್ಮ ಪವರ್ ಪಾಯಿಂಟ್ ಪ್ರೆಸೆಂಟೇಷನ್‌ನಲ್ಲಿ ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬೆಂಗಳೂರು ಸೆಂಟ್ರಲ್‌ನ ಒಂದು ಕ್ಷೇತ್ರದಲ್ಲಿ ಮಾತ್ರ ಬಿಜೆಪಿ ಗೆದ್ದಿತ್ತು ಎಂದು ಹೇಳಿದ್ದಾರೆ. ಅದು ಸುಳ್ಳು. ಈ ಲೋಕಸಭಾ ಕ್ಷೇತ್ರದಲ್ಲಿ ಏಳು ವಿಧಾನಸಭಾ ಕ್ಷೇತ್ರಗಳಿದ್ದು, ಅವುಗಳಲ್ಲಿ ನಾಲ್ಕು ಕ್ಷೇತ್ರಗಳಾದ ರಾಜಾಜಿನಗರ, ಸಿವಿ ರಾಮನ್ ನಗರ, ಮಹದೇವಪುರದಲ್ಲಿ ನಾವು (ಬಿಜೆಪಿ) ಗೆದ್ದಿದ್ದೇವೆ ಎಂದರು. ಇದೇ ವೇಳೆ ರಾಹುಲ್ ಗಾಂಧಿಯವರು ಮಹದೇವಪುರದಲ್ಲಿ ನಡೆದಿದೆ ಎಂದಿರುವ ನಾಲ್ಕು ಪ್ರಮುಖ ಆರೋಪಗಳಿಗೆ ಉತ್ತರ ನೀಡಿದರು.

ರಾಹುಲ್ ಗಾಂಧಿಯವರು ಒಂದೇ ಮತದಾರರ ಹೆಸರು ಎರಡಕ್ಕಿಂತ ಹೆಚ್ಚು ಬೂತ್‌ಗಳಲ್ಲಿನ ಮತದಾರರ ಪಟ್ಟಿಯಲ್ಲಿ ಕಾಣಿಸಿಕೊಂಡಿದೆ ಎಂದಿದ್ದರು. ಅದಕ್ಕೊಂದು ಉದಾಹರಣೆಯನ್ನೂ ಕೊಟ್ಟಿದ್ದರು. ಗುರು ಕೀರತ್ ಸಿಂಗ್ ಎಂಬುವರ ಹೆಸರು ನಾಲ್ಕು ಬೂತ್‌ಗಳಲ್ಲಿನ ಮತದಾರರ ಪಟ್ಟಿಯಲ್ಲಿದೆ ಎಂದು ಹೇಳಿದ್ದರು. ನಾವು ನೇರವಾಗಿ ಗುರುಕೀರತ್ ಸಿಂಗ್ ಅವರನ್ನೇ ಪತ್ತೆ ಮಾಡಿ ಅವರನ್ನೇ ಕೇಳಿದ್ದೆವು. ಅವರು ನೀಡಿದ ವಿವರಣೆಯೇನೆಂದರೆ, ಅವರು ಮೂಲತಃ ಉತ್ತರ ಭಾರತೀಯರು. ಅವರು ವರ್ಷಗಳ ಹಿಂದೆಯೇ ಬಂದು ಮಹದೇವಪುರದಲ್ಲಿ ನೆಲೆಸಿದ್ದವರು.



ಇಲ್ಲಿಗೆ ಬಂದ ಹೊಸತರಲ್ಲಿ ಅವರು ಮತದಾರರ ಗುರುತಿನ ಚೀಟಿಗಾಗಿ ಅಪ್ಲೈ ಮಾಡಿದ್ದರು. ಆಗ ಅವರ ಅರ್ಜಿ ರಿಜೆಕ್ಟ್ ಆಗಿತ್ತು. ಆನಂತರ ಇನ್ನೂ ಮೂರು ಬಾರಿ ಅರ್ಜಿ ಸಲ್ಲಿಸಿದ್ದರು. ಆದರೆ, ಅವರ ಅರ್ಜಿಯು ಪದೇ ಪದೇ ರಿಜೆಕ್ಟ್ ಆಗಿತ್ತು. ಆದರೆ, ನಾಲ್ಕನೇ ಬಾರಿಗೆ ಅವರ ಅರ್ಜಿ ಅಂಗೀಕಾರವಾಗಿ ಅವರಿಗೆ ಮತದಾರರ ಗುರುತಿನ ಚೀಟಿ ಬಂದಿದೆ. ಹೀಗೆ ಪ್ರತಿಯೊಂದು ಬಾರಿ ಅರ್ಜಿ ಹಾಕುವಾಗಲೂ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಮನೆ ಬದಲಾಯಿಸಿದ್ದಾರೆ. ಹಾಗಾಗಿ, ಅವರು ಅಪ್ಲೈ ಮಾಡಿದ ಕಡೆಯೆಲ್ಲಾ ಅವರ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಿದೆ. ಆದರೆ, ಕಡೆಯದಾಗಿ ಅವರಿಗೆ ಐದನೇ ಬಾರಿ ಮತದಾರರ ಗುರುತಿನ ಚೀಟಿ ಸಿಕ್ಕಾಗ ಅವರು ಆನ್‌ಲೈನ್‌ನಲ್ಲಿ ಚುನಾವಣಾ ಆಯೋಗಕ್ಕೆ ಫಾರ್ಮ್ ನಂಬರ್ 7 ಸಲ್ಲಿಸಿ, ತಮ್ಮ ಹೆಸರಿನಲ್ಲಿ ಇರುವ ಇತರ ವೋಟರ್ ಐಡಿ ಕಾರ್ಡ್‌ಗಳನ್ನು ಕ್ಯಾನ್ಸಲ್ ಮಾಡಿ ಎಂದು ಅರ್ಜಿ ಸಲ್ಲಿಸಿದ್ದಾರೆ. ಆದರೆ, ಅದು ಕ್ಯಾನ್ಸಲ್ ಆಗಿಲ್ಲ. ಹಾಗಾಗಿ, ಅವರ ಹೆಸರು ನಾಲ್ಕು ಕಡೆಯೂ ಕಾಣಿಸಿಕೊಂಡಿದೆ.

ಹಾಗೆಯೇ, ಆದಿತ್ಯ ಶ್ರೀವಾಸ್ತವ್ ಎಂಬುವರದ್ದು ವಿಶಾಲ್ ಸಿಂಗ್ ಎಂಬುವರ ಉದಾಹರಣೆಯನ್ನು ರಾಹುಲ್ ಅವರು ಕೊಟ್ಟಿದ್ದಾರೆ. ಅವರುಗಳ ವೋಟರ್ ಐಡಿ ಅರ್ಜಿಗಳು ಇದೇ ರೀತಿ ಪದೇ ಪದೇ ರಿಜೆಕ್ಟ್ ಆಗಿ ಕಡೆಗೆ ಸಕ್ಸಸ್ ಆಗಿದ್ದರಿಂದ ಇತರ ಬೂತ್‌ಗಳಲ್ಲಿನ ಮತದಾರರ ಪಟ್ಟಿಯಲ್ಲಿ ಅವರ ಹೆಸರುಗಳು ಬಂದಿವೆ. ಬಹುಶಃ ರಾಹುಲ್ ಗಾಂಧಿಯವರು ಮಾಡಿರುವ ಬಲ್ಕ್ ವೋಟರ್‌ಗಳ ಆರೋಪ ಕೂಡ ಇದೇ ರೀತಿಯದ್ದಾಗಿದೆ.

### ಇನ್ನು ಫೇಕ್ ಅಡ್ರೆಸ್ ವಿಚಾರ

ಮಹದೇವಪುರದ ಒಂದೇ ಅಡ್ರೆಸ್‌ನಲ್ಲಿ 80 ಮಂದಿ ವೋಟರ್ಸ್ ಇದ್ದರೆಂಬುದು ರಾಹುಲ್ ಗಾಂಧಿಯವರು ಹೇಳಿದ್ದಾರೆ. ಆದರೆ, ಅದೊಂದು ಡಾರ್ಮೆಂಟರಿ ಆಗಿದೆ. ಅಲ್ಲಿರುವವರೆಲ್ಲರೂ ಹೋಟೆಲೊಂದರಲ್ಲಿ ಕೆಲಸ ಮಾಡುವವರು. ಹೋಟೆಲ್‌ನವರು ತಮ್ಮ ಕೆಲಸಗಾರರಿಗೆ ಅಲ್ಲಿ ಡಾರ್ಮೆಂಟರಿ ಮಾಡಿ ಅಲ್ಲಿ ಎಲ್ಲಾ ಕೆಲಸಗಾರರನ್ನು ಉಳಿಸಿದ್ದಾರೆ. ಹಾಗಾಗಿ, ಒಂದೇ ಮನೆಯ ಅಡ್ರೆಸ್‌ನಲ್ಲಿ 80 ಮತದಾರರಿದ್ದಾರೆ. ಇದನ್ನು ರಾಹುಲ್ ಗಾಂಧಿ ತಪ್ಪಾಗಿ ಅರ್ಥೈಸಿದ್ದಾರೆ. ಪಾಪ, ಅವರು ಗ್ರೌಂಡ್‌ಗೆ ಇಳಿದು ಅಲ್ಲಿಗೆ ಹೋಗಿ ನೋಡಿದ್ದರೆ ಗೊತ್ತಿರುತ್ತಿತ್ತು. ಆದರೆ, ಅದನ್ನು ಪರಿಶೀಲಿಸದೇ ಅವರು ಒಂದೇ ಅಡ್ರೆಸ್‌ನಲ್ಲಿ 80 ಜನ ಇರಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ್ದಾರೆ.

### ಇನ್ನು ಇನ್ ವ್ಯಾಲಿಡ್ ವೋಟರ್ಸ್ ವಿಷಯ

ವೋಟರ್ ಲಿಸ್ಟ್‌ನಲ್ಲಿ ಕೆಲವು ಮತದಾರರ ಫೋಟೋಗಳು ಸರಿಯಾಗಿ ಕಾಣಿಸುವುದಿಲ್ಲ. ಅಂಥ ವೋಟರ್‌ಗಳನ್ನು ಗುರುತು ಹಿಡಿಯಲು ಚುನಾವಣಾ ಆಯೋಗ ಕೆಲವಾರು ನಿರ್ದೇಶನಗಳನ್ನು ನೀಡಿದೆ. ವೋಟರ್ ಐಡಿ ಕಾರ್ಡ್‌ನಲ್ಲಿ ಅವರ ಫೋಟೋ ಸ್ಪಷ್ಟವಾಗಿದ್ದರೂ, ಮತದಾರರ ಪಟ್ಟಿಯಲ್ಲಿ ಅವರ ಫೋಟೋ ಮೂಡಿಬಂದಿಲ್ಲ ಎಂದರೆ ಮತದಾರರರ ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್ ಇತ್ಯಾದಿ ದಾಖಲೆಗಳನ್ನು ಪರಿಶೀಲಿಸಿ, ಆ ಮತದಾರರ ವಿಳಾಸ, ಫೋಟೋಗಳನ್ನು ಕನ್ಫರ್ಮ್ ಮಾಡಿಕೊಂಡು ಅವರಿಗೆ ಮತದಾನ ಮಾಡಲು ಅವಕಾಶ ನೀಡಲಾಗುತ್ತದೆ. ಹೀಗೆ, ಮತದಾರರ ಪಟ್ಟಿಯಲ್ಲಿ ಸರಿಯಾಗಿ ಫೋಟೋ ಕಾಣದೆಯೂ ವೋಟ್ ಮಾಡಿರುವವರ ಸಂಖ್ಯೆ ಅಧಿಕವಿದೆ. ಅಂಥವರು ಮಹದೇವಪುರದ ಮಂಡೂರಿನ ಗ್ರೀನ್ ವುಡ್ ಅಪಾರ್ಟ್‌ಮೆಂಟ್, ರೇಡಿಯಂಟ್ ಅಪಾರ್ಟ್‌ಮೆಂಟ್, ಇಂಡಸ್ ಅಪಾರ್ಟ್‌ಮೆಂಟ್ ನಲ್ಲಿದ್ದಾರೆ. ಬೂತ್ ನಂಬರ್ 5ರಲ್ಲಿ ಹೀಗಾಗಿದೆ. ದೊಡ್ಡಲಕ್ಕುಂದಿ ವಾರ್ಡ್‌ನಲ್ಲಿಯೂ ಹೀಗೇ ಆಗಿದೆ. ಅಷ್ಟಕ್ಕೇ 4 ಸಾವಿರಕ್ಕೂ ಹೆಚ್ಚು ಇನ್ ವ್ಯಾಲಿಡ್ ವೋಟರ್ಸ್ ಇದ್ದಾರೆ ಎಂದರೆ ಹೇಗೆ?

ರಾಹುಲ್ ಗಾಂಧಿಯವರು ಶಗುನ್ ರಾಣಿ ಎಂಬವರ ಹೆಸರನ್ನು ಉಲ್ಲೇಖಿಸಿ ಅವರು ಮತದಾರರ ಗುರುತಿನ ಚೀಟಿಗಾಗಿ ಅಪ್ಲೈ ಮಾಡಲು ಬಳಸುವ ಫಾರ್ಮ್ ನಂಬರ್ 6 ಅನ್ನು ದುರ್ಬಳಕೆ ಮಾಡಿಕೊಂಡಿದ್ದಾರೆ. ಬೇರೆ ಬೇರೆ ಬೂತ್‌ಗಳಲ್ಲಿನ ಮತದಾರರ ಪಟ್ಟಿಯಲ್ಲಿ ತಮ್ಮ ಹೆಸರು ಬರುವಂತೆ ಮಾಡಿಕೊಂಡಿದ್ದಾರೆ ಎಂದು ರಾಹುಲ್ ಗಾಂಧಿ ಆರೋಪಿಸಿದ್ದಾರೆ. ಆದರೆ, ನಾವು ರಾಣಿ ಅವರನ್ನು ಭೇಟಿ ಅವರಿಂದ ಮಾಹಿತಿ ಸಂಗ್ರಹಿಸಿದ್ದೇವೆ. ಅವರು ಪಾಣಿಪತ್ ನವರು. ವರ್ಷಗಳ ಹಿಂದೆ, ಮಹದೇವಪುರದ ಪೂರ್ವಾ ಅಪಾರ್ಟ್ ಮೆಂಟ್‌ನಲ್ಲಿ ಬಂದು ನೆಲೆಸಿದ್ದಾರೆ. ಒಂದಕ್ಕಿಂತ ಹೆಚ್ಚು ಬಾರಿ ವೋಟರ್ ಲಿಸ್ಟ್‌ನಲ್ಲಿ ಸೇರಲು ಫಾರ್ಮ್ ನಂಬರ್ 6ರಲ್ಲಿ ಅಪ್ಲೈ ಮಾಡಿದ್ದಾರೆ. ಪ್ರತಿ ಬಾರಿ ರಿಜೆಕ್ಟ್ ಆಗಿ ಬಹುಶಃ ನಾಲ್ಕನೇ ಬಾರಿ ಅವರ ಅರ್ಜಿ ಅಂಗೀಕಾರವಾಗಿ ಅವರಿಗೆ ಮತದಾರರ ಗುರುತಿನ ಚೀಟಿ ಸಿಕ್ಕಿದೆ. ಆದರೆ, ವೋಟರ್ ಲಿಸ್ಟ್‌ನಲ್ಲಿ 2 ಕಡೆ ಬಂದಿದೆ. ಎರಡು ಕಡೆ ವೋಟ್ ಹಾಕಿದ್ದಾಗಿ ಹೇಳಿರುವುದು ಸುಳ್ಳು. ತಾವು ಸೀರಿಯಲ್ ನಂಬರ್ 1228. ಬೂತ್ ನಂಬರ್ 1ನಲ್ಲಿ ಮತ ಚಲಾಯಿಸಿದ್ದಾಗಿ ಅಂತ ಆಕೆಯೇ ಹೇಳಿದ್ದಾಳೆ.

ಇನ್ನು, ಜೀರೋ ವಿಳಾಸದ ಬಗ್ಗೆ ಹೇಳುವುದಾದರೆ, ಅದು ಚುನಾವಣಾ ಆಯೋಗದ ತಪ್ಪು! ರಾಹುಲ್ ಗಾಂಧಿಯವರು ಮಹದೇವಪುರದ ಅನೇಕ ಮತದಾರರ ಅಡ್ರೆಸ್ ಸೆಕ್ಷನ್‌ನಲ್ಲಿ ಝೀರೋ ಝೀರೋ ಇದೆ ಎಂದು ಆರೋಪಿಸಿದ್ದರು. ಕೇವರ ಮಹದೇವಪುರ ಮಾತ್ರಲ್ಲ, ಸಿದ್ದರಾಮಯ್ಯನವರ ಕ್ಷೇತ್ರವಾದ ವರುಣಾದ ವಾರ್ಡ್ ನಂಬರ್ 8ರಲ್ಲಿ ನೂರಾರು ಝೀರೋ ಅಡ್ರೆಸ್ ಗಳಿರುವ ಮತದಾರರಿದ್ದಾರೆ. ಅದಲ್ಲದೆ, ಸಂಡೂರು, ಮಾನ್ವಿ ಮುಂತಾದ ಕಾಂಗ್ರೆಸ್ ಗೆದ್ದಿರುವ ಕ್ಷೇತ್ರಗಳಲ್ಲೇ ಝೀರೋ ಅಡ್ರೆಸ್ ಉಳ್ಳ ಮತದಾರರು ಇದ್ದಾರೆ. ಝೀರೋ ಅಡ್ರೆಸ್ ಬರಲು ಕಾರಣ ಏನೆಂಬುದನ್ನು ನೀವು (ಮಾಧ್ಯಮಗಳು) ಚುನಾವಣಾ ಆಯೋಗವನ್ನೇ ಕೇಳಬೇಕು. ಬಹುಶಃ ಅಡ್ರೆಸ್‌ಗಳನ್ನು ಕಂಪ್ಯೂಟರಿನಲ್ಲಿ ಎಂಟ್ರಿ ಮಾಡುವಾಗ ಅಲ್ಲೇನೋ ತಪ್ಪಾಗಿ ಹೀಗೆ ಝೀರೋ ಬಂದಿರಬೇಕು. ಇದರಲ್ಲಿ ನಮ್ಮ ತಪ್ಪೇನಿದೆ? ಎಂದಿದ್ದಾರೆ, ಅರವಿಂದ ಲಿಂಬಾವಳಿ.... ☯

# ಒಡಹುಟ್ಟಿದ ತಮ್ಮನನ್ನೇ ಮುಗಿಸಿಬಿಟ್ಟ ಅಣ್ಣಯ್ಯ!

7 ☞

ನೇತೃತ್ವದಲ್ಲಿ ಪಿಎಸ್‌ಐಗಳಾದ ಗುರುರಾಜ ಚಿಂತಾಕಲ ಮತ್ತು ಡಿ.ಕೆ. ನಾರಾಯಣಸ್ವಾಮಿ, ಸಿಬ್ಬಂದಿ ವರ್ಗದವರಾದ ರೈಟರ್ ಮಹೇಂದ್ರಪ್ರಸಾದ್ ಮತ್ತು ಹೆಚ್‌ಸಿ ಶ್ರೀನಿವಾಸ್ ಮುಂತಾದವರ ತಂಡವನ್ನು ರಚಿಸಲಾಗಿದ್ದು, ಪೊಲೀಸ್ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಜೂನ್ 15ರಂದು ಬೆಳಿಗ್ಗೆ 6.30 ಗಂಟೆ ಸಮಯದಲ್ಲಿ ಎ1 ಸೀನಪ್ಪನನ್ನು ಎನ್.ಜಿ. ಹುಲ್ಕೂರಿನಲ್ಲಿ ಹಾಗೂ ಅದೇ ದಿನ ಬೆಳಿಗ್ಗೆ 11 ಗಂಟೆ ಸಮಯದಲ್ಲಿ ಆಂಧ್ರದ ಪಲಮನೇರು ಬ್ರಿಡ್ಜ್ ಬಳಿ ಎ2 ಸಂಪಂಗೆಪ್ಪನನ್ನು ವಶಕ್ಕೆ ಪಡೆದು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ವಿಚಾರಣೆಗೆ ಒಳಪಡಿಸಲಾಗಿ, ಜಮೀನು ಹಂಚಿಕೆ ವಿಚಾರದಲ್ಲಿ ಅಣ್ಣತಮ್ಮಂದಿರ ನಡುವೆ ವಿವಾದವಿದ್ದು ನ್ಯಾಯಾಲಯದಲ್ಲಿ ಕೇಸು ನಡೆಯುತ್ತಿರುವಾಗ ಶೆಡ್ ನಿರ್ಮಿಸುವುದು ಬೇಡವೆಂದು ಹೇಳಿದರೂ ನಮ್ಮ ಮಾತನ್ನು ಕೇಳದೆ ಗ್ರಾಮದ ಶಂಕರ್ ಎಂಬುವವರು ಹಸುಗಳನ್ನು ಕಟ್ಟಿಕೊಳ್ಳಲು ತಾತ್ಕಾಲಿಕ ಶೆಡ್ ಹಾಕಿಕೊಳ್ಳಲು ಆತನಿಗೆ ಅನುವು ಮಾಡಿಕೊಟ್ಟಿದ್ದರಿಂದ ಕೋಪ ಬಂದು ತಮ್ಮ ರಮೇಶ್ ಮೇಲೆ ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈದು ಹಲ್ಲೆ ಮಾಡಲು ಹೋದಾಗ ಇಬ್ಬರ ನಡುವೆ ಚಕುಮುಕ ನಡೆದು ನಾನು ಮತ್ತು ಅಣ್ಣ ಸಂಪಂಗಿ ಸೇರಿಕೊಂಡು ದೊಣ್ಣೆಗಳಿಂದ ಹೊಡೆದು ಕೊಲೆ ಮಾಡಿರುವುದಾಗಿ ತನ್ನ ಹೇಳಿಕೆಯಲ್ಲಿ ತಿಳಿಸಿರುತ್ತಾನೆ. ನಂತರ ಎ2 ಸಂಪಂಗಿಯನ್ನು ವಿಚಾರಣೆಗೆ ಒಳಪಡಿಸಲಾಗಿ ಜಮೀನು ವಿಚಾರದಲ್ಲಿ ಅಣ್ಣತಮ್ಮಂದಿರ ನಡುವೆ ವಿವಾದವಿದ್ದು ಶೆಡ್ ನಿರ್ಮಿಸುತ್ತಿರುವ ಬಗ್ಗೆ ನಮ್ಮ ವಿರೋಧವಿದ್ದು, ಶೆಡ್ ಕಿತ್ತು ಹಾಕುವಾಗ ಎರಡು ಕಡೆ ಗಲಾಟೆಗಿ ಕಿತ್ತಾಟ ನಡೆದು ದೊಣ್ಣೆಯಿಂದ ತಮ್ಮ ರಮೇಶ್‌ಗೆ ಹೊಡೆದು ಸಾಯಿಸಿರುವುದಾಗಿ ತಪ್ಪಾಗಿರುತ್ತದೆಂದು



ತನ್ನ ಹೇಳಿಕೆಯಲ್ಲಿ ತಿಳಿಸಿರುತ್ತಾರೆ.

ವಿಚಾರಣೆ ನಂತರ ಇಬ್ಬರು ಆರೋಪಿಗಳನ್ನು ಘಟನೆ ನಡೆದ ಸ್ಥಳಕ್ಕೆ ಕರೆದುಕೊಂಡು ಹೋಗಿ ಸ್ಥಳದ ಮಹಜರ್ ನಡೆಸಿದ ನಂತರ ಕೃತ್ಯಕ್ಕೆ ಉಪಯೋಗಿಸಿದ ದೊಣ್ಣೆಗಳನ್ನು ಆರೋಪಿಗಳು ತೋರಿಸಿದ್ದು ಅವುಗಳನ್ನು ಪಂಚರ ಸಮಕ್ಷಮದಲ್ಲಿ ವಶಕ್ಕೆ ಪಡೆದ ಮೇಲೆ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಎ1 ಮತ್ತು ಎ2 ಆರೋಪಿಗಳನ್ನು ಬಂಧಿಸಿದ್ದು, ಉಳಿದ ಆರೋಪಿಗಳಾದ ಎ3 ಸುಲೋಚನ, ಎ4 ರತ್ನಮ್ಮ, ಎ5 ಮುನಿರಾಜು, ಎ6 ಪ್ರಜ್ವಲ್‌ರವರು ತಲೆಮರೆಸಿಕೊಂಡಿದ್ದು, ಇವರ ಪತ್ತೆಗಾಗಿ ಕ್ರೈಂ ತಂಡವು ಕಾರ್ಯಾಚರಣೆ ನಡೆಸುತ್ತಿರುವುದಾಗಿ ತಿಳಿದು ಬಂದಿದೆ. ☯


**ನಿಮ್ಮ ಸುತ್ತಮುತ್ತಲಿನ ಸುದ್ದಿ ಹಾಗೂ ಅನ್ಯಾಯ-ಭ್ರಷ್ಟಾಚಾರಗಳನ್ನು ತಿಳಿಸಿ!**

ಕರ್ನಾಟಕ ರಾಜ್ಯದ ಮಹಾಜನತೆಗೆ ಇದೋ ಒಂದು ಸುವರ್ಣಾವಕಾಶ. ನಿಮ್ಮ ಸುತ್ತಮುತ್ತ ನಡೆಯುವ ಅನ್ಯಾಯ, ಅಕ್ರಮ, ಅನಾಚಾರ, ಭ್ರಷ್ಟಾಚಾರಗಳನ್ನು ಸಂಕಟ ಪಡುತ್ತಿದ್ದೀರಾ? ಹಾಗಾದರೆ; ಈ ಕೂಡಲೇ ಸವಿವರ ಸಮೇತ ಅವುಗಳನ್ನು ನಮ್ಮ ಕಛೇರಿಗೆ ಕಳುಹಿಸಿ! ನಿಮ್ಮ ಹೆಸರು, ವಿಳಾಸ, ಮೊಬೈಲ್ ನಂಬರ್ ಇತ್ಯಾದಿ ವಿವರಗಳನ್ನು ನಾವು ಅತ್ಯಂತ ಗೌಪ್ಯವಾಗಿಡುತ್ತೇವೆ. ಯಾವುದೇ ಕಾರಣಕ್ಕೂ ಅದನ್ನು ಬಹಿರಂಗಪಡಿಸುವುದಿಲ್ಲ. 'ಪೊಲೀಸ್ ನ್ಯೂಸ್' ವಾರಪತ್ರಿಕೆಯಲ್ಲಿ ಸುದ್ದಿ ಪ್ರಕಟಿಸುವ ಮೂಲಕ ಸಂಬಂಧಪಟ್ಟ ಇಲಾಖೆಗೆ ತಿಳಿಸಿ ಸೂಕ್ತ ಕಾನೂನು ಕ್ರಮ ಜರುಗಿಸಲು ಸೂಚಿಸುವ ಕೆಲಸ ಮಾಡುವ ಹೊಣೆ ನಮ್ಮದು.

ವಿಳಾಸ : ಪೊಲೀಸ್ ನ್ಯೂಸ್, ವಾರಪತ್ರಿಕೆ
ನಂ. 165, 8ನೇ ಮುಖ್ಯರಸ್ತೆ, ಬಿಇಎಂಎಲ್
ಬಡಾವಣೆ, ಬಸವೇಶ್ವರನಗರ, ಬೆಂಗಳೂರು-79.
ದೂರವಾಣಿ : 080-23588510
ಮೊಬೈಲ್ : 9513892666

# ಆ ಕೂಲಿಯಿಂದ ಈ ಕೂಲಿಯವರೆಗೂ!



ಇದು ಕರ್ನಾಟಕದ ಗಿಡ, ತಮಿಳುನಾಡಿನಲ್ಲಿ ಮರವಾದ ಕಥೆ! ಎರಡೂ ಕೈಗಳಿಂದ ಎರಡೂ ಗೇಟುಗಳನ್ನು ತಳ್ಳಿ ಬಲಗಾಲಿಟ್ಟು ಒಳ ಬರುವ ದೃಶ್ಯ ಅದು. ಅದೇ ಶಾಟ್ ಮೂಲಕ ಆ ನಟನನ್ನು ಪರಿಚಯಿಸಬೇಕು ಎಂದು ಆಸೆಪಟ್ಟಿದ್ದರಂತೆ ನಿರ್ದೇಶಕ ಕೆ. ಬಾಲಚಂದರ್. ಏಕೆಂದರೆ, ಒಬ್ಬ ನವನಟನನ್ನು ಆ ಚಿತ್ರದ ಮೂಲಕ ಚಿತ್ರರಂಗಕ್ಕೆ ಪರಿಚಯಿಸುವುದಕ್ಕೆ ಅವರು ಮುಂದಾಗಿದ್ದರು. ಒಬ್ಬ ನವನಟನ ಎಂಟ್ರಿಗೆ ಹೇಳಿ ಮಾಡಿಸಿದ ಶಾಟ್ ಅದು ಎಂಬುದು ಅವರ ಅಭಿಪ್ರಾಯವಾಗಿತ್ತು. ಹಾಗಾಗಿ, ಅದೇ ಶಾಟ್ ಮೂಲಕ ರಜನಿಕಾಂತ್ ಪಾತ್ರವನ್ನು ಅಪೂರ್ವ ರಾಗಂಗಳ್ ಚಿತ್ರದ ಮೂಲಕ ಪರಿಚಯಿಸಿದ್ದರು ಬಾಲಚಂದರ್. ಹಾಗೆ ರಜನಿಕಾಂತ್ ಚಿತ್ರರಂಗಕ್ಕೆ ಬಲಗಾಲಿಟ್ಟು ಒಳಗೆ ಬಂದು ನಾಡಿದ್ದು ಶುಕ್ರವಾರಕ್ಕೆ ಭರ್ತಿ 50 ವರ್ಷಗಳು. ಅಪೂರ್ವ



ಗೆಳೆಯ ರಾಜ್ ಬಹದ್ದೂರ್‌ರೊಂದಿಗೆ

ರಾಗಂಗಳ್ ಬಿಡುಗಡೆಯಾಗಿದ್ದು 1975ರ ಆಗಸ್ಟ್ 15ರಂದು. ಅಲ್ಲಿಗೆ ಚಿತ್ರ ಮತ್ತು ರಜನಿಕಾಂತ್ ಚಿತ್ರಜೀವನಕ್ಕೂ ಈಗ 50ರ ಸಂಭ್ರಮ.

ಅಪೂರ್ವ ರಾಗಂಗಳ್ ಚಿತ್ರದಲ್ಲಿ ಬಾಲಚಂದರ್, ರಜನಿಕಾಂತ್ ಅವರನ್ನು ಪರಿಚಯಿಸುವುದಕ್ಕೆ ಮೊದಲೇ ಪುಟ್ಟಣ್ಣ ಕಣಗಾಲ್ ಆ ಕೆಲಸ ಮಾಡಿದ್ದರು ಎಂದು ಹೇಳಲಾಗುತ್ತದೆ. ರಜನಿಕಾಂತ್ ಪ್ರತಿಭೆಯನ್ನು ಗುರುತಿಸಿ ಕಥಾ ಸಂಗಮದ ಮುನಿತಾಯಿ ಕಥೆಯಲ್ಲಿ ಪಾತ್ರ ಕೊಟ್ಟಿದ್ದರು. ಆದರೆ, ಚಿತ್ರ ಕಾರಣಾಂತರಗಳಿಂದ ತಡವಾಯಿತಂತೆ. ಈ ಮಧ್ಯೆ ರಜನಿಕಾಂತ್, ಬಾಲಚಂದರ್ ಅವರ ಕಣ್ಣಿಗೆ ಬಿದ್ದರು. ಬಾಲಚಂದರ್ ಸಹ ತಮ್ಮ ಹೊಸ ಚಿತ್ರಕ್ಕೆ ಹೊಸ ನಟನನ್ನು ಹುಡುಕುತ್ತಿದ್ದರಂತೆ. ಪಾತ್ರಕ್ಕೆ ಹೊಂದುತ್ತಾರೆ ಎನ್ನುವುದರ ಜೊತೆಗೆ, ಪುಟ್ಟಣ್ಣ ಪರಿಚಯಿಸಿದ ಹುಡುಗ ಎಂಬ ಕಾರಣಕ್ಕೆ ರಜನಿಕಾಂತ್ ಅವರಿಗೆ ಬಾಲಚಂದರ್ ಅವಕಾಶ ಕೊಟ್ಟರು ಎಂದು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಹಾಗೆ ಶುರುವಾದ ಚಿತ್ರ ರಜನಿಕಾಂತ್ ಮೊದಲ ಚಿತ್ರವಾಗಿ ಬಿಡುಗಡೆಯಾಗಿದೆ. ಇನ್ನು, ಕಥಾ ಸಂಗಮ ಮೊದಲು ಪ್ರಾರಂಭವಾದರೂ, 1976ರಲ್ಲಿ ಎರಡನೇ ಚಿತ್ರವಾಗಿ ಬಿಡುಗಡೆಯಾಗಿದೆ.

ಹೀಗೆ ಎಂಟ್ರಿ ಕೊಟ್ಟ ರಜನಿಕಾಂತ್ ಪೋಷಕ ಪಾತ್ರಗಳಲ್ಲಿ ಕಾಣಿಸಿಕೊಂಡು, ವಿಲನ್ ಆಗಿ, ದ್ವಿತೀಯ ನಾಯಕನಾಗಿ ಆಗಿ, ಹೀರೋ ಆಗಿ, ಸೂಪರ್ ಸ್ಟಾರ್ ಆಗಿ, ಬಹುಭಾಷಾ ನಟರಾಗಿ, ಭಾರತದ ಅತ್ಯಂತ ಜನಪ್ರಿಯ, ಬೇಡಿಕೆಯ, ಹೆಚ್ಚು ಸಂಭಾವನೆ ಪಡೆಯುವ ಹೀರೋ ಆಗಿ ಬೆಳೆದಿದ್ದು ಇತಿಹಾಸ. ವಯಸ್ಸು 74 ಆದರೂ, ಚಿತ್ರರಂಗಕ್ಕೆ ಬಂದು 50 ವರ್ಷಗಳಾದರೂ, 171 ಚಿತ್ರಗಳಲ್ಲಿ ನಟಿಸಿದರೂ, ರಜನಿಕಾಂತ್ ಅವರ ಜನಪ್ರಿಯತೆ ಸ್ವಲ್ಪವೂ ಕುಂದಿಲ್ಲ, ಅದಕ್ಕೆ ಹೊಸ ಉದಾಹರಣೆ ಕೂಲಿ. ಚಿತ್ರ ಬಿಡುಗಡೆಗೂ ಮೊದಲೇ 12 ಲಕ್ಷ ಟಿಕೆಟ್‌ಗಳು ಮಾರಾಟವಾಗಿದ್ದು, ಮೊದಲ ದಿನದ ಕಲೆಕ್ಷನ್ 100 ಕೋಟಿ ರೂ. ದಾಟುವ ಸಾಧ್ಯತೆ ಇದೆ ಎಂದು ಹೇಳಲಾಗುತ್ತಿದೆ. ಇದಕ್ಕೂ ಮೊದಲು, ಮೊದಲ ದಿನ ಅತೀ ಹೆಚ್ಚು ಗಳಿಕೆ ಮಾಡಿದ ರಜನಿಕಾಂತ್ ಅಭಿನಯದ ಚಿತ್ರ ಎಂಬ ಹೆಗ್ಗಳಿಕೆಗೆ ಜೈಲರ್ ಪಾತ್ರವಾಗಿತ್ತು. ಆ ಚಿತ್ರ ಮೊದಲ ದಿನ 72 ಕೋಟಿ ರೂ. ಗಳಿಕೆ ಮಾಡಿತ್ತು. ಕೂಲಿ ಆ ದಾಖಲೆಯನ್ನು ಮುರಿಯುವತ್ತ ಹೊರಟಿದೆ.

ರಜನಿಕಾಂತ್ ಪಾಲಿಗೆ ಕೂಲಿ ಮಹತ್ವದ ಚಿತ್ರ. ಈ ಮಾತನ್ನು ಹಣಕಾಸಿನ, ಜನಪ್ರಿಯತೆ ಅಥವಾ ಬೇರೆ ಯಾವುದೋ ಕಾರಣಕ್ಕೆ ಹೇಳುತ್ತಿರುವ ಮಾತಲ್ಲ, ಭಾವನಾತ್ಮಕವಾಗಿ ಇದು ಅವರಿಗೆ ಹೃದಯಕ್ಕೆ ಹತ್ತಿರವಾದ ಚಿತ್ರ. ಹಾಗಂತ ಅವರೇ ಹೇಳಿಕೊಂಡಿದ್ದಾರೆ. ರಜನಿಕಾಂತ್ ಚಿತ್ರರಂಗಕ್ಕೆ ಬರುವ ಮುನ್ನ ಕಂಡಕ್ಟರ್ ಆಗಿದ್ದರು ಎಂದು ಎಲ್ಲರಿಗೂ ಗೊತ್ತಿದೆ. ಆದರೆ, ಅದಕ್ಕೂ ಮೊದಲು ಅವರು ಕೂಲಿ ಕೆಲಸ ಮಾಡಿದ್ದರಂತೆ. ಆ ವಿಷಯವನ್ನು ಅವರು ಹೇಳಿಕೊಂಡಿದ್ದಾರೆ. ಇತ್ತೀಚೆಗೆ ಕೂಲಿ ಚಿತ್ರದ ಪ್ರೀ-ರಿಲೀಸ್ ಇವೆಂಟ್‌ನಲ್ಲಿ ಮಾತನಾಡಿರುವ ರಜನಿಕಾಂತ್, ತಾವು ನಿಜಜೀವನದಲ್ಲಿ ಕೂಲಿಯಾಗಿದ್ದ ದಿನಗಳನ್ನು, ಆಗ ಪಟ್ಟ ಕಷ್ಟವನ್ನು ನೆನಪಿಸಿಕೊಂಡಿದ್ದಾರೆ.

ನಾವು ಐದು ಜನ ಅಣ್ಣ-ತಮ್ಮಂದಿರು. ನಮ್ಮಣ್ಣನಿಗೆ ನಾನು ಚೆನ್ನಾಗಿ ಓದಬೇಕೆಂಬ ಆಸೆ. ನಮ್ಮಣ್ಣನಿಗೆ ಆಗ 90 ರೂ. ಸಂಬಳ ಬರುತ್ತಿತ್ತು. ಬೆಳಿಗ್ಗೆ ಹೊತ್ತು ಪೇಪರ್ ಹಾಕುತ್ತಿದ್ದರು. ಒಂದು ಸಣ್ಣ ಅಂಗಡಿ ನಡೆಸುತ್ತಿದ್ದರು. ಪೇಪರ್ ಹಾಕಿ ಮಾರ್ಕೆಟ್‌ಗೆ ಹೋಗಿ, ತರಕಾರಿ ಸೇರಿದಂತೆ ಒಂದಿಷ್ಟು ದಿನಸಿ ತಂದು ಅಂಗಡಿಗೆ ಹಾಕಿ, ಆ ನಂತರ ಕೆಲಸಕ್ಕೆ ಹೋಗುತ್ತಿದ್ದರು. ವಾಪಸ್ಸು ಬಂದು ಆ ಅಂಗಡಿಯಲ್ಲಿ ಕೂರುತ್ತಿದ್ದರು. ಬಹಳ ಕಷ್ಟಪಟ್ಟು ಕೆಲಸ ಮಾಡುತ್ತಿದ್ದರು. ನಾನು ಚೆನ್ನಾಗಿ ಓದಬೇಕೆಂದು ಸರ್ಕಾರಿ ಕಾಲೇಜ್ ಬಿಟ್ಟು ಖಾಸಗಿ ಕಾಲೇಜಿಗೆ ಸೇರಿಸಿದ್ದರು. ನಾನು ಪಾಸ್ ಆಗುವುದಿಲ್ಲ ಎಂದು ನನಗೆ ಚೆನ್ನಾಗಿ ಗೊತ್ತಿತ್ತು. ಆದರೆ, ಚೆನ್ನಾಗಿ ಓದು ಎಂದು ಹುರುದುಂಬಿಸಿದ್ದರು. ಇವನು ಓದುವುದಿಲ್ಲ, ಇವನ ಮೇಲೆ ಹಣ ಹಾಕಬೇಡ ಎಂದು ನಮ್ಮ ತಂದೆ ಹೇಳುತ್ತಿದ್ದರೂ, ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ, ಒಮ್ಮೆ ಪರೀಕ್ಷೆ ಫೀಸ್‌ಗೆ 170 ರೂ. ಕೊಟ್ಟಿದ್ದರು. ಆ ಕಾಲಕ್ಕೆ ದೊಡ್ಡ ದುಡ್ಡು ಅದು. ಹೇಗಿದ್ದರೂ ನಾನು ಪಾಸ್ ಆಗುವುದಿಲ್ಲ ಎಂದು ಮದರಾಸಿಗೆ ಓಡಿ ಹೋಗಿದ್ದೆ. ನಟ ಆಗದಿದ್ದರೆ ಬೇಡ, ಲೈಟ್‌ಮ್ಯಾನ್ ಆದರೂ ಆಗೋಣ ಎಂದು ಪ್ರಯತ್ನಪಟ್ಟೆ. ಕೆಲಸ ಸಿಗಲಿಲ್ಲ, ಹೋಟೆಲ್‌ನಲ್ಲಿ ಸರ್ವರ್ ಆಗೋಕೆ ಪ್ರಯತ್ನ ಮಾಡಿದೆ. ಅದೂ ಆಗಲಿಲ್ಲ, ಕೊನೆಗೆ ಹಣ ಖಾಲಿಯಾಗಿ ಬೆಂಗಳೂರಿಗೆ ವಾಪಸ್ಸು ಬಂದು ಬಿಟ್ಟೆ

ಮನೆಯಲ್ಲಿ ಚೆನ್ನಾಗಿ ಒದೆ ಬೀಳುತ್ತದೆ, ಅಪ್ಪ ಸಿಟ್ಟಾಗಿರುತ್ತಾರೆ ಎಂದು ಗೊತ್ತಿತ್ತು. ಮನೆಗೆ ಹೋದೆ. ಅಪ್ಪ, ಅಣ್ಣ ಇಬ್ಬರೂ ಮಾತನಾಡಿಸಲಿಲ್ಲ, ಮೌನವಾಗಿದ್ದರು. ಆ ನಂತರ ಅಣ್ಣ ಬಂದು, ಅಪ್ಪ ಹೇಳಿದ್ದಾರೆ. ನಾಳೆಯಿಂದ ಕೂಲಿ ಕೆಲಸಕ್ಕೆ ಹೋಗಬೇಕಂತೆ ಎಂದು ಹೇಳಿದರು. ಮಂಡಿಪೇಟೆಯಲ್ಲಿ ನಮ್ಮ ಬಾವ, ಜಗದೀಶ್ ಟ್ರೇಡಿಂಗ್ ಕಂಪನಿ ಎಂಬ ಸಂಸ್ಥೆಯಲ್ಲಿ ಸೂಪರ್‌ವೈಸರ್ ಆಗಿ ಕೆಲಸ ಮಾಡುತ್ತಿದ್ದರು. ಅಲ್ಲಿ ಮೂಟೆ ಹೊರುವ ಕೆಲಸ ಮಾಡಬೇಕು ಎಂದು ಅಪ್ಪ ಹೇಳಿಬಿಟ್ಟಿದ್ದರು. ನನಗೆ ಬೇರೆ ದಾರಿ ಇರಲಿಲ್ಲ. ಕೆಲಸಕ್ಕೆ ಹೋದೆ. ಅಲ್ಲಿ ಮುನಿಸ್ವಾಮಿ ಎಂಬ ಖಾಯಂ ಕೂಲಿ ಇದ್ದ ಗಣೇಶ್, ಶೇಖರ್, ರೆಡ್ಡಿ ಅಂತ ಮೂವರು ಜೊತೆಗಿದ್ದರು. ಸರೋಜ ಎನ್ನುವವರು ಕೆಲಸಕ್ಕಿದ್ದರು. 100 ಕೆಜಿಯ ಅಕ್ಕಿ ಮೂಟೆಯನ್ನು ಹೊತ್ತು ಹೋಗಬೇಕಿತ್ತು. ಒಂದು ಮೂಟೆಗೆ 10 ಪೈಸೆ. 100 ಮೂಟೆಯನ್ನು ಸಾಗಿಸಬೇಕಿತ್ತು. ದಿನಕ್ಕೆ 10 ರೂ. ಸಂಬಳ. ಐದೂ ಜನರಿಗೆ ಎರಡೆರಡು ರೂಪಾಯಿ. ನಾನು ಮೂಟೆಗೆ ಹುಕ್ ಹಾಕಿ ಎತ್ತಿಕೊಡಬೇಕು. ಅವರು ಅದನ್ನು ಸಾಗಿಸುತ್ತಿದ್ದರು. ಒಮ್ಮೊಮ್ಮೆ ಎರಡ್ಮೂರು ಲೋಡ್‌ಗಳು ಬರುತ್ತಿದ್ದವು. ಕೆಲವೊಮ್ಮೆ ಯಾರಾದರೂ ಗ್ರಾಹಕರು ಬಂದರೆ, ನಾನು ಮೂಟೆಯನ್ನು ಹೊತ್ತು **weighing machine**ಗೆ ಹಾಕಿ ತೋರಿಸಿ, ಅದನ್ನು ಟೆಂಪೋಗೆ ಹಾಕಬೇಕು. ಆಗ 50 ಪೈಸೆ ಸಿಗುತ್ತಿತ್ತು. ಕೆಲವೊಮ್ಮೆ ಸ್ವಲ್ಪ ದೂರ ಹೋಗಿ ಒಂದು ಮೂಟೆಯನ್ನು ಸಾಗಿಸಿ ಬರಬೇಕಿತ್ತು. ಒಂದು ಮೂಟೆಗೆ 5 ರೂ. ಸಿಗುತ್ತಿತ್ತು. ಕೆಲವೊಮ್ಮೆ, ನೀನು ಹೋಗಿ ಬಾ ಎಂದು ನನ್ನನ್ನು ಕಳಿಸುತ್ತಿದ್ದರು



ಸಾಕಿಸಲಹಿದ ಅಣ್ಣನೊಂದಿಗೆ

ಒಂದು ದಿನ ಮುನಿಸ್ವಾಮಿಗೆ ಹುಷಾರಿರಲಿಲ್ಲ, ಬೇರೆಯವರಿಗೆ ಬೇರೆ ಕೆಲಸವಿತ್ತು. ಹೀಗಿರುವಾಗಲೇ, ಮೂರು ಮೂಟೆ ಅಕ್ಕಿ ಸಾಗಿಸುವ ಕೆಲಸ ಬಂತು. 500 ಮೀಟರ್ ದೂರದಲ್ಲಿ ಒಂದು ಅಂಗಡಿಗೆ ಹೋಗಿ ಮೂರು ಮೂಟೆ ಸಾಗಿಸಬೇಕಿತ್ತು. ನಾನು ಕೈಗಾಡಿಯಲ್ಲಿ ಅದನ್ನು ಹಾಕಿಕೊಂಡು ಹೊರಟೆ. ಅಲ್ಲೊಂದು ಅಪಘಾತವಾಗಿ, ರಸ್ತೆ ಬ್ಲಾಕ್ ಆಗಿತ್ತು. 500 ಮೀಟರ್ ದೂರ ಇದ್ದಿದ್ದು ಸುತ್ತಿ ಬಳಸಿ ಒಂದೂವರೆ ಕಿಲೋಮೀಟರ್ ದೂರ ಹೋಗಬೇಕಿತ್ತು. ಆ ಟ್ರಾಫಿಕ್ ಮಧ್ಯೆ ಮೂಟೆಗಳನ್ನು ಬ್ಯಾಲೆನ್ಸ್ ಮಾಡಿಕೊಂಡು ಹೋಗುವುದು ಬಹಳ ಕಷ್ಟವಾಗುತ್ತಿತ್ತು. ಬ್ಯಾಲೆನ್ಸ್ ತಪ್ಪಿ ಒಂದು ಮೂಟೆ ಕೆಳಕ್ಕೆ ಬಿತ್ತು. ರಸ್ತೆಯಲ್ಲಿ ಹೋಗುವವರೆಲ್ಲಾ ನನಗೆ ಬಯ್ಯುವುದಕ್ಕೆ ಶುರು ಮಾಡಿಬಿಟ್ಟರು. ನಾನು ವಿಪರೀತ ಬೆವರುತ್ತಿದ್ದೆ. ಆಗ ನಾನು ಬಹಳ ಸಣ್ಣಕ್ಕಿದ್ದೆ. ನಿನಗೆ ಈ ಗಾಡಿ ಕೊಟ್ಟಿದ್ದಾರು? ಈ ರಸ್ತೆಯಲ್ಲಿ ಯಾಕೆ ಬಂದೆ? ಎಂದು ಎಲ್ಲ ಬೈದರು. ಕಷ್ಟಪಟ್ಟು ಎಳೆದುಕೊಂಡು ಹೋಗುತ್ತಿರುವಾಗಲೇ, ಸರೋಜ ಹಿಂದಿನಿಂದ ಬಂದ ಗಾಡಿ ತಳ್ಳುವುದಕ್ಕೆ ಶುರು ಮಾಡಿದರು. ಕೊನೆಗೆ ಅವರ ಸಹಾಯದಿಂದ ಹೇಗೋ ಮಾಡಿ, ಮೂಟೆಗಳನ್ನು ಮುಟ್ಟಿಸಿದೆ. ಅದರಿಂದ 15 ರೂ. ಸಿಕ್ಕಿತು. ಆ ನಂತರ, ನೀನು ರೆಸ್ಟ್ ಮಾಡು ಎಂದು ಗಾಡಿಯಲ್ಲಿ ಕೂರಿಸಿ ಸರೋಜ ನನ್ನನ್ನು ವಾಪಸ್ಸು ಎಳೆದುಕೊಂಡು ಹೋದರು. ರೆಸ್ಟ್ ಮಾಡುತ್ತಿರುವಾಗಲೇ ಇನ್ನೂ ಮೂರು ಮೂಟೆ ಬಂದಿತ್ತು. ಟೆಂಪೋಗೆ ಹಾಕಬೇಕೆಂದರು. ಸರಿ ಹಾಕಿದೆ. ಆಗ ಯಾರೋ, ಎರಡು ರೂಪಾಯಿ ಟಿಪ್ಸ್ ಕೊಟ್ಟು ಇಟ್ಟುಕೋ ಎಂದರು. ಧ್ವನಿ ಕೇಳಿ ಅವರತ್ತ ತಿರುಗಿ ನೋಡಿದರೆ, ಆತ ನನ್ನ ಕಾಲೇಜ್ ಮೇಟ್ ಮರಿಸ್ವಾಮಿ. ನಾನು ಕಾಲೇಜಿನಲ್ಲಿದ್ದಾಗ ಅವನಿಗೆ ಕಿಂಡಲ್ ಮಾಡಿದ್ದೆ. ಸಿಕ್ಕಾಪಟ್ಟೆ ಕಾಟ ಕೊಟ್ಟಿದ್ದೆ. ಅವನು ನನ್ನನ್ನು ನೋಡಿ, ಎಷ್ಟೆಲ್ಲಾ ಆಟ ಆಡ್ತಿದ್ದೆ, ಈಗ ಎಂದು ಹೇಳಿ ಹೊರಟು ಹೋದ. ಆ ಮಾತು ಕೇಳಿ, ಮೂಟೆಗಳ ಮೇಲೆ ಹಾಗೆ ಒರಗಿ ಬಿಟ್ಟೆ ನನ್ನ ಜೀವನದಲ್ಲಿ ಅದೇ ಮೊದಲ ಬಾರಿಗೆ ನಾನು ಅತ್ತಿದ್ದು, ಇದೆಂಥಾ ಜೀವನ ಎಂದನಿಸಿ ಬಿಟ್ಟಿತು

ಹೀಗಿರುವಾಗಲೇ, ನನ್ನ ಎರಡನೇ ಅಣ್ಣನಿಗೆ ಮದುವೆಯಾಯಿತು. ಅವರ ಮಾವ ಬಿಟಿಎಸ್‌ನಲ್ಲಿದ್ದರು. 10ನೇ ಕ್ಲಾಸು ಪಾಸಾಗಿ ಇದೇನು ಮಾಡುತ್ತಿದ್ದೀಯಾ ಎಂದು ಕಂಡಕ್ಟರ್ ಲೈಸೆನ್ಸ್ ಗಿಟ್ಟಿಸಿಕೊಳ್ಳುವುದಕ್ಕೆ ಹೇಳಿದರು. ನಾನು ಲೈಸೆನ್ಸ್ ಪಡೆದು, ಕಂಡಕ್ಟರ್ ಆದೆ. ಆ ನಂತರ ರಾಜ್ ಬಹದ್ದೂರ್ ಸಹಾಯದಿಂದ ಮದರಾಸಿಗೆ ಹೋದೆ. ಬಾಲಚಂದರ್ ಅವರನ್ನು ಭೇಟಿಯಾದೆ. ಬಾಲಚಂದರ್ ಅವರು ಬೆಂಗಳೂರಿನ ಒಂದು ಸಣ್ಣ ಗಿಡವನ್ನು ತಮಿಳುನಾಡಿನಲ್ಲಿ ನೆಟ್ಟು ಬೆಳೆಸಿದರು. ಆ ಗಿಡವನ್ನು ಮುತ್ತುರಾಮನ್, ಪಂಚು ಅರುಣಾಚಲಂ ಮುಂತಾದವರಿಗೆ ಕೊಟ್ಟರು. ಅವರು ಅದನ್ನು ಮರವಾಗಿ ಬೆಳೆಸಿದರು. ಕಲಾವಿದರು, ತಂತ್ರಜ್ಞರು, ಪ್ರೇಕ್ಷಕರ ಸಹಾಯದಿಂದ ಇನ್ನಷ್ಟು ಬೆಳೆದೆ. ಪ್ರತೀ ಬಾರಿ ಈ ಮರ ಯಾವುದೋ ಕಾರಣಕ್ಕೆ ಬಳಲಿ ಬೆಂಡಾದಾಗ, ಜನ ಅದನ್ನು ಎತ್ತಿ ನಿಲ್ಲಿಸಿದರು. ಕೆಲವರು ಈ ಮರದ ಕೆಲಸ ಮುಗಿಯಿತು ಎಂದಾಗಲೂ ಗಟ್ಟಿಯಾಗಿ ನಿಲ್ಲಿಸಿದರು. ಜನರ ಪ್ರೀತಿ, ಪ್ರೋತ್ಸಾಹಕ್ಕೆ ಎಷ್ಟು ಸಾಷ್ಟಾಂಗ ನಮಸ್ಕಾರ ಹಾಕಿದರೂ ಸಾಲುವುದಿಲ್ಲ. ಏನೇ ಮಾಡಿದರೂ ಆ ಋಣ ತೀರಿಸೋಕೆ ಸಾಧ್ಯವಿಲ್ಲ...




(ರಜನಿ FBಯಿಂದ)

# ಕೃಷ್ಣನ ಹೆಸರಿಟ್ಟು ಕೊಂಡಿದ್ದರೂ ಆಟ ಆಡಲಾರದೆ ಔಟಾಗಿ ನಿರ್ಗಮಿಸಿದ ಮುರಳಿ ಮೋಹನ್!

ಶಿವರಾಜ್‌ಕುಮಾರ್, ರವಿಚಂದ್ರನ್, ಉಪೇಂದ್ರ ಮುಂತಾದ ಘಟಾನುಘಟಿ ಸ್ಟಾರ್‌ಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದ 'ಉಪ್ಪಿ ಕ್ಯಾಂಪ್'ನ ಪ್ರತಿಭೆ ಮುರಳಿ ಮೋಹನ್ ಅವರು, ಸರಿ ಸುಮಾರು 36 ವರ್ಷಗಳಿಂದ ಕನ್ನಡ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದರು. ಓಂ, ಶ್, ಚಿತ್ರಗಳಿಗೆ ಸಹ ನಿರ್ದೇಶಕರಾಗಿ ದುಡಿದು, ನಂತರ ಸಂತು, ಮಲ್ಲಿಕಾರ್ಜುನ, ಆದರೆ, ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದರು. ಬೆಂಗಳೂರಿನ ಜೆ.ಸಿ. ರೋಡ್ ಟ್ರಸ್ಟ್‌ವೆಲ್ ಆಸ್ಪತ್ರೆಯಲ್ಲಿ ಅವರು ಮೃತಪಟ್ಟಿದ್ದಾರೆ.



ಹಿರಿಯ ನಿರ್ದೇಶಕ ಮುರಳಿ ಮೋಹನ್ ನಿಧನದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ನಟ ಉಪೇಂದ್ರ ಅವರು ಭೇಟಿ ನೀಡಿ ಅಂತಿಮ ದರ್ಶನ ಪಡೆದರು. ಈ ವೇಳೆ ಮುರಳಿ ಮೋಹನ್ ಅವರ ಜತೆಗಿನ ಒಡನಾಟ ನೆನದು ಉಪೇಂದ್ರ ಭಾವುಕರಾದರು. ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದ ಹಿರಿಯ ನಿರ್ದೇಶಕ ಎಸ್. ಮುರಳಿ ಮೋಹನ್ (57) ಅವರು, ಬೆಂಗಳೂರಿನ ಜೆ.ಸಿ. ರೋಡ್ ಟ್ರಸ್ಟ್‌ವೆಲ್ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ಅವರಿಗೆ ವರ್ಷ ವಯಸ್ಸಾಗಿತ್ತು.



ಹ್ಯಾಟ್ರಿಕ್ ಹೀರೋ ಶಿವರಾಜ್ ಕುಮಾರ್, ಕ್ರೇಜಿ ಸ್ಟಾರ್ ರವಿ ಚಂದ್ರನ್, ರಿಯಲ್ ಸ್ಟಾರ್ ಉಪೇಂದ್ರ, ಮುಂತಾದ ಘಟಾನುಘಟಿ ನಟರಿಗೆ ಮುರಳಿ ಮೋಹನ್ ಆ್ಯಕ್ಷನ್ ಕಟ್ ಹೇಳಿದ್ದರು. 36 ವರ್ಷಗಳಿಂದ ಚಿತ್ರರಂಗದಲ್ಲಿ ಸಕ್ರಿಯರಾಗಿದ್ದ ಅವರು ಕಿಡ್ನಿ ಸಮಸ್ಯೆಯಿಂದ ಬಳಲುತ್ತಿದ್ದರು.

ಕಿಡ್ನಿ ಸಮಸ್ಯೆ ಕಾಣಿಸಿಕೊಂಡ ಹಿನ್ನೆಲೆಯಲ್ಲಿ ಅವರು ಐದಾರು ವರ್ಷಗಳಿಂದ ಚಿಕಿತ್ಸೆ ಪಡೆಯುತ್ತಿದ್ದರು ಎನ್ನಲಾಗಿದೆ. ಈ ಹಿಂದೆ ಕಿಡ್ನಿ ಕಸಿ ಶಸ್ತ್ರಚಿಕಿತ್ಸೆಗೆ ಆರ್ಥಿಕ ನೆರವಿನ ಅವಶ್ಯಕತೆಯಿದೆ ಎಂದು ಅವರು ಮನವಿ ಮಾಡಿದ್ದರು. ಶಸ್ತ್ರಚಿಕಿತ್ಸೆಗೆ 30-35 ಲಕ್ಷ ರೂ. ಬೇಕಾಗಿತ್ತು. ಸುದೀಪ್, ಉಪೇಂದ್ರ ಧನಸಹಾಯ ಮಾಡಿದ್ದರು. ಆದರೆ ಬಹು ಅಂಗಾಂಗ ಇವರು ವೈಫಲ್ಯದಿಂದ ನಿಧನರಾಗಿದ್ದಾರೆ.

ಉಪೇಂದ್ರ ಜತೆಗೆ 'ಶ್', 'ಓಂ' ಚಿತ್ರಗಳಲ್ಲಿ ಸಹನಿರ್ದೇಶಕನಾಗಿ ಕೆಲಸ ಮಾಡಿದ್ದ ಮುರಳಿ ಮೋಹನ್ ಬಳಿಕ ಉಪೇಂದ್ರ ನಟನೆಯ 'ನಾಗರಹಾವು', ಶಿವ ರಾಜ್ ಕುಮಾರ್ ನಟನೆಯ ಇಸಂತಇ, ರವಿಚಂದ್ರನ್ ಅಭಿನಯದ 'ಮಲ್ಲಿಕಾರ್ಜುನ' ಮುಂತಾದ ಚಿತ್ರಗಳಿಗೆ ಆ್ಯಕ್ಷನ್ ಕಟ್ ಹೇಳಿದ್ದರು. ಬಹುಮುಖ ಪ್ರತಿಭೆ ಹೊಂದಿದ್ದ ಮುರಳಿ ಮೋಹನ್ ನಿರ್ದೇಶಕ ಮಾತ್ರವಲ್ಲದೆ ನಟ ಹಾಗೂ ಸಂಭಾಷಣೆಕಾರರೂ ಆಗಿದ್ದರು. ಸಾಕಷ್ಟು ಸಿನಿಮಾಗಳನ್ನು ನಿರ್ದೇಶಿಸಿ, ನಟಿಸಿ, ಸಂಭಾಷಣೆ ಬರೆದಿದ್ದರು. ಅವರು 'ರಾಜ್' ಚಿತ್ರದಲ್ಲಿ ಪುನೀತ್ ರಾಜ್ ಕುಮಾರ್ ಜತೆಗೆ ಅಭಿನಯಿಸಿ ಸೈ ಎನಿಸಿಕೊಂಡಿದ್ದರು.

ಈ ಹಿಂದೆ ಸಂದರ್ಶನವೊಂದರಲ್ಲಿ ಅವರು, "ನನ್ನ ಆರೋಗ್ಯ ಸರಿಯಾಗಿಲ್ಲ, ಈ ಮೊದಲು ಡಯಾಲಿಸ್ ಮಾಡಿಸಿಕೊಳ್ಳುತ್ತಿದ್ದೆ. ಆದರೆ ಈಗ ಅದು ಟ್ರಾನ್ಸ್ಪ್ಲಾಂಟೇಶನ್ ಹಂತಕ್ಕೆ ಬಂದಿದೆ. ಈಗ ತಿಂಗಳಿಗೆ 30 ಸಾವಿರ ರೂ. ಖರ್ಚಾಗುತ್ತಿದೆ. ಹೊಸ ಕಿಡ್ನಿ ಹಾಕಿಸಿಕೊಳ್ಳಲು 30-35 ಲಕ್ಷ ರೂ. ಬೇಕು. ಆದರೆ, ಸದ್ಯದ ಪರಿಸ್ಥಿತಿಯಲ್ಲಿ ನನ್ನಿಂದ ಅದು ಸಾಧ್ಯವಾಗುತ್ತಿಲ್ಲ" ಎಂದಿದ್ದರು. ಇದೀಗ ಪ್ರತಿಭಾವಂತ ನಿರ್ದೇಶಕನನ್ನು ಸ್ಯಾಂಡಲ್‌ವುಡ್ ಕಳೆದುಕೊಂಡಿದ್ದು, ಅನೇಕ ಗಣ್ಯರು ಸಂತಾಪ ಸೂಚಿಸಿದ್ದಾರೆ. ☯

# ನಿನಗೂ ಇದಕ್ಕೂ ಸಂಬಂಧ ಇಲ್ಲಾ... ನಿಲ್ಲು ಸೈಡ್‌ಗೆ!



ಮೊನ್ನೆ ಸುಪ್ರೀಂನಲ್ಲಿ ಬೇಲ್ ರದ್ದಾಗಿ ಪೊಲೀಸರು ದರ್ಶನ್ ಬೆನ್ನತ್ತಿ ಕತ್ರಿಗುಪ್ಪೆ ಪ್ರೆಸ್ಟೀಜ್ ಅಪಾರ್ಟ್‌ಮೆಂಟ್ ಬಳಿ ಹೋಗಿದ್ದಾಗ, ಆ ಮನೆಯಿಂದ ಧನ್ವೀರ್ ಗೌಡ ಹೊರಗೆ ಬಂದು ಏನೋ ತಿದಿ ಹೊತ್ತಲು ಟ್ರೈ ಮಾಡಿದನಂತೆ! ಆಗ ಎಸಿಪಿ ಚಂದನ್ ಅವರ ಖಾಕಿ ಭಂಟರು ನಿನಗೂ ಇದಕ್ಕೂ ಸಂಬಂಧ ಇಲ್ಲಾ, ಸೈಡ್‌ಗೆ ಹೋಗು... ಇಲ್ಲಾಂದ್ರೆ ನಿನ್ನನ್ನು ಅರೆಸ್ಟ್ ಮಾಡಿ ಕಾನೂನು ಕ್ರಮ ಜರುಗಿಸಬೇಕಾಗುತ್ತೆ ಎಂದರಂತೆ!! ಅಷ್ಟರಲ್ಲಿ ವಿಜಯಲಕ್ಷ್ಮಿ ಅತ್ತಿಗೆಯವರ ಆಗಮನವಾಗಿ, ಸರ್ ನಮ್ ಲಾಯರ್ ಜೊತೆ ಬರ್ತೇವೆ ನೀವು ಹೊರಡಿ ಅಂದ ರಂತೆ! ಅದಕ್ಕೆ ನಮ್ಮ ಪೊಲೀಸರು, ಇನ್ನು 15 ನಿಮಿಷ ಟೈಂ ಕೊಡ್ತೇವೆ, ಮರ್ಯಾದೆಯಾಗಿ ಬಂದು ಜೀಪ್ ಹತ್ತಿದ್ರೆ ಸರಿ ಮೇಡಂ, ಇಲ್ಲಾಂದ್ರೆ, ನಾವು ನಮ್ ಸ್ಟೈಲ್‌ನಲ್ಲಿ ಎತ್ತಾಕಂಡ್ ಹೋಗ್ತೇವೆ ಅಂದರಂತೆ!!

ಒಂದೆಡೆ ಕರ್ಮ.... ಇನ್ನೊಂದೆಡೆ ಕರ್ತವ್ಯ. ಕರ್ಮ ಬೆನ್ನತ್ತದೆ ಬಿಡುವುದಿಲ್ಲ, ಶಿಸ್ತಿನ ಸಿಪಾಯಿಗಳು ಕರ್ತವ್ಯ ಮರೆಯದೆ ಇರುವುದಿಲ್ಲ, ಕಾನೂನಿಗೆ ಜೈ, ಕರ್ನಾಟಕ ಪೊಲೀಸ್‌ಗೆ ಜೈ... ☯

# ಮನೆ ಹಾಳು ಮಾಡೋರಿಗೆ...

ಕಲಾವಿದರದವರಿಗೂ ಒಂದು ಸಂಸಾರವಿದೆ... ಅವರೂ ಮನುಷ್ಯರೇ... ಎಂಬುದನ್ನು ಕೆಲ ಮಾಧ್ಯಮಗಳು ಮರೆತುಬಿಡುತ್ತವೆ. ತಮ್ಮ ಬೇಳೆ ಬೇಯಿಸಿಕೊಳ್ಳಲೋಸ್ಕರ ಸಿಕ್ಕಿದ್ದನ್ನೆಲ್ಲ ಬರೆಯೋದು



ಯಾವ ನ್ಯಾಯ?! ಈಗೇನಾಗಿದೆ ಅಂದ್ರೆ, ನಟ ಕೃಷ್ಣ ಅಜಯ್ ರಾವ್ ಸಂಸಾರದ ವಿಚಾರ ಬೀದಿಗೆ ಬಿದ್ದಿದೆ! ಇನ್ನಾರು? ಮಾಧ್ಯಮದವರೇ ಬೀದಿಗೆ ತಂದಿಟ್ಟು ತಮಾಷೆ ನೋಡುತ್ತಿದ್ದಾರೆ!

ಅಜಯ್ ರಾವ್ ಬಗ್ಗೆ ನಿಮಗೇ ಗೊತ್ತಿದೆ. ಸೂಕ್ಷ್ಮ ಸಂವೇದನೆಯ ವ್ಯಕ್ತಿ. ತಾನಾಯಿತು ತನ್ನ ಸಿನಿಮಾ ಆಯಿತು ಎಂಬಂತಿರುವ ಉತ್ತಮ ವ್ಯಕ್ತಿ. ಇತ್ತೀಚಿಗೆ ನಿರ್ಮಾಪಕರಾಗಿ ಎರಡು ಸಿನಿಮಾ ನಿರ್ಮಿಸಿದ್ದರು. ಕೃಷ್ಣಲೀಲಾ ಹಿಟ್ ಆಯಿತು. ಯುದ್ಧಕಾಂಡ ಸೋತಿತು. ಈ ನೋವಿನಲ್ಲಿ ಇರುವಾಗಲೇ ಗಂಡ ಹೆಂಡತಿ ಮಧ್ಯೆ ಸೋಲಿನ (ದೊಡ್ಡ ಮೊತ್ತದ ಸಾಲ) ವಿಚಾರಕ್ಕೆ ಜಗಳ ಆಗಿದೆ, ಪತ್ನಿ ಸ್ವಪ್ನ ಮುನಿಸಿಕೊಂಡು ತವರು ಸೇರಿದ್ದಾಳೆ. ಇದನ್ನೇ ದೊಡ್ಡದು ಮಾಡಿ ಡೈವೋರ್ಸ್ ಅಂತೆಲ್ಲ ಬರೆದಿವೆ ಕೆಲವು ಅರಿವುಗೇಡಿಗಳು! ಪಾಪ, ಅಜಯ್ ರಾವ್ ಕೈಮುಗಿದು, ತಮ್ಮ ಖಾಸಗಿತನವನ್ನು ಗೌರವಿಸಿ ಪ್ಲೀಸ್... ಎಂದು ಗೋಗರೆದಿದ್ದಾರೆ. ಅವರ ಪತ್ನಿ ಸ್ವಪ್ನ ಕೂಡ ನಾವು ನಮ್ಮ ಸಂಸಾರವನ್ನು ಪುನರ್ ನಿರ್ಮಾಣ ಮಾಡಿಕೊಳ್ಳುತ್ತೇವೆ, ದಯವಿಟ್ಟು ಬೀದಿಗೆ ಎಳೆಯದಿರಿ ಎಂದು ವಿನಂತಿಸಿದ್ದಾರೆ! ☯


## ಪೊಲೀಸ್, ಕೋರ್ಟ್ ಹಾಗೂ ಮಾಧ್ಯಮ ಸಹಾಯವಾಣಿ

- ಗಂಡನಿಂದ ತೊಂದರೆಯೇ? ಪತ್ನಿಯಿಂದ ಕಿರುಕುಳವೇ?
- ಪ್ರೇಮಿಯಿಂದ ಬ್ಲ್ಯಾಕ್‌ಮೇಲ್ ಆಗುತ್ತಿದೆಯೇ?
- ಹೊಸದಾಗಿ ಮದುವೆಯಾಗಿ ಪತಿ ಪತ್ನಿ ಹೊಂದಾಣಿಕೆ ಇಲ್ಲದೆ ನಿಮಗೆ ಕೌನ್ಸಿಲಿಂಗ್ ಅಗತ್ಯವಿದೆಯೇ?
- ಅಣ್ಣ ತಮ್ಮಂದಿರ ನಡುವೆ, ಅಕ್ಕ ತಂಗಿಯರ ನಡುವೆ ಅಥವಾ ದಾಯದಿಗಳ ನಡುವೆ ಜಮೀನು-ಕೋರ್ಟ್ ವ್ಯಾಜ್ಯಗಳಿವೆಯೇ? ಪೊಲೀಸರು ನಿಮ್ಮ ದೂರರ್ಜಿ ತೆಗೆದುಕೊಳ್ಳುತ್ತಿಲ್ಲವೇ? ಅಥವಾ ಅರ್ಜಿಗೆ ಸರಿಯಾಗಿ ಸ್ಪಂದಿಸುತ್ತಿಲ್ಲವೇ?
- ಪೋಷಕರೇ, ನಿಮ್ಮ ಮಕ್ಕಳು ನಿಮ್ಮ ಆಸ್ತಿ ಪಾಸ್ತಿ ಹೊಡೆದುಕೊಂಡು ಊಟ ಹಾಕದೆ ಮನೆಯಿಂದ ಹೊರ ಹಾಕಿದ್ದಾರೆಯೇ?
- ಅಪರಿಚಿತ ಪುರುಷ/ಮಹಿಳೆ ಯಿಂದ ತೊಂದರೆ (ಬ್ಲ್ಯಾಕ್ ಮೇಲ್) ಆಗುತ್ತಿದೆಯೇ?
- ಮಹಿಳೆಯರೇ/ ಪುರುಷರೇ ಮಹಿಳಾ ಪೊಲೀಸ್ ಠಾಣೆ ಹಾಗೂ ಮಹಿಳಾ ಆಯೋಗದಿಂದ ನಿಮಗೇನಾದರೂ ಸಹಾಯ ಆಗಬೇಕೇ?
- ಹಣ ಕಾಸು ವ್ಯವಹಾರದಲ್ಲಿ ಮೋಸವಾಗಿ ವಸೂಲಿ ಮಾಡಲಾಗದೆ ಪರದಾಡುತ್ತಿದ್ದೀರಾ? ಅಥವಾ ಯಾರಾದರೂ ಸಾಲ ಕೊಟ್ಟು ಬಡ್ಡಿ ಚಕ್ರಬಡ್ಡಿ ವಿಧಿಸಿ ನಿಮ್ಮ ನೆಮ್ಮದಿ ಹಾಳುಗೆಡವಿದ್ದಾರ? ತಾಲೂಕು ಕಚೇರಿ, ನಾಡ ಕಚೇರಿ, ಸಬ್-ರಿಜಿಸ್ಟ್ರಾರ್ ಕಚೇರಿಯಲ್ಲಿ ನಿಮ್ಮ ಜಮೀನಿಗೆ ಸಂಬಂಧಪಟ್ಟ ಕೆಲಸವಾಗಬೇಕೆ?
- ಯಾರಾದರೂ ಪುಂಡ ಪೋಕರಿಗಳಿಂದ, ರೌಡಿಗಳಿಂದ, ರಾಜಕಾರಣಿಗಳಿಂದ ನಿಮಗೆ ತೊಂದರೆ ಇದೆಯೇ?

ಚಿಂತಿಸಬೇಡಿ – ಹೆದರಬೇಡಿ! ಯಾವುದೇ ಸಮಸ್ಯೆ ಇರಲಿ, ಈ ಎಲ್ಲಾ ಸಮಸ್ಯೆಗಳಿಗೆ 'ಕಾನೂನು' ಪರಿಧಿಯೊಳಗೆ ಹೋರಾಡಲು ಮತ್ತು ಗೆಲ್ಲಲು ನಿಮಗೆ ಸಲಹೆ ನೀಡಲು **'ಪೊಲೀಸ್ ನ್ಯೂಸ್ ಸಹಾಯವಾಣಿ'** ಸಿದ್ದವಿದೆ. ಸಂಬಂಧಪಟ್ಟ ಅಧಿಕಾರಿಗಳು/ ವಕೀಲರು/ ವ್ಯಕ್ತಿಗಳು/ಇಲಾಖೆಯೊಂದಿಗೆ ಮಾತನಾಡಿ ನಿಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಾನೂನು ಹೋರಾಟ ಮಾಡಲು ಬೇಕಾದ ಅತ್ಯುತ್ತಮ ಸಲಹೆ ಸೂಚನೆಗಳನ್ನು ಇಲ್ಲಿ ಕೊಡಲಾಗುತ್ತದೆ.

ಸಂಪರ್ಕಕ್ಕಾಗಿ

☎ 080-23588510 9513892666, 8884452699 policenewsreporter@gmail.com


Vol. 41 No. 11 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com